(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಬಿಜೆಪಿಯವರೆಲ್ಲಾ ನೈಸ್ ಕಂಪನಿಯ ಪಾರ್ಟಿಗೆ ಹೋಗಿದ್ದಾರೆ. ಅವರ್‍ಯಾಕೆ ಬರುತ್ತಾರೆ ಇಲ್ಲಿ? ಬಿಜೆಪಿ ಪಾರ್ಟಿಯವರು ನೈಸ್ ಕಂಪನಿ ಪಾರ್ಟಿಗೆ ಹೋಗಿದ್ದಾರೆ. ಆ ನೈಸ್ ಕಂಪನಿಯಪಾರ್ಟಿಗೆ ಬಿಜೆಪಿ ಶಾಸಕರು ಯಾರ್‍ಯಾರು ಹೋಗಿದ್ದರು ಎಂಬುದನ್ನು ಬಹಿರಂಗ ಪಡಿಸಬೇಕು.

ಅಧ್ಯಕ್ಷರು : ಆಯಿತು, ಮಾತನಾಡಿ ಮಾಧುಸ್ವಾಮಿಯವರೇ, ಡಾ॥ ಆಚಾರ್ಯರವರು ಇದ್ದಾರೆ, ಬೇರೆಯವರು ಬರುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಲ್ಲ ಸಾರ್, ಪಾಪ ಅವರು ಬಿಲ್ ಇಂಟ್ರಡ್ಯೂಸ್ ಮಾಡುವುದಕ್ಕೆ ಬಂದಿದ್ದಾರೆ.

ಅಧ್ಯಕ್ಷರು : ಇಲ್ಲ, ಅವರೂ ಕೂಡ ಹಿರಿಯ ಮಂತ್ರಿಗಳು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾವು ಈ ವಿಚಾರದ ಬಗ್ಗೆ ಸೋಮವಾರವೇ ಚರ್ಚೆ ಮಾಡಬೇಕಾಗಿದ್ದು, ಇವತ್ತು ತೆಗೆದುಕೊಂಡಿದ್ದೇವೆ. ಏಕೆಂದರೆ ಇಲ್ಲಿ ಮುಖ್ಯಮಂತ್ರಿಗಳು ಇರಬೇಕು, ವಿಷಯ ಅವರ ಮುಂದೆ ಚರ್ಚೆಯಾಗಬೇಕು. ಮಾನ್ಯ ಉಪ ಮುಖ್ಯಮಂತ್ರಿಗಳು ಇಲ್ಲಿ ಇರಬೇಕು. ಅವರ ಮುಂದೆ ಕೂಡ ಚರ್ಚೆಯಾಗಬೇಕು ಎಂದು.

ಅಧ್ಯಕ್ಷರು : ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈ ಗೋಳನ್ನು ಯಾರ ಮುಂದೆ ಹೇಳಿಕೊಳ್ಳುವುದು?

ಅಧ್ಯಕ್ಷರು : ಆಯಿತು, ಬರುತ್ತಾರೆ, ಪ್ರಾರಂಭ ಮಾಡಲಿ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್ ರವರು ನಿಮ್ಮ ಮುಂದೆ ಗೋಳು ಹೇಳಿಕೊಳ್ಳುತ್ತಾರೆ. ನೀವು ಯಾರ ಮುಂದೆ ಹೇಳಬೇಕು ಎಂದು ನಿಮಗೆ ತಿಳಿಯದ ಹಾಗೆ ಆಗಿದೆ.

5. ನಿಯಮ 69 ರ ಮೇರೆಗೆ

ವಿಷಯ : ಬಿ.ಎಂ.ಐ.ಸಿ. ಯೋಜನೆ ವಿಚಾರದ ಬಗ್ಗೆ (ಮುಂದುವರೆದ ಚರ್ಚೆ)

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಅಧ್ಯಕ್ಷರೆ, ಹೆಚ್ಚುವರಿಯಾಗಿ ಭೂಮಿಯನ್ನು ಕೆ.ಐ.ಎ.ಡಿ.ಬಿ. ಯವರು ಅಕ್ವೈರ್ ಮಾಡಿದ್ದಾರೆ. ಅದನ್ನು ಅನಗತ್ಯವಾಗಿ ನೈಸ್‌ನವರಿಗೆ ಕೊಟ್ಟಿದ್ದಾರೆ ಎಂದು ಹೇಳಿ ಏನು ವಾದ ಮಾಡಿದ್ದೆವು, ಅದನ್ನು ತಮ್ಮ ಗಮನಕ್ಕೆ ತರುತ್ತಾ, ಇದರಲ್ಲಿ ಬಹಳ ಜನ ಶಾಮೀಲಾಗಿದ್ದಾರೆ. ಅದರಲ್ಲೇನೂ ಎರಡು ಮಾತಿದೆ ಎಂದು ಭಾವಿಸುವ ಹಾಗೆ ಇಲ್ಲ. ಅವರ ವಿರುದ್ಧ ಒಂದು ಆ್ಯಕ್ಷನ್ ಆಗಬೇಕೆಂದು ಹೇಳಿ ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಮತ್ತು ಇದರ ಜೊತೆಗೆ ಈ ಪ್ರಾಜೆಕ್ಟ್ ಆಗುವುದಕ್ಕೆ ಮೊದಲೇ ಕ್ಲಿಯರೆನ್ಸ್ ಕೊಡಬೇಕಾದರೆ ಅಲ್ಲಿ ವೈಲ್ಡ್ ಲೈಫ್ ಏರಿಯಾ ಬರುವುದಿಲ್ಲ, ಅಲ್ಲಿ ಫಾರೆಸ್ಟ್ ಲ್ಯಾಂಡ್ ಇನ್‌ವಾಲ್ವ್ ಆಗುವುದಿಲ್ಲ ಅಲ್ಲಿ ಯಾವುದೇ ರೀತಿಯಲ್ಲಿ ಪಲ್ಯೂಷನ್ ಆಗುವುದಿಲ್ಲವೆಂದು ಹೇಳಿ ಕ್ಲಿಯರೆನ್ಸ್ ಕೊಟ್ಟವರ ಮೇಲೂ ಕೂಡ ಕ್ರಮ ಜರುಗಿಸಬೇಕಾಗಿರುತ್ತದೆ. ಮೊನ್ನೆ ಹೇಳಿದ್ದಾರೆ. ಇವನು ಏರಿಯಾಗಳಲ್ಲಿ ನೈಸ್ ಹೋಗುತ್ತದೆ, ಅಲ್ಲಿ ವೈಲ್ಡ್ ಲೈಫ್‌ಗೆ ಬಾರಿ ತೊಂದರೆಯಾಗಿದೆ ಎಂದು. ಆ ಅಧಿಕಾರಿಗಳು ಯಾರು? ಅವತ್ತು ವೈಲ್ಡ್ ಆ್ಯಕ್ಟಿವಿಟೀಸ್ ಇಲ್ಲವೆಂದು ಹೇಳಿ, ಈಗ ರಾಜ್ಯದಲ್ಲಿ ಹೇಳುತ್ತಿದ್ದಾರೆ. ನಿನ್ನೆ ಯಾವುದೋ ಒಂದು ಘಟನೆಗೆ ಇಲ್ಲಿ ಭಾರಿ ತೊಂದರೆ ಆಗಿಬಿಟ್ಟಿದೆ ವೈಲ್ಡ್‌ಲೈಫ್‌ಗೆ, ಅಲ್ಲಿರುವಂತಹ ಪ್ರಾಣಿಗಳಿಗೆ ಎಂದು ಹೇಳುತ್ತಿದ್ದಾರೆ. ಮತ್ತು ಇಡೀ ಪ್ರಾಜೆಕ್ಟ್‌ನಲ್ಲಿ ಫಾರೆಸ್ಟ್ ಲ್ಯಾಂಡೇ ಬರುವುದಿಲ್ಲ ಎಂದು ಹೇಳಿ ಅಫಿಡವಿಟ್ ಹಾಕಿದ್ದಾರೆ. ಅಲ್ಲಿ ಸುಮಾರು ನೂರು ಚಿಲ್ಲರೆ ಎಕರೆ ಫಾರೆಸ್ಟ್ ಲ್ಯಾಂಡ್ ಕೂಡ ಹೋಗಿದೆ. ಇದರ ಜೊತೆಗೆ ದುರಂತವೆಂದರೆ 170 ಎಕರೆ ಫಾರೆಸ್ಟ್ ಲ್ಯಾಂಡ್ ಇದರಲ್ಲಿ ಸೇರಿಕೊಂಡಿದೆ ಶ್ರೀನಿವಾಸ ಗೌಡರೇ ಕೊಡುವುದಕ್ಕೆ ಬರುವುದಿಲ್ಲ.

ಶ್ರೀ ಕೆ. ಶ್ರೀನಿವಾಸ ಗೌಡ : ಒಂದು ನಿಮಿಷ ಯೀಲ್ಡ್ ಆದರೆ, ಫಾರೆಸ್ಟ್ ಲ್ಯಾಂಡ್ ಇಡೀ ದೇಶದಲ್ಲಿ ಒಂದು ಎಕರೆ ಕೊಡಬೇಕಾದರೆ ಸೆಂಟ್ರಲ್ ಗೌವರ್ನ್‌ಮೆಂಟ್ ಕ್ಯಾಬಿನೆಟ್‌ಗೆ ಹೋಗಿ ಕೊಡಬೇಕಾಗುತ್ತದೆ. ಇವರು ಹೇಳುವ ಪ್ರಕಾರ ಫಾರೆಸ್ಟ್ ಲ್ಯಾಂಡ್ ಕೊಟ್ಟಿದ್ದಾರೆ ಎಂದು ಅದು ಕಾನೂನಿಗೆ ವಿರುದ್ಧವಾಗಿದೆ. ಎಂದು ಇರುವುದನ್ನು ಹೇಳಬೇಕಾಗುತ್ತದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ರಾಮನಿಗೂ ಸೀತೆಗೆ ಏನು ಸಂಬಂಧ ಎಂದರೆ ಊರಿಗೆ ಹೋಗಿ ಕೇಳಿಕೊಂಡು ಬರುತ್ತೇನೆ ಅಂದ ಹಾಗಾಯಿತು. ಬೆಳಿಗ್ಗೆಯಿಂದ ಮಾತನಾಡುತ್ತಿರುವುದು...

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಬೆಳಿಗ್ಗೆಯಿಂದ ನಾವೆಲ್ಲಾ ಕಾನೂನನ್ನೂ ಉಲ್ಲಂಘನೆ ಮಾಡಿದ್ದಾರೆ ಎಂದು ಹೇಳುತ್ತಿದ್ದೇವೆ.

ಶ್ರೀ ಕೆ. ಶ್ರೀನಿವಾಸ ಗೌಡ : ಕಾನೂನು ಉಲ್ಲಂಘನೆ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಕೇಂದ್ರ ಸರ್ಕಾರದ ಕ್ಯಾಬಿನೆಟ್‌ಗೆ ಏನು ಅಧಿಕಾರ ಇದೆ, ಅದನ್ನು ಉಲ್ಲಂಘನೆ ಮಾಡುವುದಕ್ಕೆ ಯಾರಿಗೂ ಕೂಡ ಈ ದೇಶದಲ್ಲಿ ಸಾಧ್ಯವೇ ಇಲ್ಲ. ಇದನ್ನು ನೀವು ಮಹತ್ವವಿರಿಸಿ ಹೇಳುತ್ತಿರುವುದನ್ನು ನಾನು ಒಪ್ಪುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀನಿವಾಸ ಗೌಡರನ್ನು ಒಪ್ಪಿಸಬೇಕು ಎಂದು ನಾವು ಯಾರಾದರೂ ಹೇಳಬೇಕಾಗುತ್ತದಾ? We are revealing facts. ಅದೇ ಫ್ಯಾಕ್ಟ್, ನಿಮ್ಮ ಇಲಾಖೆಯವರು ಅಲ್ಲಿ ಫಾರೆಸ್ಟ್ ಲ್ಯಾಂಡ್ ಇದ್ದುದ್ದನ್ನು ಯಾವುದೇ ಕಾರಣಕ್ಕೆ ತೋರಿಸಲಿಲ್ಲ. ಹಾಗಾಗಿ ಪ್ರಾಜೆಕ್ಟ್ ಕ್ಲಿಯರೆನ್ಸ್ ಅನ್ನು ಮಾಡಿದರು. ನಿಮ್ಮ ಇಲಾಖೆಯವರು ಅಲ್ಲಿ ವೈಲ್ಡ್ ಲೈಫ್ ಆ್ಯಕ್ಟಿವಿಟೀಸ್ ಇದ್ದುದ್ದನ್ನು ಯಾವತ್ತೂ ತೋರಿಸಲಿಲ್ಲ. ಅದನ್ನೇ ಕೇಳುತ್ತಿರುವುದು. ಇನ್ನು ಮೂರನೆಯದಾಗಿ 10 ರೂಪಾಯಿಗೆ ಪರ್ ಎಕರೆಗೆ ಲೀಜ್ ಕೊಟ್ಟು ಜಮೀನನ್ನು ರಿಲೀಜ್

ಮಾಡಿ ನಮ್ಮ ಜಾಗಕ್ಕೆ ಅವರು ಹೋಗಿ ಬ್ಯಾಂಕ್‌ನಲ್ಲಿ 'ಪ್ಲೆಡ್ಜ್' ಮಾಡಿ ಸಾಲ ತೆಗೆದುಕೊಂಡಿದ್ದಾರೆ. ಅಫ್‌ಕೋರ್ಸ್ ಪ್ರಾಜೆಕ್ಟ್‌ಗೆ ನಾವು ಕಂಫರ್ಟ್ ಕೊಡಬೇಕು ಎಂದು ಹೇಳಿ ಅಗ್ರಿಮೆಂಟ್‌ನಲ್ಲಿ ಇದೆ. ಆದರೆ ನಮ್ಮದೇ ಜಮೀನಿನ ಮೇಲೆ ಅದನ್ನು ಪ್ಲೆಡ್ಜ್ ಮಾಡಿ ಅವರು ಸಾಲ ತೆಗೆದುಕೊಂಡಾಗ, ಯಾರು ಅದಕ್ಕೆ ಪರ್ಮಿಷನ್ ಕೊಟ್ಟರು. ಅವರ ಮೇಲೆ ಕ್ರಮ ಜರುಗಿಸಬೇಕು ಎಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಏಕೆಂದರೆ, ಆಗ ಆ ಪ್ರಶ್ನೆನೇ ಇರಲಿಲ್ಲ. This is a project. ಒಂದೇ ಒಂದು ಮಾತನ್ನು ಮಾನ್ಯ ಉದಾಸಿಯವರು ಅವತ್ತು ಅಸೆಂಬ್ಲಿ ಮತ್ತು ಕೌನ್ಸಿಲ್‌ನಲ್ಲಿ ಹೇಳಿದ್ದಾರೆ, ಒಂದೇ ಒಂದು ರೂಪಾಯಿ ಕರ್ನಾಟಕ ಸರ್ಕಾರದ್ದು ಇನ್‌ವಾಲ್ವ್ ಆಗದ ರೀತಿಯಲ್ಲಿ ಆಗುತ್ತಿರುವಂತಹ ಒಂದು ಯೋಜನೆ ಎಂದು. ಅಂಥಾದ್ದರಲ್ಲೇ ನೀವು ಸ್ಟಾಂಪ್ ಡ್ಯೂಟಿಗೆ ಎಗ್ಸಂಪ್‌ಷನ್‌ನಲ್ಲಿ ನೂರು ಚಿಲ್ಲರೆ ಕೋಟಿ ರೂಪಾಯಿಗೆ ಕೊಟ್ಟು ನಷ್ಟ ಮಾಡಿದ್ದೀರಿ. ನೀವು 10 ರೂಪಾಯಿಯಂತೆ ನಮ್ಮ ಲ್ಯಾಂಡ್ ಅನ್ನು ಲೀಜ್‌ಗೆ ಕೊಡುತ್ತೀರಿ. ನೀವು 2014 ರೊಳಗೆ 1999ನೇ ಇಸವಿಯದು ಡಿಸ್ಟ್ರಿಕ್ಟ್ ಗೈಡೆಡ್ ವ್ಯಾಲ್ಯೂನಲ್ಲಿ ಅವರಿಗೆ ಜಾಗ ಕೊಡಿ ಎಂದು ಆರ್ಡರ್ ಮಾಡುತ್ತೀರಿ. ನಿಮ್ಮ ಎಂಓಯು ನಲ್ಲಿ ಸ್ಪಷ್ಟವಾಗಿ ಹೇಳುತ್ತೀರಿ. It has to be at sale price ಅಂತ. ಪ್ರಕಾಶ್ ಸಾಹೇಬರೇ ಮಾರ್ಕೆಟ್ ವ್ಯಾಲ್ಯೂನಲ್ಲಿ ಆತ ಎಲ್ಲಾ ಜಮೀನನ್ನು ಪ್ರೊಕ್ಯೂರ್ ಮಾಡಬೇಕು ಎನ್ನುವುದನ್ನು ನೀವು ಟೆನ್ ರೂಪೀಸ್‌ನಲ್ಲಿ ಕೊಟ್ಟು ಅದನ್ನು ಪ್ಲೆಜ್ಡ್ ಮಾಡಿ ICICI ಬ್ಯಾಂಕಿನಿಂದ ನೀವು ಸಾಲ ತೆಗೆದುಕೊಳ್ಳುವುದಕ್ಕೆ ಏನು ಅವಕಾಶ ಮಾಡಿಕೊಟ್ಟಿರಿ. ನಾನು ಅವತ್ತೇ ಹೇಳಿದ್ದೇನೆ. ಇದರ ಬಗ್ಗೆ ತನಿಖೆಯಾಗಬೇಕಾಗುತ್ತದೆ ಎಂದು ಇನ್ನು ಈ ಜಾಗ ಎಕ್ಸೆಸ್ ಕೊಟ್ಟಿರುವಂತಹ ಡೇಟ್‌ಗಳನ್ನು ಹೇಳುತ್ತೇನೆ. ದಿ: 3.4.97, ದಿ: 14.10.98, ದಿ: 22.5.2004 ಈ ದಿನಾಂಕಗಳಲ್ಲಿ ಮೊದಲು 18,313 ರಿಂದ 20,193 ಎಕರೆಗೆ ಹೋಯಿತು. ಆಮೇಲೆ 18,313 ರಿಂದ 23,846 ಎಕರೆಗೆ ಹೋಯಿತು. ಆಮೇಲೆ 18,313 ರಿಂದ 29,258 ಎಕರೆಗೆ ಹೋಯಿತು.

3.30 P.M.

ಆ ಕಾಲದಲ್ಲಿ ಕೆಐಎಡಿಬಿ ನಲ್ಲಿ ಇದ್ದಂಥ ಅಧಿಕಾರಿಗಳು, they have to be brought before law. ಇದರಲ್ಲಿ ಏನೂ ರಾಜಿ ಇಲ್ಲ. ಇವರು ಏಕೆ ಕೊಟ್ಟರು? ಹೇಗ ಕೊಟ್ಟರು ಎಂಬುದನ್ನು ಹೇಳಲೇ ಬೇಕು. ಆ decision ಆಗಿರುವುದು; ಏಕೆಂದರೆ ಇಲ್ಲಿ ನಮ್ಮ ಬಳಿ ಕ್ಲಿಯರ್ ಆಗಿ ಇದೆ, ಇದು 20,193 ಎಕರೆಯನ್ನು ನಾವು ಅವರಿಗೆ ಕೊಡಬೇಕಾಗುತ್ತದೆಂದು ಕಮಿಟ್ ಮಾಡಿಕೊಂಡಿದ್ದೇವೆ. ದಿ: 14.10.1998ಗೆ 23,846 ಆಯಿತು, ಆಮೇಲೆ ಅದು ದಿ: 22.5.2005ಗೆ 29,258 ಎಕರೆಗಳಾಯಿತು. ತಾವು ತಕ್ಷಣ ಇದನ್ನು ಎನ್‌ಕ್ವಾಯರಿಗೆ ಹಾಕಿಸಿ, ಅವರ ಮೇಲೆ ತನಿಖೆ ಆರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಈ ಭಾಗದಲ್ಲಿ ಏನಾಗಿದೆಯೆಂದರೆ, ಅವನು ಮೊದಲೇ ರೋಡ್ ಮಾಡಬೇಕು, ಅನಂತರ ಟೌನ್ ಶಿಫ್‌ಗೆ ಹೋಗಬೇಕು. ರೋಡಿನಲ್ಲಿ 30 years toll ತೆಗೆದುಕೊಳ್ಳಬೇಕು. ನಾನು ಪ್ರಾರಂಭದಲ್ಲೇ ಹೇಳಿದೆ, ಈ ಪ್ರಾಜೆಕ್ಟ್ ಮಾಡಿದ್ದೇನೆ ಬರೀ ರಸ್ತೆ ಎಂದು ಅಲ್ಲ, ಕಾರಿಡಾರ್ ಎಂದು ಮಾಡಿದ್ದು. ಈ ಕಾರಿಡಾರ್ ಎಂದು ಮಾಡಿದ್ದು. ಈ ಕಾರಿಡಾರ್ ಅನ್ನು ಮಾಡುವಾಗ ಬಹಳ

ಉದಾತ್ತವಾದ ಭಾಷಣವನ್ನು ಅಸೆಂಬ್ಲಿಯಲ್ಲಿ, ಕೌನ್ಸಿಲ್‌ನೊಳಗೆ ಮಾಡಿದರು. congestion of Bangalore, 2001-2002ಗೆ 80 ಲಕ್ಷ ಆಗಿ ಬಿಡುತ್ತದೆ. ಅಷ್ಟರೊಳಗೆ ಈ ಜನಸಂಖ್ಯೆಯನ್ನು defuse ಮಾಡಬೇಕು, ಇಂಡಸ್ಟ್ರೀಸ್‌ಗಳನ್ನು ಏನಾದರೂ ಮಾಡಿ ಮೈಸೂರು ಸಿಟಿ ಕಡೆಗೆ ತೆಗೆದುಕೊಂಡು ಹೋಗಬೇಕು. ಇವರಿಗೆ ರೋಡ್‌ನಲ್ಲಿ ಲಿಂಕ್ ಮಾಡಿಕೊಡಬೇಕು, ಒಂದು ಗಂಟೆ, ಮುಕ್ಕಾಲು ಗಂಟೆಗೆ ಮೈಸೂರು, ಬೆಂಗಳೂರು ಪ್ರಯಾಣವನ್ನು ಮುಗಿಸಬೇಕು. ಆ ಪ್ರಯಾಣ ಅವರು ಸಿಟಿಯೊಳಗೆ ಎಲ್ಲಿ ಬಂದು ರೀಚ್ ಆಗಬೇಕಾಗಿರುತ್ತದೆ. ಅಲ್ಲಿ ಅವರು ರೀಚ್ ಆಗುವುದಕ್ಕೆ peripheral road ಲಿಂಕ್ ರೋಡುಗಳನ್ನು ಮಾಡಬೇಕೆಂದು ಹೇಳಿ ಮಾಡಿದಂತಹ ಪ್ರಾಜೆಕ್ಟ್ ಇದು. ಈ ಪ್ರಾಜೆಕ್ಟ್ ಆರಂಭ ಮಾಡಬೇಕಾಗಿದ್ದದ್ದು ಮೈಸೂರು ಕಡೆಯಿಂದ, ರಸ್ತೆಯನ್ನು ಮೈಸೂರು ಕಡೆಯಿಂದ ಶುರು ಮಾಡಬೇಕಾಗಿತ್ತು. ನೀವು ಏನು ಇಲ್ಲಿ ಬೆಂಗಳೂರಿನಲ್ಲಿ 9.1 ಕಿ.ಮೀ. ರೋಡ್ ಆದಮೇಲೆ, ಇಲ್ಲಿ ಅಸೆಂಬ್ಲಿ ಬರುತ್ತೆ ಎಂದಾಗ, ನಿನ್ನೆ ಅವರು ಹೋಗಿದ್ದಾರೆ. ಮೈಸೂರು ಸುತ್ತಮುತ್ತ ಜಮೀನು ಸಿಗುತ್ತದೆ. ನಾವು ಆ ಕಡೆಯಿಂದ ರೋಡ್ ಮಾಡಿಕೊಂಡು ಬರುತ್ತೇವೆಂದು ಹೋಗಿದ್ದಾರೆ, ಮತ್ತೆ ಟೌನ್ ಶಿಫ್ಸ್ ಏಳು ಮಾಡಬೇಕಾದರೆ, ಬೆಂಗಳೂರಿನಿಂದ ಆದಷ್ಟು ಆಚೆಗೆ ಮಾಡಬೇಕಾದ್ದನ್ನು ಉಳಿಸಿಕೊಳ್ಳಬೇಕಾಗಿತ್ತು. ನಮ್ಮ ಇಲಾಖೆಯವರು ಅಲ್ಲಿ ಮೂರು ಮತ್ತು ಆರನೇ ಟೌನ್ ಶಿಫ್ಸ್‌ಅನ್ನು ರದ್ದು ಮಾಡಬೇಕಾದರೆ, ನೋಡಿ ಮಾಡಬೇಕಾಗಿತ್ತು. ಬಿಡದಿ ಹತ್ತಿರ, ರಾಮನಗರದ ಹತ್ತಿರ, ಆಗುವಂತಹ ಟೌನ್ ಶಿಫ್ಸ್‌ಗಳನ್ನು ಆದಷ್ಟು ಅವಾಯ್ಡ್ ಮಾಡಿ, ಆ ಕಡೆಗೆ ಹೋಗಬೇಕಾಗಿತ್ತು, ಏಕೆಂದರೆ Bidadi is now almost city, Sir. ಈಗ, ಅಲ್ಲಿ ಏನು ಟೌನ್ ಶಿಫ್ಸ್ ಮಾಡುತ್ತೀರಿ, ಮಾತನಾಡುವ ಅಗತ್ಯವೇ ಇಲ್ಲ. It is already a city. ಬಿಡದಿ ಹತ್ತಿರ ಬಂದಿದ್ದ ಟೌನ್ ಶಿಫ್ಸ್, ಮತ್ತು ರಾಮನಗರದ ಹತ್ತಿರ ಏನು ಟೌನ್ ಶಿಫ್ಸ್ ಬರುತ್ತಿತ್ತು. ಇದನ್ನು ತಪ್ಪಿಸಿ ಏನಾದರೂ ಶ್ರೀರಂಗಪಟ್ಟಣದ ಕಡೆಗೆ, ಪಾಂಡವಪುರದ ಕಡೆಗೆ, ಈ ಕಡೆಗಳಲ್ಲಿ ಏನಾದರೂ ಟೌನ್ ಶಿಫ್ಸ್‌ಗಳು ಬೆಳೆದಿದ್ದರೆ, congestion ತಪ್ಪಿಸುವುದಕ್ಕೆ ಆಗುತ್ತದೆಂದು ಹೇಳುವುದಕ್ಕೆ ಒಂದು ಅವಕಾಶ ಆಗುತ್ತಿತ್ತು. Already developed 'ಏರಿಯಾದಲ್ಲಿ ನೀವು ಆತನಲ್ಲಿ ಅಗ್ರಿಮೆಂಟ್ ಅನ್ನು ಮಾಡಿಕೊಂಡು, ಟೌನ್‌ಶಿಫ್ಸ್ ಮಾಡುವುದಕ್ಕೆ ಹೊರಟ್ಟಿದ್ದೂ ಕೂಡ ಅತ್ಯಾಚಾರನೇ, ಅದರಲ್ಲಿ ಏನೂ ಎರಡು ಮಾತು ಇಲ್ಲ. ಇದು ಯಾರಿಗೆ ಬೇಕಾಗಿತ್ತು? ಈ ಬಿಡದಿಯಲ್ಲಿ, ನೆಲಮಂಗಲದಲ್ಲಿ, ನನ್ನ ಸ್ನೇಹಿತರು ಯಾರೋ ಕೇಳುತ್ತಿದ್ದರು. ನಾವು ಇಲ್ಲಿ ಹೈಕ್ಲಾಸ್ ರೋಡ್ ಮಾಡಿಕೊಟ್ಟುಬಿಡುತ್ತೇವೆ. ಇಲ್ಲಿಂದ ನೆಲಮಂಗಲಕ್ಕೆ peripheral road ಹೆಸರಿನಲ್ಲಿ, ರಿಂಗ್ ರೋಡ್ ಹೆಸರಿನಲ್ಲಿ, ಅಥವಾ ಲಿಂಕ್ ರೋಡ್ ಹೆಸರಿನಲ್ಲಿ ನಮಗೆ ಎಂಟು ಸಾವಿರ, ಒಂಭತ್ತು ಸಾವಿರ ಎಕರೆ ಜಮೀನನ್ನು ಕೊಟ್ಟರೆ ಸಾಕು ಎಂದು ಹೇಳಿದರು. ಅದಕ್ಕೆ ಬೇಡಪ್ಪಾ ಐದು ಸಾವಿರ ಎಕರೆ ಜಮೀನನ್ನು ಕೊಟ್ಟರೆ ಸಾಕು, ನಾವು ಧೀಂ ಆಗಿ ಇರುತ್ತೇವೆ. ಇಲ್ಲಿಂದ ನಾವು ಹಾಸನದವರೆಗೂ ರೋಡ್ ಮಾಡಿಕೊಟ್ಟು ಹೋಗುತ್ತೇವೆ, ಎಂದು ಹೇಳಿದರು. ನೀವು ನೆಲಮಂಗಲಕ್ಕೆ ಟೌನ್ ಶಿಫ್ ತರುವುದಾದರೆ, ಬಿಡದಿಗೆ ತರುವುದಾದರೆ ನೀವು ದೇವನಹಳ್ಳಿಗೆ ತರುವುದಾದರೆ, congestion avoid ಎಂದು ನೀವು ಎಲ್ಲಿ ಹೇಳುತ್ತೀರಿ? ಹಾಗಾಗಿ ಇಲ್ಲಿ

ಆಗಿರುವಂತಹ ತಪ್ಪನ್ನು ಸರಿ ಪಡಿಸಬೇಕಾಗುತ್ತದೆ. ಮೂರನೆಯದು ಆ ಕಂಪೆನಿ ಈಕ್ವಿಟಿ ಇಲ್ಲದೇ ಶುರುವಾಗಿರುವ ಕಂಪೆನಿ. ಬ್ಯಾಂಕ್‌ನವರೂ ಕೂಡ, ಇವರನ್ನು ಇವತ್ತು ಈ ಎನ್‌ಕ್ವಾಯರಿಯಲ್ಲಿ ತರಬೇಕಾಗುತ್ತದೆ. ನಾನು ಒಂದು ಡೇಟನ್ನು ಕೊಡುತ್ತೇನೆ. ಅವರು ಒಂದು ಇನ್‌ಸ್ಟಾಲ್‌ಮೆಂಟ್‌ನಲ್ಲಿ 10 ಕೋಟಿ ರೂಪಾಯಿಗಳನ್ನು ಕೆಐಎಡಿಬಿಗೆ ಕಟ್ಟಿದ್ದಾರೆ. ಆಮೇಲೆ ಈಗ ನಮ್ಮ ಹತ್ತಿರ ಸಾಲವನ್ನು ತೆಗೆದುಕೊಂಡ ಮೇಲೆ 80 ಕೋಟಿ ರೂಪಾಯಿಗಳನ್ನು ಕೆಐಎಡಿಬಿಗೆ ಕಟ್ಟಲು ಬಂದಿದ್ದಾರೆ. ಅದನ್ನು ಬಿಟ್ಟರೆ ಸಾಲವನ್ನು ತೆಗೆದುಕೊಳ್ಳುವವರೆಗೆ, ಆತನು ಬ್ಯಾಂಕ್ ಈಕ್ವಿಟಿನಲ್ಲಿ ಇಲ್ಲವೇ ಇಲ್ಲ. ಇಲ್ಲದೇನೇ ಸ್ಟಾರ್ಟ್ ಆಗಿರುವ ಒಂದು ಫರ್ಮ್ ಇದು. 520 ಕೋಟಿ ರೂಪಾಯಿಗಳ ಶೇರು ನನ್ನದು ಇದೆಯೆಂದು ಹೇಳಿಕೊಂಡು, ವ್ಯವಹಾರವನ್ನು ಶುರು ಮಾಡಿದವರು, without equity ನಲ್ಲಿ ಮಾಡುತ್ತಿದ್ದರು. ಅವರಿಗೆ ಬ್ಯಾಂಕ್ ಅಸಿಸ್ಟೆನ್ಸ್ ಹೇಗೆ ಸಿಕ್ಕಿತು? ನೀವು letter of comfort ಹೇಗೆ ಕೊಟ್ಟಿದ್ದೀರಿ, ಈ ಎಲ್ಲಾ ವಿಚಾರಗಳ ಬಗ್ಗೆ, ಒಂದು ವ್ಯಾಪಕವಾದಂತಹ ತನಿಖೆಯನ್ನು ಈ ಸರ್ಕಾರ ಮಾಡಬೇಕಾಗುತ್ತದೆ, ಏಕೆಂದರೆ ಯಾರು ಬೇಕಾದರೂ ಬರಬಹುದಲ್ಲಾ, ಯಾರದೋ ಹೆಸರನ್ನು ಹೇಳಿಕೊಂಡು, ನಾನು ಹೇಳುತ್ತೇನೆ, ಕಲ್ಯಾಣಿ ಬಾಬಾರವರು ನನ್ನ ಸಂಬಂಧ, ನಾನು ರಿಲೇಟೆಡ್, ನಾನು ಕಲ್ಯಾಣಿ ಸ್ಟೀಲ್‌ನಲ್ಲಿ ಪಾರ್ಟ್‌ನರ್ ಎಂದು ಹೇಳಬಹುದಲ್ಲಾ. Whereas this man, who is this man? I have got greatest respect to Kalyani Baba. ಅದರಲ್ಲಿ ಏನೂ ಎರಡನೆಯ ಮಾಥು ಇಲ್ಲ. ಈ ರಾಜ್ಯದ ಕಲ್ಪನೆ ಇರುವವರು ಯಾರಾದರು ಒಬ್ಬರು, ಅವರ ಬಗ್ಗೆ ಕೆಟ್ಟ ಮಾತುಗಳನ್ನು ಆಡುವುದಕ್ಕೆ ಆಗುವುದೇ ಇಲ್ಲ. ಅವರ ಲೆಟರ್ ಹೆಡ್‌ನಲ್ಲಿ ಬರದುಕೊಂಡು ಬಂದು ಬಿಟ್ಟರೆ will be become Kalyani Baba? ನಾನು Bharat Forge letter-head ನಲ್ಲಿ ಬರೆದುಕೊಟ್ಟು ಬಿಟ್ಟು, Bharat Forge ಅಕೌಂಟ್ ತೆಗೆದುಕೊಂಡು ಹೋಗಿ, ನಾನು ಯು.ಟಿ.ಐ. ಮುಂದೆ ಕೊಟ್ಟು ಬಿಟ್ಟು Bharat Forge turnover is so much, Bharat Forge profit is so much, ಎಂದು ಹೇಳಿದರೆ, ನಿನ್ನದು ಏನೆಂದು ಹೇಳಬೇಕಲ್ಲಾ, What is his turnover as Nandi, NICEP? ಅದನ್ನು ಹೇಳೇ ಇಲ್ಲ. ಇಡೀ ಪ್ರಾಜೆಕ್ಟ್ ರಿಪೋರ್ಟ್ ಮಾಡಬೇಕಾದರೆ, Bharat Forge ನವರ ವ್ಯವಹಾರ, ಎಸ್‌ಎಟಿ ಯವರ ಇನ್ನೊಂದು ಕಂಪೆನಿಯವರ ವ್ಯವಹಾರವನ್ನು ಹೇಳಿರುವುದನ್ನು ಬಿಟ್ಟರೆ, What is his busines? What is his capital? ಎಲ್ಲೂ ಎಳಿಲ್ಲ. ಎಲ್ಲಾ ಕಡೆಗಳಲ್ಲೂ ಅವರನ್ನು ಬಳಸಿಕೊಂಡಿರುವುದು, ಪ್ರಾಜೆಕ್ಟ್ ಅನ್ನು ಅವರು ಸ್ಪಾನ್ಸರ್ ಮಾಡುತ್ತಾರೆಂದು ಹೇಳಿಕೊಂಡು ಬಂದಿರುವುದನ್ನು ಬಿಟ್ಟರೆ, ಬೇರೆ ಏನೂ ಆಗಿಲ್ಲವೆಂದು ನಾನು ಹೇಳುತ್ತಿದ್ದೇನೆ. ಈ ಕಂಪೆನಿಯನ್ನು ನೀವು ಎಂ.ಒ.ಯು.ಗೆ ಸಹಿ ಮಾಡಿದ "ನಂದಿ" ಇತ್ತು. ಅದನ್ನು ತಪ್ಪಿಸಿ "ನೈಸ್" ಮಾಡಿದ್ದೀರಿ, ಅವತ್ತೇ ದೊಡ್ಡ ಅಪರಾಧ ಈ ರಾಜ್ಯಕ್ಕೆ ಆಯಿತು. ಎರಡನೆಯ ಅಪರಾಧವನ್ನು ತಾವು ಯಾವಾಗ ಮಾಡಿದ್ದೀರಿ, ಎರಡನೆಯ ಅಪರಾಧವನ್ನು ನನಗೆ ಮತ್ತು ಮಾನ್ಯ ಜಿ.ವಿ. ಶ್ರೀರಾಮರೆಡ್ಡಿಯವರಿಗೆ ಮಾಡಿದ್ದೀರಿ. ನಾವು ನಿಮ್ಮನ್ನು ಕೋರ್ಟಿಗೆ ಬನ್ನಿಯೆಂದು ಕರೆದಿರಲಿಲ್ಲ, ಅಫಿಡೆವಿಟ್ ಹಾಕಿ, ನಮ್ಮ ರಕ್ಷಣೆಗೆ ಬನ್ನಿ ಎಂದು ಹೇಳಿರಲಿಲ್ಲ.

ನಮ್ಮ ಪಾಡಿಗೆ ನಾವು ಕೋರ್ಟಿಗೆ ಹೋಗಿದ್ದೆವು. ನಾನು ಈ ಮನೆಯಲ್ಲಿ ನಿಂತುಕೊಂಡು ಹೇಳುತ್ತೇನೆ. ಇವರು ಸರ್ಕಾರದವರು ಬಂದುಬಿಟ್ಟರು, ನಾವು ಅಫಿಡವಿಟ್ ಕೋರ್ಟ್ ಮುಂದೆ ಹಾಕುತ್ತೇವೆಂದು ಬಂದರು. ಅವರು ಏನೆಂದು ಅಫಿಡವಿಟ್ ಹಾಕುತ್ತಾರೆ? ಅವನಿಗೆ ಕೋರ್ಟ್ ಮುಂದೆ ಹಾಕುತ್ತೇವೆಂದು ಬಂದರು. ಅವರು ಏನೆಂದು ಅಫಿಡವಿಟ್ ಹಾಕುತ್ತಾರೆ? ಅವನಿಗೆ ನಮಗೆ ಕಾಂಟ್ರಾಕ್ಟ್ ಇಲ್ಲ ಎಂದು ಹಾಕಿದರು. ಆಗ ಕೋರ್ಟ್ ಛೀಮಾರಿ ಹಾಕಿದ್ದು ಯಾರಿಗೆ? ನನಗಲ್ಲ ಸರ್ಕಾರಕ್ಕೆ. ಆಗ ಮಾನ್ಯ ಆರ್.ವಿ. ದೇಶಪಾಂಡೆಯವರು ಮಂತ್ರಿಗಳಾಗಿ ಇದ್ದರು. ಕೋರ್ಟ್ ಏನೆಂದು ಛೀಮಾರಿ ಹಾಕಿತು? ನಿಮಗೆ ಅವರಿಗೂ ಕಾಂಟ್ರಾಕ್ಟ್ ಇಲ್ಲವೆಂದ ಮೇಲೆ, ಅಸೆಂಬ್ಲಿಯಲ್ಲಿ ಪ್ರಶ್ನೆಗೆ ಹೇಗೆ ಉತ್ತರವನ್ನು ಹೇಳಿದ್ದೀರಿ? ಫ್ರೇಮ್‌ವರ್ಕ್ ಅಗ್ರಿಮೆಂಟ್ ಅನ್ನು ಹೇಗೆ ಮಾಡಿದ್ದೀರಿ? ಈಗ ಬಂದು ಹೀಗೆ ಹೇಳುತ್ತಿದ್ದಿರಂದು ಛೀಮಾರಿ ಹಾಕಿತು. ನಮಗೆ ಏನು ಅಂದರು? It is a pity. ನಾನು ನೋವಿನಿಂದ ಹೇಳಬೇಕಾಗಿದೆ. ನಾನು ಅದೆಲ್ಲಾ ಡಾಕ್ಯುಮೆಂಟ್ ಅನ್ನು ಸದನದಲ್ಲಿ ಇಟ್ಟುಕೊಂಡು, ತಮ್ಮ ಮುಂದೆ 5ನೇ ಆಗಸ್ಟ್ ತಿಂಗಳಲ್ಲಿ ಇಲ್ಲಿ ನಾನು ವಾದವನ್ನು ಮಾಡುವಾಗ, ನನ್ನ ಹತ್ತಿರ ಆ ಎಲ್ಲಾ ಡಾಕ್ಯುಮೆಂಟ್ಸ್ ಇತ್ತು. ಅವತ್ತು ನಾನು ತಮಗೆ ಅದನ್ನು ತೋರಿಸಿದೆ. ಆದರೆ ಕೋರ್ಟ್ has taken a view, ಇದೆಲ್ಲಾ ಡಾಕ್ಯುಮೆಂಟ್ ಅನ್ನು ಸರ್ಕಾರವೇ ಮಾಧುಸ್ವಾಮಿಯವರಿಗೆ ಒದಗಿಸಿಕೊಟ್ಟು, ಇಲ್ಲಿ ಬಂದು ಕೇಸ್ ಹಾಕಿಸಿದ್ದಾರೆ ಅಂತ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಯಾವುದೇ ಸರ್ಕಾರ ಅಫಿಡವಿಟ್‌ಅನ್ನು ಹಾಕಬೇಕಾದರೆ ಚೀಫ್ ಮಿನಿಸ್ಟರ್, ಮಿನಿಸ್ಟರ್, ಹೋಗಿ ಹಾಕುವುದಿಲ್ಲ. ಅವರ ಪರವಾಗಿ ಒಬ್ಬ ಚೀಫ್ ಸೆಕ್ರೆಟರಿ ಹೋಗಿ ಹಾಕುವಂಥಾದ್ದು. ಇಲ್ಲಿ ಚೀಫ್ ಸೆಕ್ರೆಟರಿ ಎಂದರೆ, ಇವರು basically Administrative Services. ಸೇರಿ, ಪ್ರಮೋಷನ್ ಬಂದು ಸೀನಿಯಾರಿಟಿಯ ಮೇಲೆ at the charge of the Government ಅವರು ರಿಟಯರ್ ಆಗುವಂತಹ ಸ್ಟೇಜ್‌ನಲ್ಲಿ ಆಗುವಂಥಾದ್ದು, ಅವರಿಗೆ ಏನು ಕಡಿಮೆ ಅನುಭವ ಇರುತ್ತದಾ? ಇಲ್ಲ, ಅವರು ಅವಿದ್ಯಾವಂತರಾ?

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ರಮೇಶ್‌ಕುಮಾರ್‌ರವರೆ, ನಾನು ಹೇಳುತ್ತೇನೆ. He has clearly written on an Affidavit.

Sri K.R. Ramesh Kumar : There is something which you cannot see by the normal eye. There is something that is hiding. ಹೇಗೆ ಬರುತ್ತಾರೆ? ಚೀಫ್ ಸೆಕ್ರೆಟರಿ ನಾರ್ಮಲ್ ಕೋರ್ಸ್‌ನಲ್ಲಿ? ಯಾವುದೋ ಒಂದು ಸಣ್ಣ ವಿಚಾರಕ್ಕೆ ಬಂದರೆ, ಕ್ವಾಯರಿ ಹಾಕಿ ಅಬ್ಜೆಕ್ಷನ್ ಹಾಕಿ ಕಳುಹಿಸುತ್ತಾರೆ, ಅದು ಡೆಪ್ಯುಟಿ ಸೆಕ್ರೆಟರಿಯಾಗಿ ಇರುವವರು, ಅಂಡರ್ ಸೆಕ್ರೆಟರಿಯಾಗಿ ಇರುವವರು. ಅಂಥಾದ್ದು ಒಬ್ಬ ಚೀಫ್ ಸೆಕ್ರೆಟರಿಯವರು ಹೈಕೋರ್ಟ್‌ಗೆ ಹೋಗಿ, ನಿಂತುಕೊಂಡು ಸುಳ್ಳು ಅಫಿಡವಿಟ್‌ಅನ್ನು ಹಾಕುತ್ತಾರಾ? ಹಾಗೆ ಹಾಕಿಕೊಂಡು ಅಲ್ಲಿ ಸುಪ್ರೀಂಕೋರ್ಟ್‌ಗೆ ಹೋಗಿ ಅಲ್ಲಿ ಇಂಟ್ರಿಂ ಆರ್ಡರ್ ತೆಗೆದುಕೊಂಡು ತಲೆ ಮರೆಸಿಕೊಳ್ಳುತ್ತಾರಾ?

Sri J.C. Madhuswamy : It is not the fact. Fact ಅಲ್ಲ, High Court ordered Chief Secretary ಯವರು ಬಂದು ಅಫಿಡವಿಟ್ ಹಾಕಬೇಕೆಂದು ಇದೆ. High Court has directed ಚೀಫ್ ಸ್ಕ್ರೆಟರಿ ಬಂದು ಅಫಿಡವಿಟ್ ಹಾಕಬೇಕೆಂದು, ಹೈಕೋರ್ಟ್ ಡೈರಕ್ಟ್ ಮಾಡಿತು.

Sri K.R. Ramesh Kumar : Whether the High Court can direct him to file a false Affidavit? Yes, even taken for granted that there was a direction to him......

Sri J.C. Madhuswamy : Let us be straight on the record. ಚೀಫ್ ಸ್ಕ್ರೆಟರಿಯವರು ಕ್ಲಿಯರ್ ಕಟ್ ಅಗಿ ಬರೆದು ಹಾಕಿದರು. This is not my opinion. I am filing this Affidavit as per the direction or decision of the Cabinet of Karnataka. No. I will never accuse Chief SEcretary. He was not free ಕ್ಯಾಬಿನೆಟ್ ಡಿಸಿಷನ್‌ಅನ್ನು ತೆಗೆದುಕೊಂಡು, ಈ ರೀತಿಯಾಗಿ ಅಫಿಡವಿಟ್ ಹಾಕು ಎಂದಿದ್ದಕ್ಕೆ ನಾನು ಹಾಕಿದ್ದೇನೆಂದು ಸ್ಪಷ್ಟವಾಗಿ ಅವರು ಬರೆದು ಹಾಕಿದ್ದಾರೆ. What made the Cabinet to file that Affidavit? The Ministers who were present in that Cabinet have to say. How can the Chief Secretary refuse when the Cabinet directs him to file such an Affidavit? ಆ ಅಫಿಡವಿಟ್‌ಅನ್ನು ಹಆಕಿ ಇಡೀ ಕೇಸನ್ನು ಡೈಲ್ಯೂಟ್ ಆಗಿರುವಂಥಾದ್ದು, ಇದೆಲ್ಲವನ್ನೂ ಮೆರಿಟ್ ಇಲ್ಲಿ ಮತನಾಡಬಾರದೆಂದು ನಾವು ಇದ್ದದ್ದು. ಏನಾಯಿತು? ಅವತ್ತು ನಿಮಗೆ ಗೊತ್ತಾಯಿತ್ತಲ್ಲಾ. ನಿಮ್ಮದು ತಪ್ಪು ಆಗಿದೆ, ಈ ಅಸೆಂಬ್ಲಿಯಲ್ಲಿ ನಮ್ಮ ಗಮನಕ್ಕೆ ಬಂತು. ಎಕ್ಸಸ್ ಅಕ್ವಿಜೇಷನ್ ಆಗಿದೆ, ರೆಡ್ಡಿಯವರ ಕಮಿಟಿಯನ್ನು ಅಪಾಯಿಂಟ್ ಮಾಡಿದ್ದೇವೆ. ನಮಗೆ ಜಾಗವನ್ನು ತೋರಿಸಿದ್ದಾರೆಂದು, What made you? ಅದನ್ನು ನೀವು ಏಕೆ ಹಿಂದಕ್ಕೆ ತೆಗೆದುಕೊಳ್ಳಲಿಲ್ಲ? ನೀವು ಏಕೆ ಹೈಕೋರ್ಟ್‌ಗೆ ಬರಬೇಕಾಗಿತ್ತು You could have taken a decision and withdrawn the land. ನೀವು ಇಲ್ಲಿ ನಮಗೆ ಫೈಟ್ ಮಾಡುವುದಕ್ಕೂ ಬಿಡುವುದಿಲ್ಲ. ಅಥವಾ ನೀವಾದರೂ ಕಂಪ್ಲೀಟ್ ಆಗಿ ಆಕ್ಷನ್ ತೆಗೆದುಕೊಂಡು ಉಳಿಸಲಿಲ್ಲ. ಅವತ್ತೇನು ತಾವು ಸರ್ಕಾರ ನಡೆಸುತ್ತಿದ್ದೀರಿ, ಸರ್ಕಾರ ಗುರುತಿಸಲೇ ಇಲ್ಲ. ಇಲ್ಲಿ ನಮಗೆ ಉತ್ತರ ಹೇಳುವಾಗ ನೀವು ಸ್ಟ್ರೈಟ್‌ಆಗಿ ಹೇಳಬಹುದಿತ್ತು. Yes, we have accepted there is golmol, we will take action ಎಂದು ಒಂದು ಮಾತು ಹೇಳಿದ್ದರೆ things would have been ended here itself, ಅದೇ ಮಾತನ್ನು ಹೈಕೋರ್ಟ್ ನಮಗೆ ಹೇಳಿದೆ. "You have failed to do your duty as a legislator on the floor of the House and you are approaching the High Court of Karnataka" ಎಂದು ಹೇಳಿದೆ. ನಾಚಿಕೆಯಾಗುವುದಿಲ್ಲವೇ? ನಮಗೆ ಅದಕ್ಕೆ ನಾಚಿಕೆಯಾಗುತ್ತದೆ. ಶ್ರೀರಾಮರೆಡ್ಡಿಯವರಿಗೂ ಮತ್ತು ನನಗೂ 50 ಸಾವಿರ ರೂ. ಕಟ್ಟಿದ್ದಕ್ಕೆ

ನಾಚಿಕೆಯಾಗುವುದಿಲ್ಲ. The High Court says: "You have failed before the House. You had ample apportunity of getting things done in the Assembly" ನೀವು ಅಲ್ಲಿ ಫೈಲ್ ಅಗಿ ಇಲ್ಲಿ ಏಕೆ ಬಂದಿರಿ ಎಂದು ಕೇಳುವಂಥ ಸ್ಥಿತಿಯನ್ನು ನಿರ್ಮಾಣ ಮಾಡಿ, ಅಲ್ಲಿ ನಮ್ಮ ಜೊತೆಗೆ ಬಂದು ನೀವು ಅಫಿಡವಿಟ್ ಹಾಕುತ್ತೀರಿ. ನಮ್ಮ ಕೇಸನ್ನೂ ನಿರ್ನಾಮ ಮಾಡುತ್ತೀರಿ. ನಿಮ್ಮ ಜೊತೆಗೆ ನಮ್ಮನ್ನೂ ಮುಗಿಸುತ್ತೀರಿ. ಏಕೆ ಇದನ್ನು ಮಾಡುತ್ತೀದ್ದೀರಿ ಎಂಬುದು ನಮಗೆ ಗೊತ್ತಾಗಲಿಲ್ಲ. ನೀವು ಐಡೆಂಟಿಫೈ ಮಾಡಿದಿರಿ, ನಿಮಗೆ ಗೊತ್ತಾಯಿತು. ಹೈಕೋರ್ಟ್ ಕ್ಲಿಯರ್‌ಆಗಿ ಹೇಳಿದೆ, documents which should have been produced before the HIgh Court ಮಾಧುಸ್ವಾಮಿಯವರಿಗೆ ಸಿಗುವಂಥ ಡಾಕ್ಯುಮೆಂಟ್ಸ್ ಅಲ್ಲ, ಅವು ಮೋಸ್ಟ್ ಕಾನ್ಫಿಡೆನ್‌ಷಿಯಲ್ ಡಾಕ್ಯುಮೆಂಟ್ಸ್, ಇವುಗಳನ್ನೆಲ್ಲಾ ಸರ್ಕಾರವೇ ಅವರಿಗೆ ಕೊಟ್ಟು ಕೇಸ್ ಹಾಕಿಸಿದೆ, this is a sponsored PIL, not a PiL on its own ಎಂದು ನನಗೆ, ನನ್ನ ಗ್ರಹಚಾರಕ್ಕೆ ಹೇಳಿದೆ. ಯಾವ ಪಾಪಕ್ಕೆ ನಾವು ಇದನ್ನು ಹೇಳಿಸಿಕೊಂಡಿದ್ದೇವೆ ಎನ್ನುವುದು ಗೊತ್ತಾಗಿಲ್ಲ. ಈ ಪಿಐಎಲ್ ಅನ್ನು ಇವರು ಹಾಕಲೇ ಇಲ್ಲ, the entire government of Congress(I) and JD(S) ಇಬ್ಬರೂ ಸೇರಿ ಜನತಾದಳ(ಯು)ನವರ ಕಡೆಯಿಂದ ಸ್ಪಾನ್ಸಾರ್ ಮಾಡಿ ಹಾಕಿಸಿದ್ದಾರೆ ಎನ್ನುವ ಸ್ಥಿತಿ ಕೋರ್ಟ್‌ನಲ್ಲಿ ನಿರ್ಮಾಣವಾಯಿತು. ಏಕೆ ಹಾಕಿ ಮಾಡಿದಿರಿ? ಡಿಸಿಷನ್ ಬಂದಾಗ ಏನಾಯಿತೆಂದರೆ, ನಮ್ಮವರೇ ಆದ ಕಾಂಗ್ರೆಸ್‌ನವರು ಮಂತ್ರಿಗಳಾಗಿದ್ದಾರೆ ಎನ್ನುವ ಭಾವನೆಯಿಲ್ಲ. ಕಾಂಗ್ರೆಸ್ ಆಫೀಸ್‌ಗಳಲ್ಲಿ ಆ ಡಿಸಿಷನ್‌ಅನ್ನು ವೆಲ್‌ಕಂ ಮಾಡುತ್ತಾರೆ. ಮಂತ್ರಿಗಳು ಸಪ್ಪಗೆ ಇರುತ್ತಾರೆ. ಸ್ಟ್ರಿಕ್ಚರ್ಸ್ ಪಾಸ್ ಆದಾಗ ಹೀಗೆ ಬಿಹೇವ್ ಮಾಡುತ್ತಾರೆ. ಅದು ಅವರಿಗೂ ಆಗಿದೆ ಎನ್ನುವ ಕಲ್ಪನೆಯೇ ಅವರಿಗೆ ಬರಲಿಲ್ಲ. ಕಾಂಗ್ರೆಸ್ ಆಫೀಸಿನಲ್ಲಿ ಪಟಾಕಿ ಹಚ್ಚಿದರು. When the Congress Party was in Government in Karnataka, they adopted double standard. What is this double standard? ನಿಮ್ಮದೇ ಸರ್ಕಾರಕ್ಕೆ ಹೈಕೋರ್ಟ್ ಛೀಮಾರಿ ಹಾಕಿದರೆ, ಆಗ ನಿಮ್ಮ ಪಕ್ಷ ಸೆಲೆಬ್ರೇಟ್ ಮಾಡುತ್ತದೆ, ನಮ್ಮನ್ನು ಬೆಟ್ಟು ಮಾಡಿ ತೋರಿಸುತ್ತದೆ, ಇವರಿಗೆ ಅವಮಾನ ಆಯಿತು, ಇವರಿಗೆ ಸ್ಟ್ರಿಕ್ಚರ್ಸ್ ಪಾಸ್ ಆಯಿತು ಎಂದು ಹೇಳುತ್ತಾರೆ. ನನಗೊಬ್ಬನಿಗೇ ಸ್ಟ್ರಿಕ್ಚರ್ಸ್ ಪಾಸ್ ಆಗಿತ್ತೇ? ಏನಾಗಿದೆ ಎಂದು ಇಲ್ಲಿ ಗೊತ್ತಾಗಬೇಕಲ್ಲವೇ? ಅದಕ್ಕಾಗಿ ಹೇಳುತ್ತಿದ್ದೇನೆ. ಹಾಗಾದರೆ ನೀವು ಚೀಫ್ ಸೆಕ್ರೆಟರಿಯವರನ್ನು ಬಲಿ ಹಾಕಲಿಕ್ಕೋಸ್ಕರವೇ ಅ ಅಫಿಡವಿಟ್ ಹಾಕಿಸಿದಿರಾ? ನಿಮ್ಮ ಆತ್ಮ ಸಾಕ್ಷಿ ಇಲ್ಲದೇ ನೀವು ಸಂವಿಧಾನದಲ್ಲಿ ಮಂತ್ರಿಗಳಾಗಿ ಕೆಲಸ ಮಾಡುವುದಕ್ಕಾಗುತ್ತದೆಯೇ? ಆವತ್ತು ನೀವು ನಿಮ್ಮ ಮನಸ್ಸಿಗೆ ವಿರುದ್ಧವಾಗಿ ಆ ತೀರ್ಮಾನಕ್ಕೆ ಒಪ್ಪಿಕೊಂಡಿದ್ದೀರೇ? ಸಚಿವ ಸಂಪುಟದ ಸದಸ್ಯರಾಗಿನೀವು ಆವತ್ತು ಅದಕ್ಕೆ ಏಕೆ ವಿರೋಧ ಮಾಡಲಿಲ್ಲ? When you are not committed to the cause, you could have opposed. It is a collective decision. ಆ ರೀತಿ ನೀವು ಮಾಡುವುದಿಲ್ಲ. ಈ ರಾಜ್ಯದಲ್ಲಿ ಈ ದುರಂತಕ್ಕೆ ಯಾರು ಕಾರಣ? ಅದನ್ನು ಹೇಳಬೇಕಲ್ಲವೇ? ಇವತ್ತು ನಾವು ನೈಸ್ ರೋಡ್ ಆಗಬೇಕು ಎಂದು ಮಾತನಾಡುತ್ತೇವೆ. ಆವತ್ತು ಅಫಿಡವಿಟ್

ಹಾಕಬೇಕಾದರೆ ನೀವು ಪಾರ್ಟಿಯಾಗಿದ್ದೀರಿ. ಅಫಿಡವಿಟ್ ಹಾಕಬೇಕಾದರೆ ಸರ್ಕಾರ ನಡೆಸುತ್ತಿದ್ದೀರಿ, ಅಫಿಡವಿಟ್ ಹಾಕಬೇಕಾದರೆ you were leading the government.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಒಂದು ನಿಮಿಷ ಯೀಲ್ಡ್ ಆಗುವಿರಾ? ಕಾಂಗ್ರೆಸ್ ಪಾರ್ಟಿಯ ಅಧ್ಯಕ್ಷನಾಗಿ, ಅವರು ಹೇಳಿದ್ದನ್ನು ನಾನು ಅಲ್ಲಗಳೆಯುತ್ತೇನೆ. ಕೋರ್ಟ್‌ನಿಂದ ಡಿಸಿಷನ್ ಬಂದುದ್ದನ್ನು ನಮ್ಮವರು ಎಲ್ಲಿಯಾದರೂ ಸ್ವಾಗತ ಮಾಡಿದ್ದು ಇದ್ದರೆ ಅದನ್ನು ತಾವು ತಂದು ತೋರಿಸಬೇಕು. ಎರಡನೆಯದಾಗಿ, ನಮ್ಮ ಆಫೀಸ್ ಮುಂದೆ ಪಟಾಕಿ ಹಾರಿಸಿದರು ಎಂದು ನೀವು ಹೇಳುತ್ತೀರಿ. ಅದು ಸತ್ಯಕ್ಕೆ ದೂರವಾದುದು. ಅವರಿಗೆ ಬೇಕಾಗದೇ ಇರುವವರು ಯಾರಾದರೂ ಹಾಗೆ ಮಾಡಿದ್ದರೆ ಮಾಡಿರಬಹುದು. ಆ ಮಾತು ಬೇರೆ. ಎರಡನೆಯದು, ತಮಗೂ ಗೊತ್ತಿದೆ, ಯಾವುದೇ ಒಂದು ಕ್ಯಾಬಿನೆಟ್‌ನಲ್ಲಿ ಒಂದು ವಿಷಯ ಚರ್ಚೆಗೆ ಬಂದಾಗ ಅದರ ಪ್ರೋಸ್ ಅಂಡ್ ಕಾನ್ಸ್ ಚರ್ಚೆಯಾಗುತ್ತದೆ. ಅದನ್ನು ಅಪೋಸ್ ಮಾಡುವವರೂ ಇರುತ್ತಾರೆ, ಪ್ರಪೋಸ್ ಮಾಡುವವರು ಇರುತ್ತಾರೆ, ಎಲ್ಲರೂ ಇರುತ್ತಾರೆ. ಹಾಗೆಂದ ಮಾತ್ರಕ್ಕೆ ಕ್ಯಾಬಿನೆಟ್‌ನಲ್ಲಿ dissent note ಬರೆಯುತ್ತಾರೇನು? ಇಂಥವರು ಹೀಗೆ ವಿರೋಧ ಮಾಡಿದರು ಎಂದು ಬರೆಯುತ್ತಾರೇನು ಅಥವಾ ಹೊರಗಡೆ ಬಂದು ಅದನ್ನು ಹೇಳುವುದಕ್ಕಾಗುತ್ತದೇನು? ಯಾರೂ ಕೂಡ ಆ ರೀತಿ ಮಾಡುವುದಕ್ಕಾಗುವುದಿಲ್ಲ. ಇರತಕ್ಕಂಥ ಪದ್ಧತಿ ಎಂದರೆ ಯವಾಗಲೂ consensus ಮೇಲೆ ಹೋಗುತ್ತದೆ. ಕೆಲವರಿಗೆ ಆ ಡಿಸಿಷನ್ ಬೇಕಿರಬಹುದು, ಬೇಡವಾಗಿರಬಹುದು, ಅದನ್ನು ಕ್ಯಾಬಿನೆಟ್ ಅಪ್ರೂವ್ ಮಾಡುತ್ತದೆ. ಆದ್ದರಿಂದ, ನಿಮಗೆ ಗಟ್ಸ್ ಇದ್ದರೆ ನೀವು ಅಲ್ಲೇ ವಿರೋಧ ಮಾಡಬೇಕಾಗಿತ್ತು, ಧೈರ್ಯವಿದ್ದರೆ ಅದನ್ನು ವಿರೋಧ ಮಾಡಬೇಕಾಗಿತ್ತು ಎನ್ನುವ ಮಾತನ್ನು ಅನುಭವಸ್ಥರಾದ ತಮ್ಮಂಥವರು ಹೇಳಿದರೆ ಹೊರಗಿನ ಜಗತ್ತಿಗೆ ಏನು ಗೊತ್ತಾಗುತ್ತದೆ? ದಯವಿಟ್ಟು ಇದು ಆಗಬಾರದು. ಈಗ ಇರುವಂಥ ಸರ್ಕಾರದವರಲ್ಲೂ ವ್ಯತ್ಯಾಸಗಳಿವೆ. ಹಾಗೆಂದು ಅದನ್ನು ರೆಕಾರ್ಡ್ ಮಾಡುತ್ತಾರೆಯೇ? ಡೆಪ್ಯುಟಿ ಸಿ ಎಂ ಈ ರೀತಿಯಾಗಿ ಮಾತನಾಡಿದರು ಅಥವಾ ಎಂ.ಪಿ. ಪ್ರಕಾಶ್‌ರವರು ಈ ರೀತಿಯಾಗಿ ಮಾತನಾಡಿದರು, ಅಥವಾ ಇನ್ನೊಬ್ಬರು ಈ ರೀತಿಯಾಗಿ ಮಾತನಾಡಿದರು ಎಂದು ಪ್ರೊಸೀಡಿಂಗ್ಸ್ ಮಾಡುತ್ತಾರೆಯೇ? ಅದನ್ನು ಯಾರೂ ಕೂಡ ಮಾಡುವುದಿಲ್ಲ. ಡಿಸಿಷನ್ consensus ಮೇಲೆ ಹೋಗುತ್ತದೆ, ಕ್ಯಾಬಿನೆಟ್‌ಗೆ ಅದು ಒಪ್ಪಿಗೆಯಾದ ಮೇಲೆ ಕಲೆಕ್ಟೀವ್ ಡಿಸಿಷನ್ ಆಗಿ ಹೊರಗೆ ಬರುತ್ತದೆ, thought you were not agreeing with a particular subject.

Sri J.C. Madhu swamy : Whatever the case may be - ಒಂದು ಪಕ್ಷದ ಇಷ್ಯೂ ಮಾಡುವುದಕ್ಕೆ ಮೊದಲೇ ರಾಜ್ಯದಲ್ಲಿ ಆ ಪಕ್ಷದ ಸರಕಾರವಿತ್ತು ಎಂದು ಹೇಳುವುದಷ್ಟೇ ನನ್ನ ಉದ್ದೇಶ.

Sri M. Mallikarjuna Kharge : This is prejudice. ಇಷ್ಯೂ ಯಾರು ಮಾಡಿದ್ದು? ಏನು ಇಷ್ಯೂ ಇದೆ ಅದನ್ನು ಮಾತನಾಡುತ್ತಾರೆ. ನಿಮಗೆ ಕಾಂಗ್ರೆಸ್ ಬಗ್ಗೆ ಪ್ರಿಜ್ಯೂಡೀಸ್ ಇದೆ.

ಶ್ರೀ ಬಸವರಾಜ ರಾಯರೆಡ್ಡಿ : ನಮ್ಮ ಪಾರ್ಟಿ ವಿರುದ್ಧವಾಗಲೀ, ಮಂತ್ರಿಗಳ ವಿರುದ್ಧವಾಗಲೀ ಹೈಕೋರ್ಟ್ ಏನೂ ಹೇಳಿಲ್ಲ.

Sri J.C. Madhuswamy : I have not yielded to him. ದೂರದರ್ಶನದಲ್ಲಿ ನಿಮ್ಮ ನಾಯಕರು ಮಾಡಿರುವ ರಿಯಾಕ್ಟ್‌ನ ಕ್ಯಾಸೆಟ್‌ಅನ್ನು ತಮಗೆ ಕಳುಹಿಸುತ್ತೇನೆ. ಆವತ್ತು ನಿಮ್ಮ ಕೆಲವು ನಾಯಕರುಗಳು ಪೇಪರ್‌ಗಳಲ್ಲಿ ರಿಯಾಕ್ಟ್ ಮಾಡಿರುವ ಪೇಪರ್ ಕಟಿಂಗ್ಸ್‌ಅನ್ನು ತಮಗೆ ಕಳುಹಿಸುತ್ತೇನೆ. ನಾನು ಫೀಲ್ ಆಗಿದ್ದನ್ನು ನಾನು ಹೇಳುತ್ತಿದ್ದೇನೆ. ಇದೇನು ಕತೆ? ಇದು ನನಗೊಬ್ಬನಿಗೋಸ್ಕರ ಆಗಿದ್ದೇ ಎಂದು ಆವತ್ತು ನನಗನ್ನಿಸಿತ್ತು. I will get the record.

ಶ್ರೀ ಆರ್. ದಿನೇಶ್ ಗುಂಡೂರಾವ್ : ಕಾಂಗ್ರೆಸ್ ಸರ್ಕಾರದವರು, ಕಾಂಗ್ರೆಸ್ ಪಾರ್ಟಿಯವರ್‍ಯಾರು ನಿಮಗೆ ಪಿಟಿಷನ್ ಹಾಕಿ ಎಂದು ಹೇಳಲಿಲ್ಲ ತಾನೇ?

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಅದನ್ನೇ ಹೇಳುತ್ತಿರುವುದು. ನಿಮ್ಮನ್ಯಾರನ್ನೂ ಕೇಳಿ ನಾನು ಪಿಟಿಷನ್ ಹಾಕಲಿಲ್ಲ........

ಶ್ರೀ ಆರ್. ದಿನೇಶ್ ಗುಂಡೂರಾವ್ : ಹಾಗಿರುವಾಗ, ಅದಕ್ಕೆ ನೀವು ಬೇಜಾರೇಕೆ ಮಾಡಿಕೊಳ್ಳುತ್ತೀರಿ?

ಶ್ರೀ ಜೆ.ಸಿ. ಮಾಧುಸ್ವಾಮಿ : ಗವರ್ನಮೆಂಟ್ ವಿರುದ್ಧವಾಗಿ ಒಂದು ಡಿಸಿಷನ್ ಆದರೆ, ಅದನ್ನು ವೆಲ್‌ಕಂ ಮಾಡಿದರೆ ಹೇಗೆ? ಅದೂ ಸಹ ಅವರದೇ ಸರ್ಕಾರವಿರುವಾಗ.

ಶ್ರೀ ಆರ್. ದಿನೇಶ್ ಗುಂಡೂರಾವ್ : ಸರ್ಕಾರದ ವಿರುದ್ಧ ಪಕ್ಷ ಅನೇಕ ಸಲ........

ಶ್ರೀ ಜೆ.ಸಿ. ಮಾಧುಸ್ವಾಮಿ : ಹಾಗಿದ್ದರೆ, I have no objection.

ಶ್ರೀ ಆರ್. ದಿನೇಶ್ ಗುಂಡೂರಾವ್ : ಅದಕ್ಕೆ ನೀವೇಕೆ ಬೇಜಾರು ಮಾಡಿಕೊಳ್ಳುತ್ತೀರಿ?

ಶ್ರೀ ಜೆ.ಸಿ. ಮಾಧುಸ್ವಾಮಿ : ಸರ್ಕಾರವೇ ಬೇರೆ ಇದ್ದು, ಪಕ್ಷವೇ ಬೇರೆ ಇತ್ತು ಎಂದರೆ ಆ ಮಾತು ಬೇರೆ.

ಶ್ರೀ ಆರ್. ದಿನೇಶ್ ಗುಂಡೂರಾವ್ : ನೀವು ನಿಮ್ಮ ವೈಯಕ್ತಿಕ ಹೋರಾಟವನ್ನು ಮಾಡಿ. ಅದು ಬಿಟ್ಟು, ನನಗೆ ಬಹಳ ಬೇಜಾರಾಯಿತು, ನನಗೆ ನೋವಾಯಿತು ಈ ರೀತಿಯ ಎಮೋಷನಲ್ ಡ್ರಾಮಾ ಬೇಡ. ನಿಮ್ಮ ವೈಯಕ್ತಿಕ ವಿಚಾರ, ಫ್ಯಾಕ್ಟ್ಸ್ ಅಂಡ್ ಫಿಗರ್ಸ್ ಅದನ್ನು ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಮಗೆ ಬೇಕಿದ್ದುದ್ದೂ ಅಷ್ಟೇ. ಸರ್ಕಾರವೇ ಬೇರೆ ಇತ್ತು, ಪಕ್ಷವೇ ಬೇರೆ ಇತ್ತು ಎಂದಾಗ ಅದು ಸರಿ. ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ವೆಂಕಟೇಶ್ : ಕ್ಯಾಬಿನೆಟ್‌ನಲ್ಲಿ ಮುಖ್ಯಮಂತ್ರಿಗಳು ರಾಜ್ಯವನ್ನೇ ಮಾರಿಬಿಟ್ಟರೆ, ಆಗ ಕ್ಯಾಬಿನೆಟ್ ಮಿನಿಸ್ಟರ್‌ಗಳು ಸುಮ್ಮನೆ ಕುಳಿತುಕೊಳ್ಳಿ ಎನ್ನುತ್ತೀರೇನು? ಈ ರಾಜ್ಯ ಹಾಳಾಗುತ್ತದೆ, ಇದನ್ನು ಮಾಡುವುದು ಬೇಡ ಎಂದು ಸಚಿವರು ಹೇಳಬೇಕಾಗಿತ್ತು ಎಂದು ಮಾಧುಸ್ವಾಮಿಯವರು

ಹೇಳುತ್ತಿದ್ದಾರೆ. ಏನು ಮಾಡಿದರೂ, ರಾಜ್ಯವನ್ನು ಮಾರಿಬಿಟ್ಟರೂ, ಮಾರಿಕೊಳ್ಳಿ ಎಂದು ಕ್ಯಾಬಿನೆಟ್ ಮಿನಿಸ್ಟರ್‌ಗಳು ಸುಮ್ಮನೆ ಕುಳಿತುಕೊಂಡರೆ ಹೇಗೆ? ಸಚಿವ ಸಂಪುಟದಲ್ಲಿದ್ದಾಗ, ರಾಜ್ಯದ ಹಿತದೃಷ್ಟಿಯಿಂದ ಅಂಥಾದ್ದನ್ನು ವಿರೋಧ ಮಾಡಬೇಕಾಗುತ್ತದೆ. ಅದನ್ನೇ ಅವರು ಹೇಳುತ್ತಿರುವುದು.

ಶ್ರೀ ಆರ್.ವಿ. ದೇಶಪಾಂಡೆ : ತಾವು ಮಂತ್ರಿಯಾಗಬೇಕು ಎಂದು ಅಪೇಕ್ಷೆ ಪಟ್ಟಿದಿರಿ.

ಶ್ರೀ ಎಂ.ಪಿ. ವೆಂಕಟೇಶ್ : ಮಂತ್ರಿ, ಛೇರ್ಮನ್ ಆಗಬೇಕು ಎಂದೇನೂ ಅಲ್ಲ. ನಾವು ಒಳ್ಳೆಯ ಮುಖ್ಯಮಂತ್ರಿಯನ್ನು ಮಾಡಿದ್ದೇವೆ. ಅದು ನಿಮ್ಮ ಕೈಯ್ಯಲ್ಲಿ ಆಗುವುದಿಲ್ಲ. ನಾವು, ಜೆಡಿ(ಎಸ್) ಪಾರ್ಟಿಯವರು ರಾಮರಾಜ್ಯ ಕಟ್ಟುವುದಕ್ಕೆ ಒಳ್ಳೆಯ ಮುಖ್ಯಮಂತ್ರಿಯನ್ನು ಆಯ್ಕೆ ಮಾಡಿದ್ದೇವೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಸ್ವಲ್ಪ ಕೇಳಿ.......

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್ : ಯಾರೂ ನಮ್ಮನ್ನು ಏನೂ ಮಾಡುವುದಕ್ಕಾಗುವುದಿಲ್ಲ. ಜೆಡಿ(ಎಸ್)ನ ಎಂಎಲ್‌ಎ ಗಳನ್ನು ಕೊಂಡುಕೊಳ್ಳುವುದಕ್ಕೂ ಆಗುವುದಿಲ್ಲ, ಏನೂ ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಆರ್.ವಿ. ದೇಶಪಾಂಡೆ : ತಾವು ಮಂತ್ರಿಗಳಾಗಿಲ್ಲ, ಆಗಬೇಕು ಎನ್ನುವುದು ನಮ್ಮ ಸದಿಚ್ಛೆ. ಪ್ರಕಾಶ್ ಸಾಹೇಬರಿದ್ದಾರೆ. ಉಪ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರಿದ್ದಾರೆ, ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿ ಕೆಲಸ ಮಾಡುತ್ತಿದ್ದಾರೆ. ನಮ್ಮ ಪಕ್ಷದ ಅಧ್ಯಕ್ಷರಾದ ಖರ್ಗೆಯವರು ಆಗಲೇ ಹೇಳಿದ ಹಾಗೆ, ಕ್ಯಾಬಿನೆಟ್‌ನಲ್ಲಿ ಒಂದು ವಿಷಯ ಬಂದಾಗ, ಅದರ ಬಗ್ಗೆ threadbare ಚರ್ಚೆಯಾಗುತ್ತದೆ. ಪ್ರತಿಯೊಬ್ಬರೂ ತಮ್ಮ ಅಭಿಪ್ರಾಯವನ್ನು ಕೊಡುತ್ತಾರೆ. ಎಲ್ಲರೂ ಕೊಡುತ್ತಾರೆ ಎಂದೇನಲ್ಲ, ಕೆಲವರು ಕೊಡುತ್ತಾರೆ. ಆದರೆ ಹಾಗೆ ಕೊಟ್ಟಂಥ ಅಭಿಪ್ರಾಯಗಳು ನೋಟ್ ಆಗುವುದಿಲ್ಲ. ರೂಲಿಂಗ್ ಪಾರ್ಟಿ ಸ್ನೇಹಿತರು ಇದನ್ನು ಒಪ್ಪಿಕೊಳ್ಳುತ್ತಾರೆ ಎಂದು ತಿಳಿದುಕೊಳ್ಳುತ್ತೇನೆ. ಆಗ ನಾನು ಕ್ಯಾಬಿನೆಟ್‌ನಲ್ಲಿ ಏನು ಹೇಳಿದೆ ಎನ್ನುವುದು ನನಗೆ ಗೊತ್ತು, ಕ್ಯಾಬಿನೆಟ್‌ನ ನನ್ನ ಕೊಲೀಗ್ಸ್‌ಗೆ ಗೊತ್ತು. ಅದನ್ನು ನಾನು ಇಲ್ಲಿ ಹೇಳಲಿಕ್ಕಾಗುವುದಿಲ್ಲ. ಏಕೆಂದರೆ, ನಾನು Oath of Secretary ತೆಗೆದುಕೊಂಡಿದ್ದೇನೆ. ಅದನ್ನು ನಾನು ಈ ಹೌಸ್‌ನಲ್ಲಿ ಹೇಳಲಿಕ್ಕಾಗುವುದಿಲ್ಲ. ಆ ದಿನ ನಾನು ಅಲ್ಲಿ ಏನು ಮಾತನಾಡಿದೆ, ಅದನ್ನು ಹೇಳಲಿಕ್ಕೆ ನನಗೆ ಅಧಿಕಾರವಿಲ್ಲ. ಆದರೆ ಆಗ ನಾನು ಏನು ಮಾತನಾಡಿದ್ದೇನೆ ಎನ್ನುವುದು ಪ್ರಕಾಶ್‌ರವರಿಗೆ ಗೊತ್ತಿದೆ, ನಾನೇನು ಮಾತನಾಡಿದೆ ಎನ್ನುವುದು ಖರ್ಗೆಯವರಿಗೆ ಗೊತ್ತಿದೆ. ಆದರೆ ಅಲ್ಲಿ ನಾನೇನು ಮಾತನಾಡಿದೆ ಎನ್ನುವುದನ್ನು ಇಲ್ಲಿ ಮಾತನಾಡುವುದಕ್ಕಾಗುವುದಿಲ್ಲ, because of Oath of Secretary ಅವತ್ತು ರೇವಣ್ಣನವರಿದ್ದರು, ಅವರಿಗೂ ಗೊತ್ತಿದೆ. ಹಾಗಾಗಿ, ಒಂದು ಡಿಸಿಷನ್ ಆದಾಗ consensus ನೋಡುತ್ತೇವೆಯೇ ವಿನಃ ಮೆಜಾರಿಟಿ, ಮೈನಾರಿಟಿ, ಎಂ.ಪಿ. ಪ್ರಕಾಶ್‌ರವರು ಏನು ಹೇಳಿದರು, ಆರ್.ವಿ. ದೇಶಪಾಂಡೆಯವರು ಏನು ಹೇಳಿದರು ಎನ್ನುವುದೆಲ್ಲಾ ರೆಕಾರ್ಡ್ ಆಗುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಧ್ಯಕ್ಷರೇ, ಈಗ.........

ಶ್ರೀ ಕೆ. ಶ್ರೀನಿವಾಸಗೌಡ : ಮಾಧುಸ್ವಾಮಿಯವರೇ, ಒಂದು ನಿಮಿಷ.

ಶ್ರೀ ಜೆ.ಸಿ. ಮಾಧುಸ್ವಾಮಿ : ಬಿಡಿ, ಅದು ಆಯಿತು.

ಶ್ರೀ ಕೆ. ಶ್ರೀನಿವಾಸಗೌಡ : ಒಂದು ನಿಮಿಷ. ನಾವು ಮಾತನಾಡುವಾಗ ಯೀಲ್ಡ್ ಆಗಿ ಎನ್ನುತ್ತೀರಿ. ನೀವು ಮಾತನಾಡುವಾಗ ಒಂದು ನಿಮಿಷ ಕುಳಿತುಕೊಳ್ಳದಿದ್ದರೆ ಹೇಗೆ? ಮಾನ್ಯ ವೆಂಕಟೇಶ್‌ರವರು ಜೆಡಿ(ಎಸ್)ನದು ರಾಮರಾಜ್ಯ ಎಂದು ಹೇಳಿದರು. 1989ರಲ್ಲಿ ಮಹಾನುಭಾವರಾದ ದೇವೇಗೌಡರ ಪಕ್ಷದಲ್ಲಿ ಗೆದ್ದಿರಿ. ಆಗ ರಾಮರಾಜ್ಯ ಮಾಡದೇ ಓಡಿ ಹೋದರು ಸ್ವಾಮಿ. ಇವತ್ತು ಅವನ್ನೆಲ್ಲಾ ಜ್ಞಾಪಿಸಿಕೊಳ್ಳಲಿ. ಮಾತನಾಡುವುದು ಸುಲಭ.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಮಾಧುಸ್ವಾಮಿಯವರೇ ತಾವು ಚರ್ಚೆ ಮುಂದುವರಿಸಿ.

(ಅಡಚಣೆ)

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಈ ಘಟನೆ ಮಧ್ಯೆ ಇಡೀ ಬೆಂಗಳೂರು ಜಮೀನನ್ನು ಹೇಗಾದರೂ ಮಾಡಿ ಯಾರಿಗೋ ಇಂಥವರಿಗೆಲ್ಲಾ ಒತ್ತೆ ಇಟ್ಟು ಏನಾದರೂ ರಾಜ್ಯಕ್ಕೆ ನಾವು ಕೊಡಬೇಕೆನ್ನುವ ಭಾವನೆ ಯಾರಿಗಾದರೂ ಇದ್ದರೆ ಅದು ನಿಜವಾಗಿಯೂ ಒಳ್ಳೆಯದಲ್ಲವೆಂದು ಹೇಳಿ, ಅವರಿಗೆ ಕೊಡುವಂಥ ಜಮೀನುಗಳನ್ನೆಲ್ಲಾ ನೀವೇನಾದರೂ ಹರಾಜು ಮಾಡಿದ್ದರೆ, ಆ ಜಮೀನನ್ನು ಸೈಟ್ ಮಾಡಿ ಬಿ.ಡಿ.ಎ. ಮುಖಾಂತರ ಹಂಚಿದ್ದರೆ one hundred project ಆಗುತ್ತಿತ್ತು. ಯಾರೂ ಸಹ ಜನ toll ಕೊಟ್ಟು ಓಡಾಡಬೇಕಾಗಿರಲಿಲ್ಲ. ಇಷ್ಟೆಲ್ಲವನ್ನೂ ನಾವು ಕೊಟ್ಟು 30 ವರ್ಷ toll ಕೊಡಬೇಕಂತೆ! ಈ ಸ್ಥಿತಿ ಇವತ್ತು ಏನು ನಿರ್ಮಾಣವಾಗಿದೆ, ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳಲಿಕ್ಕೆ ಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳೇ, ಯಾರ್‍ಯಾರು ಆವತ್ತು Officers ಆಗಿ ಇಲ್ಲಿದ್ದರು, ಅವರ fag end of the service ನಲ್ಲಿ ಇವರಿಗೆ undue favours ಅನ್ನು ಮಾಡಿದರು, ಅವರು ಅದಾದತಕ್ಷಣ ಆ company ಗೆ join ಆಗಿದ್ದಾರೆ. ಅವರ ಮೇಲೆಲ್ಲಾ ತಾವು action initiate ಮಾಡಬೇಕಲ್ಲವೇ? ಇವತ್ತು resign ಆಗುತ್ತಾನೆಂದರೆ ತಕ್ಷಣ ನಾಳೆ ನಂದಿ company ಯಲ್ಲಿ employee ಆಗುತ್ತಾನೆ. ಇಲ್ಲಿ ಇದ್ದುಬಿಟ್ಟು ಮಾಡುವುದೆಲ್ಲಾ ನಂದಿ ಕಂಪನಿಯ ಕೆಲಸವನ್ನು ಮಾತ್ರ. ಸರ್ಕಾರಿ ಕೆಲಸ ಅಲ್ಲ. ಇಲ್ಲಿ ಅಧಿಕಾರಿಗಳೀದ್ದಾಗಲೇ ಅವರ ಕೆಲಸ ಮಾಡಿ ಮೊದಲೇ ಅಲ್ಲಿಗೆ ಬರುತ್ತೇನೆಂದು booking ಮಾಡಿರುತ್ತಾರೆ. 'ಅಲ್ಲಿರುವುದು ನಮ್ಮ ಮನೆ, ಇಲ್ಲಿರುವುದು ನಾನು ಸುಮ್ಮನೆ' ಎಂದು ನಾನು ಆವತ್ತು ಡಾ: ಕುವೆಂಪುರವರ ಮಾತನ್ನು ಹೇಳುತ್ತಿದ್ದೆ. ಸರ್ಕಾರದ ಜೊತೆಗೆ ಇದ್ದದ್ದು ಸುಮ್ಮನೆ. ಇವರು ಆಗಲೇ ಅಲ್ಲಿ ಮನೆ ಮಾಡಿಕೊಂಡಿದ್ದರು. 4 ರಿಂದ 5 ಜನ Highest level Officers ಎಲ್ಲಾ ಕಡೆ ಈ ತರಹ grab ಮಾಡಲಿಕ್ಕೆ ಅನುಕೂಲಗಳನ್ನು ಮಾಡಿಕೊಟ್ಟು Government ಗೆ ಗೊತ್ತಿಲ್ಲದೆಯೇ sign ಹಾಕಿದ್ದಾರೆ,

Government ನಲ್ಲಿ ದೊಡ್ಡವರನ್ನು ಶಾಮೀಲು ಮಾಡಿಕೊಂಡು sign ಹಾಕಿದ್ದಾರೆ. De-notification ಆಗಬಾರದೆಂದು ಬರೆಯುತ್ತಾರೆ. De-notification ಎಲ್ಲಾ ಮಾಡಿದ್ದಾರೆ. Original owner of the land ಬಂದು De-notification ಮಾಡಿಕೊಡಿ ಎಂದು ಕೇಳಿದರೆ ಆಗುವುದಿಲ್ಲವೆಂದು ಹೇಳಿದ್ದಾರೆ. ಬೇರೆ ಯಾರೋ ಅವರ ಪರವಾಗಿ De-notification ಆದರೆ order ಮಾಡುತ್ತಾರೆ. ಇದೆಲ್ಲಾ ಏನು ನಡೆದಿದೆಯೆಂದು ಈ ಸದನಕ್ಕೆ ಗೊತ್ತಾಗಬೇಕು ಸನ್ಮಾನ್ಯ ಮುಖ್ಯಮಂತ್ರಿಗಳೇ. ನೀವು ಕುಳಿತಿರುವ ಆ ಸ್ಥಾನದಲ್ಲಿ ಸಾಯುವವರೆಗೂ ಯಾರೂ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಒಂದು ಇಚ್ಛಾಶಕ್ತಿ ಬೇಕು. ಇವತ್ತು ಒಂದು ನಿರ್ಧಾರವಾಗಬೇಕು. ಏನಾದರೊಂದು ಆಗಲಿ. ಅಧಿಕಾರ ಇರುತ್ತದೆ, ಹೋಗುತ್ತದೆ. Contempt ಆಗುತ್ತದೋ, ಇರುತ್ತದೋ, ನಾವು ಹೆಮ್ಮೆಪಟ್ಟುಕೊಳ್ಳುತ್ತೇವೆ. ನಮಗೆ ದಂಡ ಹಾಕುತ್ತೇವೆಂದು ಹೇಳಿ ಹಾಕಿದ್ದಾರೆ, ಪರವಾಗಿಲ್ಲ ದಂಡ ಹಾಕಲಿ. ನಾವು ಯಾರದೋ ಪರವಾಗಿ ಹೋರಾಟ ಮಾಡಿದ್ದೇವೆ. ನಾನು ಇರುವುದು ಚಿಕ್ಕನಾಯಕನಹಳ್ಳಿಯಲ್ಲಿ. ಶ್ರೀರಾಮರೆಡ್ಡಿಯವರು ಇರುವುದು ಬಾಗೇಪಲ್ಲಿಯಲ್ಲಿ. ನಮಗೆ ಮೈಸೂರು–ಬೆಂಗಳೂರು ಮಧ್ಯೆ ಏನೂ ಸಂಬಂಧವೂ ಇಲ್ಲ, ಸಂಪರ್ಕವೂ ಇಲ್ಲ, ಮನೆಯೂ ಇಲ್ಲ. ಆದರೆ ನಾವು ಇದರಲ್ಲಿ ಏಕೆ ಬಂದೆವೆಂದರೆ, ನಾವು ಬೆಂಗಳೂರಿಗೆ ಬಂದಾಗ ಯಾವುದೋ ಒಂದು ಸಣ್ಣ ಸಂಘಟನೆ – ನೀವು ಇವತ್ತು ವಿರೋಧ ಪಕ್ಷದ ಸಾಲಿನಲ್ಲಿ ಕುಳಿತಿದ್ದೀರಿ. ಇಂಥದೆಲ್ಲಾ ಆಗಿದೆ, ಏನಾದರೂ ಮಾಡುತ್ತೀರಾ ಎಂದಾಗ ಇಂಥ ಒಂದು ಅಗಾಧವಾದ ಬೆಳವಣಿಗೆ ಆಗಿದೆಯೇ ಎಂದು raise ಮಾಡಿರುವುದು ಬಿಟ್ಟರೆ ಯಾರದೋ ಮರ್ಜಿಗೆ ನಿಂತು ನಾವು ಮಾತನಾಡಿದವರಲ್ಲ. ಇದರಲ್ಲಿ ನಮಗೇನೂ ಆಗಬೇಕಾದುದು ಇಲ್ಲ. ಚಿಕ್ಕನಾಯಕನಹಳ್ಳೀ ಎಂ.ಎಲ್.ಎ.ಗೂ ಇದಕ್ಕೂ ಏನು ಸಂಬಂಧ? ಇವರೇಕೆ ಇದನ್ನೆತ್ತಿಕೊಂಡು ಕುಳಿತಿದ್ದಾರೆಂದು ಪ್ರಾರಂಭದಲ್ಲಿ ಕೇಳುತ್ತಿದ್ದರು. ಆದರೆ ಇಂಥ ದುರಂತಗಳನ್ನು ನೀವು ಸಹಿಸಿಕೊಂಡು ಅಧಿಕಾರವನ್ನು ಮಾಡಿದರೆ ದ್ರೋಹ ಮಾಡಿದ ಹಾಗೆ ಆಗುತ್ತದೆ. ನಾವೆಲ್ಲಾ ಹಳ್ಳಿಯಲ್ಲಿ ಹುಟ್ಟಿರುವವರು. ಹೆತ್ತ ತಾಯಿ ಒಬ್ಬಳು ತಾಯಿ, ಭೂಮಿ ತಾಯಿ ಒಬ್ಬಳು ತಾಯಿ ಎಂದು ಹೀಗೆ ಎರಡು ತಾಯಿ ಎಂದು ತಿಳಿದುಕೊಂಡು ಇವತ್ತು ಬದುಕಿರುವಂಥ ಜನ ನಾವು. ಹೆತ್ತ ತಾಯಿ ಮೇಲೆ ಆದರೂ ಹಾದರವೇ, ಭೂಮಿ ತಾಯಿ ಮೇಲೆ ಆದರೂ ಅದು ಹಾದರವೇ. ಅದನ್ನೇನಾದರೂ ರಕ್ಷಣೆ ಮಾಡದ ಮೇಲೆ ನಾವು ಮಕ್ಕಳೆಂದು ಹೇಳಿಕೊಳ್ಳುವುದಕ್ಕೆ ಲಾಯಕ್ಕಲ್ಲ. ಲಾಕಯಕ್ಕಾಗಬಾರದು. ನಾವು emotional ಆಗಿ ಏನು ಬೇಕಾದರೂ ಸಹಿಸುತ್ತೇವೆ. ನಮ್ಮ ಜಮೀನನ್ನು ಮಾರಲಿಕ್ಕೆ ಹಳ್ಳಿಯಲ್ಲಿ ಹುಟ್ಟಿದವರಾದ ನಾವು ಇಷ್ಟಪಡುತ್ತೇವೆಯೇ? ನಮ್ಮ ಜಮೀನು ಒತ್ತೆ ಇಡಬೇಕಾದರೆ as a last resort ಅದನ್ನು ತೆಗೆದುಕೊಳ್ಳುತ್ತೇವೆ. ತಾಯಿಗೆ ಬಿಟ್ಟರೆ ಎರಡನೇ ಸ್ಥಾನ ಭೂಮಿ ತಾಯಿಗೆ ಕೊಟ್ಟುಕೊಂಡು ಬಂದಿರುವವರು ನಾವು. ಅಂಥ 9 ಸಾವಿರ ಎಕರೆ ಭೂಮಿಯನ್ನು ಈ ಕಂಪನಿಯವರು ಕಬಳಿಸುವುದಕ್ಕೆ ಹೊರಟಿದ್ದಾರೆ. ಇಷ್ಟೆಲ್ಲಾ ಮಾಡಿದವರಿಗೆ ಆ ಭೂಮಿಯನ್ನು ಅಧಿಕಾರಿಗಳಾಗಿ ಸರ್ಕಾರದಲ್ಲಿದ್ದುಕೊಂಡು ಅವರ ಜೊತೆ ಎಲ್ಲಾ ಹಂತದಲ್ಲಿ ಶಾಮೀಲಾಗಿ, ಸುಮ್ಮಸುಮ್ಮನೆ ಅವರಷ್ಟಕ್ಕೆ ಅವರೇ ಜಮೀನು ಜಾಸ್ತಿ ಮಾಡುವುದು,

ಅವರೇನು ಸರ್ಕಾರವನ್ನು ಕೇಳುವ ಹಾಗಿಲ್ಲ. ಸೀದಾ ಹೋಗಿ ವೇಣುಗೋಪಾಲ್‌ರವರನ್ನು ಅವರೇ contact ಮಾಡಬಹುದೆಂದು ಹೇಳುವುದು. BMICP ನಲ್ಲಿ ಅವರನ್ನೇ member ಮಾಡುವುದು. ಅವರ consent ಇಲ್ಲದೆ ಯಾವುದೇ ಕಾರ್ಯಕ್ರಮ ಆ ಕಾರಿಡಾರ್‌ನಲ್ಲಿ ಆಗಬಾರದೆಂದು ಮಾಡುವುದು. Who is he? ರಾಷ್ಟ್ರಪತಿಯೇ? ಒಬ್ಬ contract ಮಾಡುವುದಕ್ಕೆ ಬಂದಿರುವ ಮನುಷ್ಯ line ನಲ್ಲಿರುವ ಹಳ್ಳಿಯಲ್ಲಿರುವ ಜನಗಳಿಗೆ ಮನೆ ಕಟ್ಟಿಕೊಳ್ಳಬೇಕೆಂದರೆ ಅವನು ನಮಗೆ permit ಮಾಡಬೇಕೇ? ಈತನ permit ತೆಗೆದುಕೊಂಡು ನಾವು ಪಂಚಾಯತ್‌ಗೆ licence ಕೇಳಬೇಕೇ? ಇಷ್ಟು ಅಧಿಕಾರ ಕೊಟ್ಟು ಒಂದು project ಮಾಡುವುದರಿಂದ, ಈ ನಾಡಿಗೆ ಆಗಬೇಕಾದ ಪ್ರಯೋಜನವೇನು ಎಂಬುದು ನಮಗೆ ಗೊತ್ತಾಗಬೇಕು. ವಾಸ್ತವವಾಗಿ ಮಾತನಾಡಬೇಕೆಂದರೆ, ಬೆಂಗಳೂರು–ಮೈಸೂರಿಗೆ ಆ ಕಾರಿಡಾರ್ ಬೇಕೆಂದು ಯಾರಿಗೂ ಅನಿಸುವುದಿಲ್ಲ. ಇದು ತಮಗೂ ಗೊತ್ತಿದೆ. State Highway 17 ಬಹಳ ಚೆನ್ನಾಗಿ ಆಗಿದೆ. Train services ಚೆನ್ನಾಗಿದೆ. ಇನ್ನೊಂದು parallel rail ಹಾಕಿಬಿಟ್ಟು ಇನ್ನೊಂದು train ಓಡಿಸಿಬಿಟ್ಟರೆ ಈ corridor ಅನ್ನು use ಮಾಡುವವರು ಯಾರು ಎನ್ನುವ ಪ್ರಶ್ನೆ ಮಾಡಬೇಕಾಗುತ್ತದೆ. ಇದೂ ಕೂಡ NICE ನವರಿಗೆ ಗೊತ್ತಿದೆ. ನೀವೇನಾದರೂ ಇವತ್ತು Real Estate business ಅನ್ನು ಬಂದ್ ಮಾಡಿದರೆ ನೀವು ಅವರನ್ನು contract ಅನ್ನು ಬಿಟ್ಟುಬಿಡಿ ಎಂದು ಹೇಳುವ ಅಗತ್ಯವಿಲ್ಲ. ಅವರೇ ಬಿಟ್ಟು ಹೋಗುತ್ತಾರೆ. ಈಗೇನು contract ರದ್ದು ಮಾಡುತ್ತೇವೆ, legislation ತರುತ್ತೇವೆಂದು thinking ಇಟ್ಟುಕೊಂಡಿದ್ದೀರಿ, ನನ್ನ ದೃಷ್ಟಿಯಲ್ಲಿ ಆ ಸ್ಥಿತಿಯೇ ಉದ್ಭವವಾಗುವುದಿಲ್ಲ. Real Estate ಒಂದು ಇಂಚೂ ಸಹ ಜಮೀನು ಮಾಡಲಿಕ್ಕೆ ನಿಮಗೆ framework agreement ನಲ್ಲಿ ಆಗುವುದಿಲ್ಲ ಎಂದು ಹೇಳಿದರೆ, ಅಲ್ಲಿಗೇ ಈ project ನಿಂತುಹೋಗುತ್ತದೆ. ಈ ಭೂಮಿ ಬಂದಿದ್ದು ಯಾರಿಂದ ಸರ್? ಇವರೇನು ಬಹಳ ದೊಡ್ಡ ಮನುಷ್ಯರು! ಬೆಂಗಳೂರಿಗೆ ಬಂದು industry ಮಾಡಿದ್ದಾರೆ! invest ಮಾಡುತ್ತೇನೆಂದು ಬಂದಿಲ್ಲ. ಬೆಂಗಳೂರಿನ ಹುಡುಗರಷ್ಟು ಬುದ್ಧಿವಂತರೆಂದು ಇವರು ಬಳೆದಿದ್ದಾರೆ. ಏನು brain ಇದೆ, software ನಲ್ಲಿ ನಾವೆಲ್ಲಿದ್ದೇವೆ, electronics ನಲ್ಲಿ ನಾವೆಲ್ಲಿದ್ದೇವೆಂದು ಇವತ್ತು ಬೆಂಗಳೂರು ಹುಡುಗರು ಪ್ರಪಂಚದಲ್ಲೆಲ್ಲಾ ತೋರಿಸಿಕೊಂಡಿದ್ದಾರೆ. Bangalore is recognized for the talent and cheap labour of those body workshops. ಸಿಗುತ್ತಾರಲ್ಲಾ ಕಡಿಮೆ ದುಡ್ಡಿಗೆಂದು, ಅವರಿಗೆ ಅಲ್ಲಿ ಬಹಳ ದುಡ್ಡು ಸಿಗುತ್ತದೆಂದು ನಮಗೆ ಕಾಣಬಹುದು. ಈ ದುಡ್ಡಿಗೆ ಕೆಲಸ ಮಾಡುವವರು ಆ level ಹುಡುಗರು ಎಲ್ಲೂ ಸಿಗುವುದಿಲ್ಲ. ಆ ಹುಡುಗರ talent ಅನ್ನು ಇವತ್ತು exploit ಮಾಡಿ ಯಾರೋ ದುಡ್ಡು ಮಾಡುವುದನ್ನು ತಪ್ಪಿಸಬೇಕು. ಅಕಸ್ಮಾತ್ ಅದರಿಂದ ಪ್ರಯೋಜನವಾದರೆ ತಲತಲಾಂತರದಿಂದ ಇಲ್ಲಿ ಬದುಕಿದವರಿಗೆ ಪ್ರಯೋಜನವಾಗಬೇಕು. ಈ ನಾಡಿನ talent ಅನ್ನು ನಾವು ಬಳಸುವಾಗ ಹಾಗೆ ಆಗಬೇಕು. ಇವತ್ತು ಇದೇನಿಲ್ಲ. ಯಾರೋ ಬರುವುದು, ಏನೋ ಮಾಡುವುದು ಹೋಗುವುದು ಆಗಿದೆ. ನಂತರ ನಾವು ಇವರಿಗೆ ಎಲ್ಲಾ ಕೊಡುವುದು. Global investors ಅನ್ನು meet ಮಾಡುತ್ತೇವೆಂದು ಹೇಳುವುದು,

ಕರೆಯುವುದು, ಸಾರಾಸಗಟಾಗಿ ಅವರಿಗೆ ಎಲ್ಲಾ ವಹಿಸಿಕೊಡುವುದು. ಈ ತರಹ ಯಾವುದೋ ಒಂದು corridor ಮಾಡುತ್ತೇವೆಂದು ಕರೆಯುವುದು. ಸಾರಾಸಗಟಾಗಿ ಎಲ್ಲಾ ವಹಿಸಿಕೊಡುವುದು. ಯಾವುದೇ ಕಾನೂನು, ನೀತಿ, ನಿಯಮ ಯಾವುದೂ ಇದಕ್ಕೆ ಅಡ್ಡಿ ಮಾಡಬಾರದೆಂದು ನಾವೇ ಇದಕ್ಕೆ ಒಂದು ನಿಯಮ ಮಾಡಿಕೊಂಡು ಕೊಡುವುದರಿಂದ, ರಾಜ್ಯಕ್ಕೆ ಏನು ಅನ್ಯಾಯವಾಗಿದೆ, ಇದನ್ನು ತಾವು ತಪ್ಪಿಸಲೇಬೇಕು. ನೀವು ಏನು ಮಾಡುತ್ತೀರಿ, ಬಿಡುತ್ತೀರಿ ಅದು ನಮಗೆ ಸಂಬಂಧವಿಲ್ಲ. ನಿಮಗೆ ಇಚ್ಛಾಶಕ್ತಿ ಇದ್ದರೆ ನಿಜವಾಗಿಯೂ ನೀವೇನಾದರೂ ಈ ರಾಜ್ಯಕೆ 'ನಾನು ಮುಖ್ಯಮಂತ್ರಿಯಾಗಿ ಇನ್ನೂ ಪ್ರಾಯ ಇದ್ದ ಹಾಗೆಯೇ ರಕ್ತ ಬಿಸಿ ಇದ್ದ ಹಾಗೆಯೇ ಬಂದಿದ್ದೇನೆಂದು prove ಮಾಡಬೇಕೆಂದರೆ, culprits ಅನ್ನು ಮೊದಲೇ ತಾವು book ಮಾಡಿ ಇಲ್ಲಿ ತಂದು ನಿಲ್ಲಿಸಬೇಕು. ಅವರ ಮೇಲೆ prosecution ಹಾಕಬೇಕು. ನಾವು ಎಷ್ಟು ನೊಂದಿದ್ದೇವೆ, ಇವತ್ತು ಜನಗಳ ಪರವಾಗಿ ಕೋರ್ಟಿಗೆ ಹೋಗಿ ಛೀಮಾರಿ ಹಾಕಿಸಿಕೊಂಡವರು ಎಂದು ಅನ್ನಿಸಿಕೊಂಡು ಇವತ್ತು ಕುಳಿತಿದ್ದೇವಲ್ಲಾ, ಆ ನೋವನ್ನು ಇವತ್ತು ತಾವು ಅರ್ಥಮಾಡಿಕೊಳ್ಳಬೇಕು. ನಿಜವಾಗಿ ನಿಮಗೆ ಅರ್ಥವಾದರೆ ಯಾವ್ಯಾವ ಅಧಿಕಾರಿಗಳ ಕಾಲದಲ್ಲಿ ಇದು ಅವ್ಯಾಹತವಾಗಿ ನಡೆದಿದೆ, ಯಾರೇ ಇರಲಿ, ಒಬ್ಬ ಅಧಿಕಾರಿಗೆ ಆತನದೇ ಒಂದು code of conduct ಇರಬೇಕು. ಅದನ್ನು ಮೀರಿ ಯಾರು ಕೆಲಸ ಮಾಡಿದ್ದಾರೆ, they must be punished at any cost. ಇದರಿಂದೇನಾದರೂ ರಾಜ್ಯದ ಜನತೆಗೆ ಒಳ್ಳೆಯ signal ಹೋದರೆ ಕರ್ನಾಟಕದಲ್ಲಿ ಏನಾದರೂ ಗೌರವ ಉಳಿಯುತ್ತದೆ. ನಮ್ಮ ನಮ್ಮ ವ್ಯಾಜ್ಯದಲ್ಲಿ ಈ ಅಧಿಕಾರಿಗಳು free ಆಗಿರುವ ಸ್ಥಿತಿಯನ್ನು ತಾವು ಮಾಡಬಾರದು. ನಾನು ಸ್ಪಷ್ಟವಾಗಿ ಕೇಳುತ್ತಿದ್ದೇನೆ. ನಮ್ಮ ಅಧಿಕಾರಿಗಳು ಯಾರು ಶಾಮೀಲಾಗಿದ್ದಾರೆ, ಆ 7–8 ಜನರನ್ನು ನೀವು ತಂದು ಕೋರ್ಟ್ ಮುಂದೆ ನಿಲ್ಲಿಸಿ ಅವರು ಮಾಡಿರುವ ಅಪರಾಧಗಳಿಗೆ ಏನಾದರೂ ಶಿಕ್ಷೆ ಮಾಡಿಸದೇ ಹೋದರೆ, ನೀವೂ ಕೂಡ ಶಾಮೀಲಾಗಿದ್ದೀರೆಂದು ನಾವು ಹೇಳಬೇಕಾಗುತ್ತದೆ. ಏಕೆಂದರೆ ಇದರಲ್ಲಿ ಎರಡನೇ ಮಾತೇ ಇಲ್ಲ. ಇದರಲ್ಲಿ ಯಾರ ದಾಕ್ಷಿಣ್ಯಕ್ಕೂ ಕೂಡ ನಾನು ಮತ್ತು ಮಾನ್ಯ ಶ್ರೀರಾಮರೆಡ್ಡಿಯವರು ಇಲ್ಲಿ ನಿಂತುಕೊಂಡು ಮಾತನಡಬೇಕಾಗಿಲ್ಲ. ಆಗಿರುವ ಅನ್ಯಾಯವನ್ನು ಸರಿಪಡಿಸದೇ ಹೋದರೆ, ಎಲ್ಲೋ ಒಂದು ಕಡೆ ನೀವು ಕೂಡ ಶಾಮೀಲಾಗಿದ್ದೀರೆಂದು ಹೇಳಬೇಕಾಗಬಹುದು. ನಾನು ಸನ್ಮಾನ್ಯ ಯಡಿಯೂರಪ್ಪನವರಿಗೂ ಅದೇ ಬೇಡಿಕೆಯನ್ನು ಇಡುತ್ತಿದ್ದೇನೆ. ತಾವೇನು ಆವತ್ತು ಇಲ್ಲಿ ನಿಂತುಕೊಂಡು ಭಾಷಣ ಮಾಡಿದಿರಿ ಸನ್ಮಾನ್ಯ ಯಡಿಯೂರಪ್ಪನವರೇ, ಕೃಪೆಮಾಡಿ ತಾವು ಅದನ್ನು ಒಂದು ಸಲ ಓದಬೇಕು. ಹೆಚ್ಚೇನೂ ಬೇಕಾಗಿಲ್ಲ. ತಾವು ಇಲ್ಲಿ ನಿಂತುಕೊಂಡು ಮಾಡಿರುವ ಭಾಷಣವನ್ನು ಓದಿ ಆ ಭಾಷಣದ ಕ್ರಿಯೆಯನ್ನು ಇವತ್ತೇನಾದರೂ ಆ ಭಾಷಣದ ಸಾರಾಂಶವನ್ನು ಅನುಷ್ಠಾನಕ್ಕೆ ತರುತ್ತೇನೆಂದು ಒಂದು ದೊಡ್ಡ ಮನಸ್ಸು ಮಾಡಿದರೆ, ಬಹುಶಃ ನಮ್ಮ ಹೋರಾಟ ಬೇಕಾಗಿಲ್ಲ. ಒಂದು ವಾರದೊಳಗೆ ಈ ಕೆಲಸವನ್ನು ತಾವು ಮಾಡಬಹುದೆಂದು ಹೇಳಿ ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

4.00. P.M.

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ) : ಮಾನ್ಯ ಅಧ್ಯಕ್ಷರೆ, ಅನೇಕ ಸಂದರ್ಭಗಳಲ್ಲಿ ಈ ಸದನದಲ್ಲಿ ಎದ್ದು ಮಾತನಾಡುವಂಥ ಅವಕಾಶವನ್ನು ನಾನು ಪಡೆದುಕೊಂಡಿದ್ದೆ, ಇವತ್ತು ಸ್ವಲ್ಪ ವಿಚಿತ್ರವಾದಂಥ ಸನ್ನಿವೇಶ. ನಾವೆಲ್ಲಾ ವಿರೋಧ ಪಕ್ಷದಲ್ಲಿ ಕುಳಿತಿದ್ದೇವೆ. ನಮ್ಮ ಹಿರಿಯ ಸ್ನೇಹಿತರಿಬ್ಬರು ಬೆಳಿಗ್ಗೆಯಿಂದ ಬಹಳ ವಿಸ್ತಾರವಾಗಿ ಈ ವಿಚಾರದಲ್ಲಿ ಮಾತನಾಡಿದ್ದಾರೆ. ನಾವು ಎಲ್ಲಿ ವಿರೋಧ ಪಕ್ಷದಲ್ಲಿದ್ದುಕೊಂಡು ವಿರೋಧ ಪಕ್ಷದವರು ಮಾಡಬೇಕಾಗಿರುವ ಕೆಲಸವನ್ನು ಮಾಡದೇ ಮತ್ತೇನಾದರೂ ಮಾಡಿಬಿಡುತ್ತೇವೆನ್ನುವ ಭಯ ಒಂದು ಕಡೆ. ನಮ್ಮ ಸ್ನೇಹಿತರು ಬೇರೆ ಕುಳಿತಿದ್ದಾರೆ. ಇಡೀ ಸಮಾಜಕ್ಕೆ ಹತ್ತು ಹಲವಾರು ದಿವಸಗಳಿಂದ ಇದು T.V., paper ಗಳಲ್ಲಿ ಮತ್ತೆ ಇಲ್ಲಿ ಚರ್ಚೆಯಾಗಿ ಏನೋ ನಡೆದಿದೆ ಎನ್ನತಕ್ಕಂಥ ಒಂದು ಅನುಮಾನ. ಮೊಟ್ಟಮೊದಲನೆಯದಾಗಿ, ತಮಗೆ ಮತ್ತು ತಮ್ಮ ಮುಖಾಂತರ ಸದನಕ್ಕೆ ಒಂದು ಸ್ಪಷ್ಟನೆ ಮಾಡಿಬಿಡುತ್ತೇನೆ. ಎಚ್ಚರ ತಪ್ಪಿ ಕೂಡ ಈ ಕಂಪನಿಯ ಪರವಾಗಿ ಮಾತನಾಡತಕ್ಕಂಥ ಅಗತ್ಯ ನಮಗೆ ಇಲ್ಲ. ನನಗೆ ನನ್ನ ಪಕ್ಷದ ವರಿಷ್ಠ ಮಂಡಳಿಯಿಂದ ಕೂಡ ಅವರನ್ನು ಎಲ್ಲಾದರೂ ಜಾಗ್ರತಿಯಿಂದ ನೋಡಿಕೊಳ್ಳಬೇಕು, ಅವರ ವಿಷಯ ಬಂದಾಗ ನಾವು ಹೇಗೆ ಮಾಡಬೇಕೆಂದು ಹೇಳಿ ನನಗೇನೂ ಸೂಚನೆ ಬಂದಿಲ್ಲ. ನನ್ನನ್ನು free ಯಾಗಿ ಬಿಟ್ಟಿದ್ದಾರೆ. ವೈಯಕ್ತಿಕ ಸ್ವಾತಂತ್ರ್ಯವನ್ನೂ ಕಳೆದುಕಂಡು, ಸ್ವಾಭಿಮಾನವನ್ನೂ ಬಿಟ್ಟು ಪ್ರಾಮಾಣಿಕ ಹಿನ್ನೆಲೆಯಿಂದ ಬಂದು ಇತರೆ ದೇಶದ ಆಸ್ತಿಗೆ ಕೈ ಹಾಕತಕ್ಕಂಥವರಿಗೆ ರಕ್ಷಣೆ ಮಾಡತಕ್ಕಂಥ ಸ್ಥಿತಿಯೂ ನಮಗೆ ಒದಗಿ ಬಂದಿಲ್ಲ. ಒಂದು ಸಾಬೀತಾಗಿದೆ. ಎಲ್ಲೋ ಏನೋ ಈ ವ್ಯವಹಾರದಲ್ಲಿ ಹೆಚ್ಚು ಕಡಿಮೆಯಾಗಿದೆ ಅನ್ನತಕ್ಕಂಥದ್ದು ಇದೆ. ಏನು ಸಣ್ಣಪುಟ್ಟ ಹೆಚ್ಚು ಕಡಿಮೆಯಲ್ಲ. ಬಹಳ ದೊಡ್ಡ ಪ್ರಮಾಣದ್ದೇ ಆಗಿದೆ. ಯಾರು ಮಾಡಿದರು? ಯಾವಾಗ ಮಾಡಿದರು? ಯಾರ್‍ಯಾರು ಅವತ್ತು ಎಲ್ಲೆಲ್ಲಿದ್ದರು? ದೊಡ್ಡ ದೊಡ್ಡ ಸ್ಥಾನಗಳಲ್ಲಿ ಅವತ್ತು ಇದ್ದವರೆಲ್ಲಾ ಅವರವರ ಕರ್ತವ್ಯವನ್ನು ನಿರ್ವಹಿಸಿದ್ದಾರೆಯೇ ಅನ್ನುವುದು ಪ್ರಶ್ನೆ. ಮೊಟ್ಟಮೊದಲನೆಯದಾಗಿ, ಮಾಧುಸ್ವಾಮಿಯವರು ಹೇಳಿದಂತೆ, 88ನೇ ಇಸವಿಯಲ್ಲಿ ಹೆಗಡೆಯವರು ಇಂಥ ಒಂದು ಅಗತ್ಯವನ್ನು ಮನಗಾಣುತ್ತಾರೆ. ಬೆಂಗಳೂರು–ಮೈಸೂರು ಮಧ್ಯೆ ವೇಗವಾಗಿ ಚಲಿಸುವುದಕ್ಕೆ traffic congestion ಏನಿದೆ, ಅದನ್ನು avoid ಮಾಡುವುದಕ್ಕೆ, ಸುಗಮವಾಗಿ ಓಡಾಡುವುದಕ್ಕೊಂದು ರಸ್ತೆ ಬೇಕು ಎಂಬ ಅಗತ್ಯತೆಯನ್ನು ಮನಗಾಣುತ್ತಾರೆ. ಅದರ ಮೇಲೊಂದು ಸರ್ವೆ ಮಾಡುತ್ತಾರೆ. Survey report ಪ್ರಕಾರ tenders ಕರೆಯುತ್ತಾರೆ. ಯಾರೋ ಒಬ್ಬರು ಬರುತ್ತಾರೆ. ಅದು ಸರಿ ಇಲ್ಲವೆಂದು ಅದನ್ನು ಅಲ್ಲಿಗೇ ಕೈಬಿಡುತ್ತಾರೆ. ಅದಾದಮೇಲೆ, ಅಮೆರಿಕಾ ಸಂಯುಕ್ತ ಸಂಸ್ಥಾನದ ಒಂದು ರಾಜ್ಯವಾದ massachusetts State ನವರ Governor ಇಲ್ಲಿಗೆ ಬರುತ್ತಾರೆ. Sister State Relationship Programme ನಲ್ಲಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳು, Massachusetts Governer ಇಬ್ಬರ ಮಧ್ಯೆ ಮೊದಲನೇ ಒಪ್ಪಂದ ಆದದ್ದು. ಮಾಧುಸ್ವಾಮಿಯವರು ಹೇಳಿದಂತೆ, ಅವರ ಜೊತೆ ಮೂರು companies ಬೇರೆ ಬರುತ್ತವೆ. SABOO WANSO ಮತ್ತು

ಇನ್ನೊಬ್ಬರು ಯಾರೋ ಮೂರು ಜನ ಬರುತ್ತಾರೆ ನನಗೆ ಒಂದು ಕುತೂಹಲ ಏನೆಂದರೆ, Sister State relationship is O.K. ಈ Corridor programme ಗೆ ಅವರು ಏಕೆ ಬರಬೇಕು ಅಥವಾ ಬಂದರಲ್ಲವಾ ನಮ್ಮಗೆ ಇಂಥದ್ದು ಒಂದು ರಸ್ತೆಯ ಅಗತ್ಯವಿದೆ ಎಂದು ನಾವೆಲ್ಲರೂ ಒಪ್ಪಿದ್ದೇವೆ. ಇದಕ್ಕೆ ಅರ್ಹರಾದವರು ಯಾರ್‍ಯಾರಿದ್ದೀರಿ ಎಂದು ಹೇಳಿ ಅವತ್ತೇ ಒಂದು ಜಾಹಿರಾತು ಹೊರಡಿಸಿ, eligible people ಎಲ್ಲರ ಕಡೆಯಿಂದ ನಾವು applications, tenders invite ಮಾಡಿ ದರಲ್ಲಿ ಇಂಥಿಂಥ ಕಾರಣಗಳಿಗೆ ನಾವು ಇವರನ್ನು fix ಮಾಡಿದ್ದೇವೆ ಎಂದು ಹೇಳಿದ್ದಿದ್ದರೆ, ಪರವಾಗಿರಲಿಲ್ಲ. ಯಾವ ಅಶರೀರವಾಣಿ ಬಂದು ಇವರನ್ನು ಅಪ್ಪಿ ಆಲಿಂಗನ ಮಾಡಿಕೊಳ್ಳಬೇಕು, ಇವರ ಜೊತೆಗೆ ಒಪ್ಪಂದ ಮಾಡಿಕೊಳ್ಳಬೇಕೆಂದು ಹೇಳಿತು? ಗೊತ್ತಿಲ್ಲ. ಕರ್ನಾಟಕ ರಾಜ್ಯಕ್ಕೆ ಏನು ನಿರ್ಬಂಧ ಅವತ್ತು ಇತ್ತೆಂಬುದು ಗೊತ್ತಿಲ್ಲ. ನನ್ನ ಅನುಮಾನ ಅಲ್ಲಿಂದಲೇ ಪ್ರಾರಂಭವಾಗುವುದು. ಏಕೆಂದರೆ, ಕೋಟ್ಯಾಂತರ ರೂಪಾಯಿ project. ಸಾವಿರಾರು ಕೋಟಿ ರೂಪಾಯಿ project. Why only them? ಯಾವುದಾದರೊಂದು ಪ್ರಯತ್ನವನ್ನು ಉಳಿಕೆ ಅವರು ಯಾರಾದರೂ ಇಂಥ ಒಂದು programme ಅನ್ನು execute ಮಾಡುವುದಕ್ಕೆ ಅರ್ಹರಿದ್ದಾರೆಯೇ? ಇಲ್ಲವೇ? ಎನ್ನತಕ್ಕಂಥದ್ದನ್ನು ಹುಡುಕತಕ್ಕಂಥ ಪ್ರಯತ್ನ ಏನಾದರೂ ಮಾಡಿತ್ತಾ? ಮಾಡಿಲ್ಲ. So that question remains unanswered. ಅವತ್ತಿಗೆ he was O.K. ಅನಂತರ High Level Committee ಮಾಡುತ್ತಾರೆ. P.W.D. Minister Chairman ರಾಗಿರುತ್ತಾರೆ. ಉದಾಸಿಯವರಾ? ಕೌಜಲಗಿಯವರು ಇದ್ದರು. ಅವರೊಂದು report ಕೊಡುತ್ತಾರೆ. ಈ ಮಧ್ಯೆ Indian Company Law ಪ್ರಕಾರ, ನಾವು consortium ಜೊತೆಗೆ ಒಪ್ಪಂದ ಮಾಡಿಕೊಳ್ಳಲಿಕ್ಕೆ ಕಾನೂನು ಅವಕಾಶ ಕೊಡುವುದಿಲ್ಲ. ಆದ್ದರಿಂದ, ಅವರಿಗೊಂದು ಸೂಚನೆ ಕೊಟ್ಟರೆ ಅವರು NICE ಅವತಾರದಲ್ಲಿ ಬರುತ್ತಾರೆ. ಇವತ್ತು ನಾವೀಗ NICE ಅವತಾರವನ್ನು ಚರ್ಚೆ ಮಾಡುತ್ತಿದ್ದೇವೆ. ಇದು nice ಅಲ್ಲವೇ ಅಲ್ಲ, ಬಹಳ rough. Nandi ಹೋಗಿ NICE ಬಂತು. Nandi ಸವೆದು ಹೋಗಿ nice ಆಯಿತು. ಹೇಳಿದ್ದೇ ಹೇಳಿ ಸಮಯ ವ್ಯರ್ಥ ಮಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ. State High Level Committee ಯಾವುದನ್ನು ಲೋಕೋಪಯೋಗಿ ಸಚಿವರ ನೇತೃತ್ವದಲ್ಲಿ ರಚನೆ ಮಾಡಲಾಗಿತ್ತು. ಅವರು ಒಂದು ವರದಿಯನ್ನು ಕೊಡುತ್ತಾರೆ. ಆ ವರದಿಯನ್ನನುಸರಿಸಿ frame work agreement ಆಗುತ್ತದೆ. ಆ frame work agreement ಮೂಲ ಆಧಾರ. ಆ company ಯನ್ನು, ನಮ್ಮ ರಾಜ್ಯ ಸರ್ಕಾರವನ್ನು ಬಂಧನ ಮಾಡಿ ಇಟ್ಟಿರತಕ್ಕಂಥ್ದು. Frame work agreement ಆದಾಗ ಯಾರು ಸಹಿ ಹಾಕಿದರು? ಯಾರ್‍ಯಾರು ಯಾವ್ಯಾವ ಸ್ಥಾನದಲ್ಲಿದ್ದರು? ಸರ್ಕಾರ ಇತ್ತೇ? ಇರಲಿಲ್ಲವೇ? Law Department ಇತ್ತೇ ಆ frame work agreement ಅನ್ನು ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಇಷ್ಟೊಂದು ಆಘಾತಕಾರಿ ಒಪ್ಪಂದ ಯಾವುದೇ ಸರ್ಕಾರ ಯವುದೇ ಸನ್ನಿವೇಶದಲ್ಲಿ ಯಾವ ಕಂಪನಿ ಜೊತೆಗೂ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ. It is atrocious, totally one sided. I have nothing to gain or loose. I have gone

though the frame work of tender. ಅದರ Contents ಎಲ್ಲೋ ಒಂದು ಕಡೆಗೆ ನಮ್ಮನ್ನು ಬಾಧಿಸುತ್ತದೆ. ಅವರು 7 township ಕೇಳಿದರು. ಇವರು 5 township ಗೆ ಒಪ್ಪಿಕೊಂಡರು. Total ಜಮೀನು ಮೊದಲು estimate 18 ಸಾವಿರ ಚಿಲ್ಲರೆಗೆ ಬರುತ್ತದೆ. ಆಮೇಲೆ, 20,193 ಎಕರೆಗೆ ಬರುತ್ತದೆ. ಅದರಲ್ಲಿ ಖಾಸಗಿ ಜಮೀನು 13,237 ಸರ್ಕಾರಿ ಜಮೀನು 6,950. ಪ್ರಕಾಶ್ ಸಾಹೇಬರು revenue ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಖರ್ಗೆ ಸಾಹೇಬರು revenue ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ನಮ್ಮ ದೂರದ ಊರುಗಳಲ್ಲಿ ಸರ್ಕಾರಿ ಜಾಗ ಒಂದು ಎಕರೆ ಸಿಗುವುದಿಲ್ಲ. ಹೇಗೆ 6,900 ಚಿಲ್ಲರೆ ಎಕರೆ ಜಮೀನು, ಸರ್ಕಾರದ ಜಮೀನು ಬೆಂಗಳೂರು–ಮೈಸೂರು ಮಧ್ಯೆ ಲಭ್ಯವಾಗುತ್ತದೆನ್ನತಕ್ಕಂಥ ಅಂಕಿ–ಅಂಶಗಳನ್ನು.........

(ಅಡಚಣೆ)

Sri K.R. Ramesh Kumar : Government land 6,906 acres, private land 13,237 acres; Total 20,193 acres. This was the requirement of the project. ಸರ್ಕಾರಿ ಜಾಗ ಇಷ್ಟೆಂದು ಹೇಳಲಾಗಿದೆ. ಮೈಸೂರು ಮತ್ತು ಬೆಂಗಳೂರು ನಡುವೆ ರಸ್ತೆ ಮಾಡುವುದಕ್ಕೆ ಶ್ರೀರಂಗಪಟ್ಟಣದ ಊರಿಗೆ ಹೋಗಿ ಏನು ಜಾಗವನ್ನು ತರುವುದಕ್ಕೆ ಆಗುವುದಿಲ್ಲ. ಆಜುಬಾಜು ಜಾಗ ಇರಬೇಕಲ್ಲವೆ? ಇಷ್ಟು ದೊಡ್ಡ ಪ್ರಮಾಣದ ಜಾಗದ ಬಗ್ಗೆ ಯೋಚನೆ ಮಾಡುವುದಾದರೆ ಹೇಗೆ ಸಾಧ್ಯ? ಎಷ್ಟು ಪುಣ್ಯಾತ್ಮರು, ಎಂಥ ಒಳ್ಳೆಯ ಜನ, ಎಂಥ ನಾಗರೀಕರು ಮತ್ತೆ ಎಂಥ ಲಾ–ಅಬೈಡಿಂಗ್ ಸಿಟಿಜನ್ಸ್. ಇವತ್ತಿನದಿವಸ ಸರಿಯಾಗಿ ಬಂದೋಬಸ್ತ್ ಮಾಡದೇ ಇದ್ದರೆ ವಿಧಾನಸೌಧದೊಳಗೆ ಕೂಡ ಸಂಸಾರಿಗಳೂ ಬಂದು ಬಿಡುತ್ತಾರೆ. ಅಂಥದರಲ್ಲಿ ಇಷ್ಟು ಜಾಗ ಸಿಗುತ್ತದೆಂದು ಅವರ ಊಹೆಗೆ. ಬಂದಿರತಕ್ಕಂಥದ್ದಕ್ಕೆ ನಾವು ಅವರನ್ನು ಅಭಿನಂದಿಸಬೇಕಾಗುತ್ತದೆ. ಏಕೆಂದರೆ, ಇಂಥವೆಲ್ಲಾ ಆಧಾರಗಳನ್ನು ಇಟ್ಟುಕೊಂಡೇ ಕೊಟ್ಟಿರತಕ್ಕಂಥದ್ದು. 3.21–Government of Karnataka shall use its best efforts to and cause its governmental instrumentalities to promulgate, facilitate, initiate, advocate or amend to full extent possible under the laws of India. Any and all enactments, acts and legislations necessary or desirable to enable Government of Karnataka or any Government of Karnataka government instrumentality to obtain, procure and or transfer the land to the company for the purposes set forth in this agreement. ಏನು ಪ್ರೈಯಾರಿಟಿನೋ ನೋಡಿ. ನಮ್ಮಲ್ಲಿ ಅಸ್ತಿತ್ವದಲ್ಲಿರತಕ್ಕಂಥ ಯಾವುದೇ ಶಾಸನಗಳನ್ನು ನಾವು ಏಕ್‌ದಂ ಅಟೆನ್‌ಷನ್‌ಗೆ ಬಂದು ಅವುಗಳೆಲ್ಲವನ್ನೂ ತಿದ್ದುಪಡಿ ಮಾಡಿ ಯಾವುದೇ ಕಾರಣದಿಂದಲೂ ಕೂಡ ತಡೆಯಾಗದೆ ತಕ್ಷಣ ಅವರಿಗೆ ಜಮೀನು ಕೊಡುವ ವ್ಯವಸ್ಥೆಗೆ ನಾವು ಬದ್ಧರಾಗುತ್ತೇವೆ. ಹಳೆಯ ಕಾಲದಲ್ಲಿ ಮಹಾರಾಜರು ಬರುತ್ತಾರೆಂದರೆ ಇಲ್ಲಿಂದಲೇ ಎಲ್ಲರೂ ಬೆನ್ನು ಬಗ್ಗಿಸಿಕೊಂಡು ಬುದ್ದಿ ಎಂದು ಹೇಳುವುದಿಲ್ಲವೇ, ಅದೇ ರೀತಿಯಗಿ ಇದೂ ಕೂಡ

ಆಗಿದೆ. ಅವತ್ತಿನ ಕರ್ನಾಟಕ ಸರ್ಕಾರ, ಜನಪ್ರತಿನಿಧಿಗಳ ಸರ್ಕಾರ ಮಾಡಿದಂಥ ಬಹಳ ದೊಡ್ಡ ಉಪಕಾರ! ಆ ಸಂದರ್ಭದಲ್ಲಿ ಮಾನ್ಯ ಜೆ.ಹೆಚ್. ಪಟೇಲರು ಇದ್ದರೆನಿಸುತ್ತದೆ. Government of Karnataka covenants that it shall provide all assistance reasonably requested by the company with respect of clearance and preparations of the land for development in the manner contemplated herein. 3.42: Government of Karnataka shall use its best efforts to cause KeB to provide the company with the amount of power required and necessary for construction and every day use of the various components of the Infrastructure Corridor project until such time as the power plants are put into service and arrival to meet the power needs of such component of the Infrastructure Corridor Project. The company shall use its best efforts to construct the transmission lines required to carry such power to the various components of the Infrastructure Corriodor Project. Government of Karnataka shall cause KEB to make available the inter-connections necessary to carry the power from KEB power grid to the Infrastructure Corridor Project. ನಾನು ಇವತ್ತಿನ ದಿವಸ 5–10 ಬೋರ್‌ವೆಲ್ ಹಾಕಿ ಆರನೇಯದು ಅಥವಾ ಏಳನೆಯ ಬೋರ್‌ವೆಲ್ ಸಕ್ಸಸ್ ಆಗಿ 5 ಹೆಚ್‌ಪಿ ಮೋಟರ್‌ಗೆ ಪವರ್ ಕನೆಕ್ಷನ್ ಬೇಕೆಂದರೆ ಟ್ರಾನ್ಸ್‌ಫಾರ್ಮರ್‌ಗೆ ದುಡ್ಡು ಕಟ್ಟಬೇಕು, ಡೆಪಾಜಿಟ್ ರೆಡಿ ಮಾಡಬೇಕು ಅನಂತರ ಕಾಯಬೇಕು. ನಾನು ಇಲ್ಲೀಗಲ್ ಆಗಿ ತೆಗೆದುಕೊಳ್ಳುವ ಹಾಗಿಲ್ಲ. ಏಕೆಂದರೆ, ಇಲ್ಲಿ ಕೋಟ್ಯಾಂತರ ಜನ ರೈತರು ಬದುಕುವಂಥ ವಿಚಾರವಾಗಿದೆ. ನಮ್ಮ ಪ್ರೈಯಾರಿಟಿಸ್ ಹೇಗೆ ಇರುತ್ತವೆಂಬುದನ್ನು ಹೇಳುತ್ತಿದ್ದೇನೆ. ಇದಕ್ಕೆ ಮೂಲ ಕಾರಣ ಏನೆಂದರೆ, ಇವೆಲ್ಲಾ ನಮಗೆ ತೋಚುವುದಿಲ್ಲ. ಅಂದರೆ ರಾಜಕಾರಣಿಗಳಿಗೆ ಇವೆಲ್ಲಾ ನಮಗೆ ತೋಚುವುದಿಲ್ಲ. ಈ ಅಧಿಕಾರಿಗಳು ಇರುತ್ತಾರೆ ನೋಡಿ ಅವರಂಥ ನೀಚರು ಮತ್ಯಾರೂ ಈ ಜಗತ್ತಿನಲ್ಲಿ ಹುಟ್ಟುವುದಕ್ಕೆ ಸಾಧ್ಯವಿಲ್ಲ. ಈ ಎಲ್ಲಾ ನೀಚ ಆಲೋಚನೆಗಳಿಗೆಲ್ಲಾ ಬರುವುದೆಲ್ಲವೂ ಅವರಿಗೆ ಮಾತ್ರ. ನಾವು ದರಿದ್ರರು, ನಮಗೇನಾದರೂ ಸ್ವಲ್ಪ ಟಿಪ್ಸ್ ಕೊಟ್ಟುಬಿಡುತ್ತಾರೆ. ಅದಕ್ಕೆ ನಾವು ಖುಷಿಯಾಗಿಬಿಡುತ್ತೇವೆ. ನಮ್ಮ ಸಹಿಯಿಂದ ನಮ್ಮ ಬೆನ್ನು ಹಿಂದೆ ಉಳಿದೆಲ್ಲಾ ಅರೆಂಜ್‌ಮೆಂಟ್‌ನೆಲ್ಲಾ ಇವರು ಮಾಡಿಕೊಳ್ಳುತ್ತಾರೆ. ಆಪಾದನೆಗೆ ಸಿಕ್ಕಿ ಹಾಕಿಕೊಳ್ಳುವವರು ನಾವು. ಈ ಭಾಷೆಯೆಲ್ಲವನ್ನೂ ಉಪಯೋಗಿಸಿ ಈ ಅಗ್ರಿಮೆಂಟ್ ಕ್ಲಾಜ್ ತಯಾರು ಮಾಡುತ್ತಾರೆ. ಆದರೆ, ಒಬ್ಬ ಬಡವನ ಪಂಪ್‌ಸೆಟ್‌ಗೆ ವಿದ್ಯುತ್ ಕೊಡತಕ್ಕಂಥದ್ದರ ಬಗ್ಗೆ ಇಷ್ಟೇ ಪರಿಣಾಮಕಾರಿಯಾಗಿ ಒಂದು ಸುತ್ತೋಲೆ ಹೊರಡಿಸಬೇಕೆಂದು ಇವರಿಗೆ ಗೊತ್ತಾಗುವುದಿಲ್ಲವೆ? ಇಷ್ಟು ಇಂಗ್ಲೀಷ್ ಬರತಕ್ಕಂಥವನಿಗೆ ಅದು ಮಾಡುವುದಕ್ಕೆ ಬರುವುದಿಲ್ಲವೆ? ಆತನ ಬಗ್ಗೆ ಆಲೋಚನೆ ಮಾಡುವುದಕ್ಕೆ ನಮಗೆ ಗೊತ್ತಿಲ್ಲ. ಮತ್ತೆ ಇವರಿಗೆ ಬೇರೆ ಕೆಲಸವಿಲ್ಲ. ನಾವು ಇರುತ್ತೇವೆಯೋ ಅಥವಾ

ಹೋಗುತ್ತೇವೆಯೋ ಅಲ್ಲಿಯವರೆಗೆ ಎಷ್ಟು ವ್ಯಾಪಾರ ಆಗುತ್ತದೆಯೋ ಆಗಲಿ ಎಂದು ಇರುತ್ತಾರೆ. ಇದು ಹೌದಲ್ಲವೇ ಮಾನ್ಯ ಅಧ್ಯಕ್ಷರೆ.

ಅಧ್ಯಕ್ಷರು : ಅವರು ನೀಚರೆಂದು ಗೊತ್ತಿದ್ದರೂ ಕೂಡ ಅಂಥ ನೀಚರಿಗೆ ರಕ್ಷಣೆ ಏಕೆ ಸಿಗುತ್ತಿದೆ?

ಶ್ರೀ ಕೆ.ಆರ್. ರಮೇಶ್ ಕುಮಾರ್ : ನೀವು ಪ್ರಾಮ್ಟ್ ಮಾಡಿದ್ದು ನಿಜವಾಗಿಯೂ ಕೂಡ ಬಹಳ ಸಂತೋಷ. ಒಂದು ಈ ವಿಷಯವನ್ನು ಈ ಸದನದಲ್ಲಿ ಈಗಾಗಲೇ 10 ಸಲ ಹೇಳಿದ್ದೇನೆ. ಇವತ್ತು ಮತ್ತೆ 11ನೇ ಸಲ ಹೇಳವುದಕ್ಕೆ ಇಷ್ಟಪಡುತ್ತೇನೆ. ಒಂದನೆಯದು ದುಡ್ಡು, ಎರಡನೆಯದು ಜಾತಿ. ಅಂದರೆ ಆತ ನಮ್ಮ ಜಾತಿಯವನ್ನು ಆಗಿಬಿಟ್ಟು ಊರ ಹಲ್ಕವೆಲ್ಲವನ್ನೂ ಮಾಡಿ ಬಂದರೂ ಕೂಡ ನೀನು ನನಗೆ ಹತ್ತಿರದವನೇ ಇಲ್ಲದಿದ್ದರೆ ಆತನ ಹತ್ತಿರ ಹೇರಳವಾಗಿ ದುಡ್ಡಿದ್ದು ನನಗೆ ಕೊಡಬಲ್ಲವನೇ ಆದರೆ ಆತ ಏನು ಅಪರಾಧ ಮಾಡಿದರೂ ಕೂಡ ಆತ ನನ್ನವನೇ. ಇದಕ್ಕೆ ವಿಟಮಿನ್–ಸಿ ಎಂದು ಕರೆಯಿರಿ. ಅಂದರೆ, ಕ್ಯಾಸ್ಟ್ ಆರ್ ಕ್ಯಾಪ್. ಇವೆರಡರಲ್ಲಿ ಒಂದು ಇದ್ದರೆ ನೀಚರು ಸರ್ವೈವಲ್ ಆಗುವುದು ಬಹಳ ಸುಲಭ. ಯಾವ ಅಧಿಕಾರಿ ಕೆಐಎಡಿಬಿ ಸಂಸ್ಥೆಯಲ್ಲಿದ್ದು ತಪ್ಪು ಮಾಡುತ್ತಾನೆಂದು ಹೇಳುತ್ತಾರೆ. ಆತನ ಬಗ್ಗೆ ದೊಡ್ಡ ಬಹಳ ವ್ಯಾಖ್ಯಾನ ಬರುತ್ತದೆ ಮತ್ತೆ ಅವರ ಬಗ್ಗೆ ಘೋಷಣೆ ಕೂಡ ಬರುತ್ತದೆ. ಆದರೆ, ಅವರು ಮುಖ್ಯವಾದ ಜಾಗಕ್ಕೆ ಬಂದು ಕುಳಿತುಕೊಂಡಿದ್ದಾರೆ. ಅವರುಗಳು ಇವತ್ತಿನದಿವಸ ಅತ್ಯಂತ ಪ್ರಮುಖವಾದಂಥ ಜಾಗದಲ್ಲಿಯೇ ಬಂದು ಕುಳಿತುಕೊಂಡಿದ್ದಾರೆ. ಏಕೆ? ಹೇಗೆ? ನಾನು ಈ ಎಲ್ಲಾ ವಿವರಗಳಿಗೆ ಹೋಗುವುದಿಲ್ಲ. I leave it to the imagination of people. ಪ್ರಾಮಾಣಿಕತೆಯನ್ನು ಬೋಧನೆ ಮಾಡುವುದಕ್ಕೆ ಬಹಳ ಸುಲಭ. ಆದರೆ, ಅದನ್ನು ಪ್ರಾಕ್ಟಿಸ್ ಮಾಡಬೇಕಾದರೆ ಬಹಳ ಕಷ್ಟ. It is very difficult. Government of Karnataka will perform its obligations and provide the assistance required of it in connection with the industrial and commercial development of the townships by the company subject to applicable laws. Government of Karnataka shall honour and acquiesce its design development and construction of the townships by the company in the manner contemplated in this agreement. ಒಂದಲ್ಲ ಎರಡಲ್ಲ. ಎಷ್ಟು ಶಾಕಿಂಗ್ ಆಗಿರುತ್ತದೆಂದರೆ......

ಶ್ರೀ ಎಂ.ಪಿ. ಪ್ರಕಾಶ್ : ಒಂದು ನಿಮಿಷ ಮಾನ್ಯ ರಮೇಶ್‌ಕುಮಾರ್‌ರವರೆ, ಸತ್ಯ ಹೇಳಬೇಕೆಂದು ಬಹಳ ಮನಸ್ಸಿನಿಂದ ಆತ್ಮ ಸಾಕ್ಷಿ ಹೇಳುತ್ತಿದೆ. ಅನಿವಾರ್ಯವಾಗಿ ತಾವು ಅಲ್ಲಿರತಕ್ಕಂಥದ್ದರಿಂದ ನೀವು ಎಲ್ಲರನ್ನೂ ಹರಾಜಿಗೆ ಹಾಕಿ. ಏಕೆಂದರೆ, you are so eloquent speaker, you are so articulate. Today, somehow I am feeling that you are unable to ending....... ಎಲ್ಲಿ ಯಾರನ್ನು ಸೇಫ್‌ಗಾರ್ಡ್ ಮಾಡುತ್ತಿದ್ದಿರೋ? Just that is the whole trouble.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ನಾನು ನನ್ನ ಪ್ರಾರಂಭಿಕ ಮಾತಿನಲ್ಲಿಯೇ ಈ ಮಾತನ್ನು ನಾನು ಹೇಳಿದೆ. ಎಚ್ಚರ ತಪ್ಪಿ ಕೂಡ ನಾನು ಅಪರಾಧ ಮಾಡಿರತಕ್ಕಂಥವನ ಪರವಾಗಿ ವಕಾಲತ್ ಹಾಕುವುದಕ್ಕೆ ಆಗುವುದಿಲ್ಲ. ಆವೇಶದಲ್ಲಿ, ರಭಸದಲ್ಲಿ ಮಾತನಾಡಿ ತಪ್ಪು ಮಾಡುವುದಕ್ಕೆ ನಾನು ಸಿದ್ಧನಿಲ್ಲ. ನಾನು ಮುಂದೆ ಏನು ಆಗುತ್ತಿನೋ ನನಗೆ ಗೊತ್ತಿಲ್ಲ. ಈ ಸದನದಲ್ಲಿ ಇವತ್ತು ನಾನು ಮಾತನಾಡತಕ್ಕಂಥ ಮಾತುಗಳು ರೆಕಾರ್ಡ್‌ನಲ್ಲಿ ನಿಲ್ಲುತ್ತದೆ. ಆದ್ದರಿಂದಲೇ ಇವತ್ತು ಹೆಚ್ಚು, ಬಹಳ ಆಲೋಚನೆ ಮಾಡಿ ಇವೆಲ್ಲವನ್ನೂ ಓದಿಕೊಂಡೇ ಉದ್ದೇಶಪೂರ್ವಕವಾಗಿ ಹೇಳುತ್ತಿದ್ದೇನೆ. ಇದರಲ್ಲಿ ನಾನೇನೂ ಮುಚ್ಚಿಕೊಳ್ಳತಕ್ಕಂಥದ್ದು ಮತ್ತು ಯಾರ ಪರವಾಗಿ ನಿಂತುಕೊಳ್ಳತಕ್ಕಂಥದ್ದೂ ಏನಿಲ್ಲ. ಆದರೆ, ಏನು ಹೇಳಬೇಕೆಂದು ಗೊತ್ತಿಲ್ಲವೆಂದು ನಾನು ನಿಂತುಕೊಂಡಿಲ್ಲ. ನಾನು ಹೇಳಬೇಕೆಂದು ಇದ್ದೇನೆಯೋ ಅದನ್ನು ನಾನು ಹೇಳಿಯೇ ಹೇಳುತ್ತೇನೆ. ಹೇಳಲಾರದಂಥ ಸ್ಥಿತಿ ಕೂಡ ನನಗೆ ಬಂದಿಲ್ಲ. ಅನೇಕ ಸಂದರ್ಭಗಳು ಆ ರೀತಿಯಾಗಿ ಬಂದಂಥ ಸಂದರ್ಭದಲ್ಲಿ ನಾನು ತಿರುಗಿ ಬಿದ್ದಿದ್ದೇನೆ ಹೊರತು ಸರೆಂಡರ್ ಆಗಿಲ್ಲ. ಆರ್ಟಿಕಲ್–14, ಎಂಪವರ್ಡ್ ಕಮಿಟಿ. ಇದಕ್ಕೆ ಫ್ರೇಮ್‌ವರ್ಕ್ ಅಗ್ರಿಮೆಂಟ್ ರಚಿಸಿದ ಮೇಲೆ ಫ್ರೇಮ್‌ವರ್ಕ್ ಅಗ್ರಿಮೆಂಟ್‌ನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಒಂದು ಎಂಪವರ್ಡ್ ಕಮಿಟಿ ಮಾಡುತ್ತಾರೆ. ಆ ಎಂಪವರ್ಡ್ ಕಮಿಟಿಯನ್ನು ಬಹಳ ಚೆನ್ನಾಗಿ ಮಾಡಿದ್ದಾರೆ. Provisions of the frame work agreement ಏನು ಇದೆ ಇದನ್ನು ಇಂಪ್ಲಿಮೆಂಟ್ ಮಾಡುವುದರ ಜೊತೆಗೆ ಅದಕ್ಕೆ ಒನ್‌ವೇ, ಅವನ ಕಂಪನಿ ವಿಚಾರದಲ್ಲಿ ನಆವು ಬಹಳ ಸಲುಗೆಯಿಂದ ಇರಬೇಕು. ಆದರೆ ಅವನು ನಮ್ಮ ವಿಷಯದಲ್ಲಿ ಕರಾರುವಕ್ಕಾಗಿ ನಡೆದುಕೊಳ್ಳಬಹುದು. It is very interestingly done. Have you read Article 14? It is a one-way traffic, more or less. I don't want to waste the time of House that is why as for as possible I am-mentioning ನಾನು ಒಂದು ನೋಟ್ ಮಾಡಿಕೊಂಡು ಬಂದಿದ್ದೇನೆ. breefly. while it is mentioned that the Empowered Committee shall not have authority to modify or alter such rights and obligations other than through a written agreement between the party hereto or the parties thereto under 4.1.2. But under 4.1.3, it is mentioned that Government of Karnataka on behalf of itself and Government of Karnataka instrumentalities covenants that the company may rely on the opronouncements and decisions of the Empowered Committee as pronouncements and decisions of Government of Karnataka or the relevant Government of Karnataka governmental instrumentalities in connection with the project and that such pronouncements and decisions

shall be made by Government of Karnataka in expeditions and timely manner under para 4.1.3. ಇವರು ಏನೇನು ಮಾಡಬೇಕು ಅದೆಲ್ಲವನ್ನೂ ಬೇಗ ಬೇಗ ಮಾಡಬೇಕು. ಸರ್ಕಾರ ತಮ್ಮ ವತಿಯಿಂದ ನಿರ್ವಹಿಸಬೇಕಾದ ಕೆಲಸವನ್ನು ಶರವೇಗದಲ್ಲಿ ಮಾಡಬೇಕು. ಆದರೆ ಅವನಿಗೆ ಯಾವ ಶರತ್ತುಗಳೂ ಇಲ್ಲ. ಇದು ಎಂಪವರ್ಡ್ ಕಮಿಟಿಯ ರಚನೆಯ ಉದ್ದೇಶ. ಮಾನ್ಯ ಪ್ರಕಾಶ್‌ರವರೇ, 5.2 ನಲ್ಲಿ, "Government of Karnataka acknowledges and agrees that the company may grant a pari pasu security interest in the land to the lenders. What is this pari pasu? It is a Roman terminology. ನಮ್ಮ ಇಂಡಿಯನ್ ಕಂಪನೀಸ್ ಆಕ್ಟ್ 529.ಎ ನಲ್ಲಿ ಬರುತ್ತದೆ. ಒಂದು ಕಂಪನಿಗೆ ಹಾಗೂ ಇನ್ನೊಂದು ಸಂಸ್ಥೆಗೆ ಒಪ್ಪಂದವಾದಾಗ ಅವನು ದಿವಾಳಿ ಎದರೆ ಲಾಸ್ ಆಗಿ ಹೋಗಿ ಬಿಟ್ಟರೆ ಅದರ ನಿರ್ವಹಣೆ ಮತ್ತು ಕೆಲಸಗಾರರ ನಿರ್ವಹಣೆ ಮತ್ತೊಂದು ಅವುಗಳಿಗೆ ಸಂಬಂಧಪಟ್ಟಂತೆ, ಇದರಲ್ಲಿಯೂ ಕೂಡ ಅವನು ಪಾಪರ್ ಆಗಿ ಎದ್ದು ಹೋದರೆ ಜವಾಬ್ದಾರಿಯನ್ನು ನಾವು ಹೊತ್ತುಕೊಳ್ಳಬೇಕಂತೆ, ಮಾಧುಸ್ವಾಮಿಯವರೇ, In 5.2, pari-pasu, Government of Karnataka undertakes the responsibility. ಯಾರು ಇದ್ದಿರಬಹುದು ಇದಕ್ಕೆ ಡ್ರಾಫ್ಟ್ ಮಾಡಿದವರು ಒಪ್ಪಿಗೆ ಕೊಟ್ಟವರು ಇದಕ್ಕೆ ಬದ್ಧರಾದವರು ಹೇಗೆ ಅವರನ್ನು ನಾವು ಒಳ್ಳೆಯವರು ದೊಡ್ಡ ಮನುಷ್ಯರು ಎಂದು ಕರೆಯುವುದಕ್ಕಾಗುತ್ತದೆ?

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಅಗ್ರಿಮೆಂಟ್ ಮಾಡುವಾಗ ಎಲ್ಲಾ ಶಾಸಕರಿಗೆ ತಿಳಿಯುವ ಭಾಷೆಯಲ್ಲಿ ಮಾಡುವುದಕ್ಕೆ ತೊಂದರೆ ಏನು? ಬಹಳ ಜನರಿಗೆ ತಿಳಿಯದಿರುವ ಭಾಷೆಯಲ್ಲಿ ಏಕೆ ಅಗ್ರಿಮೆಂಟ್ ಆಗುವುದಿಲ್ಲ?

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಅವರಿಗೆ ಲೋಕಲ್ ಟ್ಯಾಕ್ಸೆಸ್ exemption ಕೊಡಬೇಕು. ಸ್ಟ್ಯಾಂಪ್ ಡ್ಯೂಟಿ exemption ಕೊಡಬೇಕು, indemnifiction ಎಲ್ಲೋ ಒಂದು ಕಡೆ ಬರುತ್ತದೆ. Indemnify ಮಾಡುವುದು ಎಂದರೆ ಅವರ ಸಾಲಸೋಲಗಳಿಗೆ ನಮ್ಮ ಭೂಮಿ ಏನಿದೆ ಅವನಿಗೆ ನಾವು titles transfer ಮಾಡಿಕೊಡಬೇಕು. ಮಾಮೂಲಾಗಿ ನಮ್ಮ ರೆವಿನ್ಯೂ ಡಿಪಾರ್ಟ್‌ಮೆಂಟ್ ರೂಲ್ಸ್ ಪ್ರಕಾರ ಒಬ್ಬರ ಆಸ್ತಿಯನ್ನು ಇನ್ನೊಬ್ಬರು ಕ್ರಮಬದ್ಧವಾಗಿ ಕ್ರಯ ಮಾಡಿಕೊಂಡರೆ ಅದಕ್ಕೆ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿ ಸಬ್ ರಿಜಿಸ್ಟಾರ್ ಆಫೀಸಿನಲ್ಲಿ ಸ್ಟ್ಯಾಂಪ್ ಡ್ಯೂಟಿಯನ್ನು ಕಟ್ಟಿ ಸಾಕ್ಷಿಗಳ ಮುಖಾಂತರ ನಾವು ವ್ಯವಹಾರವನ್ನು ನಡೆಸಿ ರಿಜಿಸ್ಟರ್ ಮಾಡಿಕೊಂಡು ಬಂದ ಮೇಲೆ, 30 ದಿವಸ ಕಾಲ ಆಬ್ಜಕ್ಷನ್ಸ್ ನೋಟಿಫೈ ಮಾಡಿ ಯಾರಾದರು ಬಂದು ಅದಕ್ಕೆ ತಕರಾರು ಮಾಡದಿದ್ದರೆ, ಆ ನಂತರ ನಮ್ಮ ಹೆಸರಿಗೆ ಖಾತೆ ಮಾಡುತ್ತಾರೆ. ಇಲ್ಲಾ ನಮ್ಮ ತಂದೆ ಅಥವಾ ತಾತನದ್ದು ಆಗಿದ್ದರೆ ಅದಕ್ಕೆ ನಾವು legal heirs ಆಗಿದ್ದರೆ, ಆಗಿದ್ದರೆ, ಅವರು ಗತಿಸಿ ಹೋದ ನಂತರ ಪಾವತಿ ವಾರಸುದಾರರು ಎಂದು ಮಾಡುತ್ತಾರೆ. ಯಾರು legal heirs ಇದ್ದರೆ ನಾವು ಸರ್ಟಿಫಿಕೇಟ್ಸ್ ಕೊಡಬೇಕಾಗುತ್ತದೆ ಮಾಡುತ್ತಾರೆ. ಇದಕ್ಕೆ ಯಾರು ಲೀಗಲ್ಲೀರಾ?

ಕರ್ನಾಟಕಕ್ಕೆ. ಇಲ್ಲಾ ಕರ್ನಾಟಕವನ್ನು ಕೊಂಡುಕೊಂಡು ಕ್ರಯ ಮಾಡಿಕೊಂಡಿದ್ದಾನಾ? ಅವನಿಗೆ ಎಲ್ಲಾ ಟೈಟಲ್ಸ್‌ನ್ನು ಫರ್‌ಫೆಕ್ಟ್ ಮಾಡಿ ಅದನ್ನು ಅವನು ತನ್ನ ಸ್ವಂತ ಜಮೀನು ಆಸ್ತಿ ಎಂದು ಹೇಳಿ ಅದನ್ನು ಒತ್ತೆ ಇಟ್ಟು ಅವನು ದುಡ್ಡನ್ನು ತಂದು ಇಲ್ಲಿ ಬಂಡವಾಳವೆಂದು ಹಾಕತಕ್ಕದ್ದು. ಅಷ್ಟೆ ಅಲ್ಲವೇ ಸರ್? ಅದು ಎಷ್ಟುಕೋಟಿ ರೂ.ಗಳು ಎನ್ನುವುದರ ಬಗ್ಗೆ ಮಾನ್ಯ ಶ್ರೀರಾಮರೆಡ್ಡಿಯವರು ಲೆಕ್ಕವನ್ನು ಹಾಕಿದರು ನಾನು ಅಷ್ಟು ಕೋಟಿ ರೂ.ಗಳಿಗೆ ಲೆಕ್ಕ ಹಾಕುವುದಕ್ಕೆ ನಾನು ಹೋಗಲಿಲ್ಲ. ಇದು ಯಾವಾಗ ಆಯಿತು? ಯಾರ್ಯಾರು ಎಲ್ಲೆಲ್ಲಿ ಇದ್ದರು, ಯಾರು ಯಾರನ್ನು ಆಪಾದನೆ ಮಾಡುತ್ತಿದ್ದಾರೆ, ನಾನು ಮಾಡಿದರು ನೀವು ಮಾಡಿದರು ಇಲ್ಲಿ ಇಲ್ಲದೇ ಇರುವವರು ಇನ್ನೊಬ್ಬರು ಮಾಡಿದರೂ ಕೂಡ ನಾವೆಲ್ಲರೂ ಕೂಡ ಇದಕ್ಕೆ ಅಪರಾಧಿಗಳೇ. ಈ ಅಪರಾಧಕ್ಕೆ ಯಾರೂ ಭಾಗಿಗಳು ನಾವು ಅಲ್ಲವೆಂದು ಹೇಳುವುದಕ್ಕೆ ಬರುವುದಿಲ್ಲ. ಒಂದು ಎಕರೆಗೆ 10 ರೂ.ಗಳು ಮಾನ್ಯ ಕೃಷ್ಣರವರು ಮುಖ್ಯಮಂತ್ರಿಯಾಗಿ ಬಂದ ಮೇಲೆ, ನಾನೇನೂ ಅವರನ್ನು ಹೊಗಳಬೇಕೆಂದೇನೂ ಇಲ್ಲ. ಅವರು ಒಂದು ಡಿಸಿಷನ್ ತೆಗೆದುಕೊಳ್ಳುತ್ತಾರೆ 10 ರೂ.ಗಳನ್ನು ಕೊಡತಕ್ಕಂಥದ್ದು ಎಲ್ಲಾ ಜಮೀನಿಗೆ ಅನ್ವಯಿಸುವುದಿಲ್ಲ. ರಸ್ತೆಗೆ ಸೀಮಿತವಾಗಿ ನೀವು ಏನು ಜಮೀನು ತೆಗೆದುಕೊಳ್ಳುತ್ತೀರಿ, ಅದಕ್ಕೆ ಮಾತ್ರ 10 ರೂ.ಗಳನ್ನು ಕೊಡಿ ಉಳಿದಿದ್ದಕ್ಕೆ ಗೈಡೆನ್ಸ್ ವ್ಯಾಲ್ಯು ಕೊಡಿ ಎಂದು ಒಂದು ಒಳ್ಳೆಯ ಕೆಲಸವನ್ನು ಮಾಡಿದರು. ಒಳ್ಳೆಯದನ್ನು ಮಾಡಿದಾಗ ಒಳ್ಳೆಯದೆಂದು ಹೇಳಬೇಕು ಅಲ್ಲವೆ? ಅಷ್ಟು ಮಾತ್ರಕ್ಕೆ, ಉಳಿದಿದ್ದೆಲ್ಲವನ್ನೂ ನಾನು ಹೇಳುವುದಕ್ಕೆ ಹೋಗುವುದಿಲ್ಲ. ರೋಡಿಗೆ ಸೀಮಿತವಾಗಿ, ಇದರ ಮಧ್ಯೆ ಎಲ್ಲವನ್ನೂ ಬಿಟ್ಟು ಬಿಟ್ಟಿದ್ದೀರಲ್ಲಾ? ಟೌನ್‌ಶಿಫ್‌ಗೆ ಬರತಕ್ಕದ್ದನ್ನು ಗೈಡೆನ್ಸ್ ವ್ಯಾಲ್ಯು ಪ್ರಕಾರ ಕೊಡಬೇಕೆಂದು ಹೇಳಿ ಎರಡನೆಯ ಕಂಡಿಷನ್ ಅವರು ಏನು ಹಾಕುತ್ತಾರೆಂದರೆ, ನೀವು ಪ್ರಗತಿಯನ್ನು ಏನು ಹಂತಹಂತವಾಗಿ ತೋರಿಸಿಕೊಂಡು ಹೋಗುತ್ತೀಯಾ, ಅದಕ್ಕೆ ಅನುಗುಣವಾಗಿ ಜಮೀನನ್ನು ಬಿಡುಗಡೆ ಮಾಡುತ್ತೇವೆ ಹೊರತು ಸಾರಾಸಗಟಾಗಿ ಫ್ರೇಮ್ ವರ್ಕ್‌ನಲ್ಲಿ ಹೇಳಿದ ಅಷ್ಟು ಜಮೀನನ್ನು ಬಿಡುಗಡೆ ಮಾಡುತ್ತೇವೆ ನೀನು ರಿಯಲ್ ಎಸ್ಟೇಟ್ ಮಾಡಿಕೊಂಡು ಹೋಗು ಎಂದು ಹೇಳಿರಲಿಲ್ಲ. ಎಲ್ಲೋ ಒಂದು ಕಡೆ ಒಂದು ಒಳ್ಳೆಯ ಕೆಲಸವನ್ನು ಎಚ್ಚರ ತಪ್ಪಿ ಮಾಡಿದ್ದಾರೆಂದು ತಿಳಿದುಕೊಳ್ಳೋಣ. ಇದೇ ಕೆಲಸವನ್ನು ಮೊದಲು ಇದ್ದವರು ಮಾಡಬಹುದಾಗಿತ್ತಲ್ಲಾ?

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಮತ್ತು ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ಅಗ್ರಿಮೆಂಟ್ ಆಗಿರುವ ಕಾಲದಲ್ಲಿ ಕೂಡ 10 ರೂ.ಗಳಿಗೆ ಒಂದು ಎಕರೆ ಎಂದು ಕೊಟ್ಟಿದ್ದರೂ ಕೂಡ ಅಲ್ಲಿ ಒಂದು ಒಳ್ಳೆಯ ಕೆಲಸ ಏನಾಗಿದೆ ಎಂದರೆ, 30 ವರ್ಷದ ನಂತರ ಅದನ್ನು ವಾಪಸ್ಸು ಕೊಡಬೇಕು ಎನ್ನುವ ಒಳ್ಳೆಯ ಕೆಲಸವೂ ಆಗಿದೆ. ಈ ಒಳ್ಳೆಯ ಕೆಲಸ ಮಾಡಿದ್ದಾರೆನ್ನುವ ಬಗ್ಗೆ ತಾವು ಯಾರ ಬಗ್ಗೆ ಮಾತನಾಡಿದಿರಿ ಅವರೇ ಕಂಫರ್ಟ್ ಲೆಟರ್‌ನ್ನು ಕೊಡಬೇಕಾದ ಅಗತ್ಯ ಇರಲಿಲ್ಲ, ಕಂಪರ್ಟ್ ಲೆಟರ್‌ನ್ನು ಬ್ಯಾಂಕಿಗೆ ಕೊಟ್ಟರು. ಜನವರಿ ತಿಂಗಳಲ್ಲಿ ಅವರು ಅರ್ಜಿ ಕೊಡುತ್ತಾರೆ. ಅಲ್ಲಿ 150 ಕೋಟಿ ರೂ.ಗಳ ಸಾಲವನ್ನು ತೆಗೆದುಕೊಳ್ಳುವುದಕ್ಕೆ; ಫೆಬ್ರವರಿ ತಿಂಗಳಲ್ಲಿ ಆ 150 ಕೋಟಿ ರೂ. ಗಳಲ್ಲಿ 10 ಕೋಟಿ ರೂ.ಗಳನ್ನು ಕಟ್ಟುತ್ತಾರೆ. ಉಳಿರದಿರತಕ್ಕ ದುಡ್ಡನ್ನು ಇವತ್ತಿನವರೆಗೆ ಕಟ್ಟಿರುವುದಿಲ್ಲ. ಇವೆಲ್ಲಾ ಕೂಡ ಇವೆ, ಒಳ್ಳೆಯದೂ ಇದೆ ಕೆಟ್ಟದ್ದೂ ಇದೆ. ನಾವು ನಿರಪರಾಧಿಗಳು. ನಾವು ಆ ಕ್ಯಾಬಿನೆಟ್‌ನಲ್ಲಿ ಇದ್ದಂಥವರು. ಈ ಕ್ಯಾಬಿನೆಟ್‌ನಲ್ಲಿಯೂ ಇದ್ದೇವೆ.

ಶ್ರೀ ಎನ್. ಚಲುವರಾಯಸ್ವಾಮಿ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೆ, 2012 ರೊಳಗೆ ಯಾವಾಗ ಬೇಕಾದರೂ ಹಳೆಯ ರೇಟಿಗೆ ತೆಗೆದುಕೊಳ್ಳಬಹುದೆಂದು ಒಬ್ಬರು ಆದೇಶವನ್ನು ಮಾಡಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ನಾವೆಲ್ಲಾ ಒಂದಲ್ಲ ಒಂದರಲ್ಲ ಭಾಗಿಗಳು ಆಗಿದ್ದಂಥವರೇ. ಏಕೆಂದರೆ ಆ ಕ್ಯಾಬಿನೆಟ್‌ನಲ್ಲಿ ನಾವು ಇದ್ದಂಥವರು. ಆ ಕಾರಣಕ್ಕಾಗಿ ನೀವು ಹೇಳತಕ್ಕಂಥ ಮಾತನ್ನು ಸಂಪೂರ್ಣವಾಗಿ ಒಪ್ಪುತ್ತೇವೆ.

4.30 P.M.

ಶ್ರೀ ಬಿ.ಸಿ. ಪಾಟೀಲ್ : ನಾವು 150 ಜನ ಹೊಸ ಶಾಸಕರು ಇದ್ದೇವೆ. ನಾವು ಯಾರೂ ಇದಕ್ಕೆ ಭಾಗಿಯಾಗಿಲ್ಲ. ದಯಮಾಡಿ ನಾವೆಲ್ಲರೂ ಭಾಗಿಯಾಗಿದ್ದೇವೆಂದು ದಯಮಾಡಿ ಸೇರಿಸಿಕೊಳ್ಳಬೇಡಿ.

ಅಧ್ಯಕ್ಷರು : ಭಾಗಿ ಎಂದರೆ ಈ ಅಬೇಟರ್ ಎಂದು ಇರುತ್ತದೆಯಲ್ಲಾ, ಯಾವನ್ನೋ ಮಾಡುತ್ತಾನೆ, ಹೋಗುತ್ತಾನೆ. ಅವನು ಹೋಗಿ ಮರ್ಡರ್ ಮಾಡುತ್ತಾನೆ. ಅವನ ಜೊತೆ ಹೋಗಿರುತ್ತೀರಿ ನೋಡಿರುತ್ತೀರಿ ಅಷ್ಟೇ. ಅವನೇನೋ ಮಾಡಿಬಿಡುತ್ತಾನೆ.

ಶ್ರೀ ಬಿ.ಸಿ. ಪಾಟೀಲ್ : ನಾವು ಹೋಗಿಯೇ ಇಲ್ಲ. ಅಬೇಟರ್ಸ್ ಅಲ್ಲ. ನಾವುಗಳು ಹೋಗಿಯೇ ಇಲ್ಲ. ನಾವು ಮೊದಲನೇ ಸಲ ಆಯ್ಕೆಯಾಗಿ ಬಂದಿದ್ದೇವೆ.

ಅಧ್ಯಕ್ಷರು : ಭಾಗಿ ಎಂದರೆ ನಾವುಗಳು ಅವರ ಜೊತೆಯಲ್ಲಿ ಹೋಗಿ ಬಿಟ್ಟಿರುತ್ತೇವಲ್ಲಾ. ನಾವು ಆ ಶಾಸನ ಸಭೆಯಲ್ಲಿ ಇರುತ್ತೇವಲ್ಲಾ.

ಶ್ರೀ ಆರಗ ಜ್ಞಾನೇಂದ್ರ : ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ಅಣಕಿ ಹೋದವರು ಎಂದು ಹೇಳುತ್ತಾರೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಪ್ರಕಾಶ್‌ರವರ ಮಾತು ನನಗೆ ಅರ್ಥವಾಗುತ್ತದೆ. ಅನೇಕ ವೇಳೆ ನಾವು ಸಂದರ್ಭಕ್ಕೆ ಅನುಗುಣವಾಗಿ ಅಪರಾಧಿಗಳಾಗುತ್ತೇವೆ. ಶ್ರೀ ಹೆಚ್.ಆರ್. ಗೋಖಲೆಯವರು ಇಂಧಿರಾಗಾಂಧಿಯವರ ಕ್ಯಾಬಿನೆಟ್‌ನಲ್ಲಿ ಮಂತ್ರಿಗಳಾಗಿದ್ದರು. As Minister for Law and Parlimentary Affairs, he was responsible for mentioning about the proclamation of emergency in the Cabinet. ಅವರು ಚುನಾವಣೆಯಲ್ಲಿ ಸೋತುಹೋದರು. ಹಾಗೂ ಅಧಿಕಾರವನ್ನು ಕಳೆದುಕೊಂಡರು. The first person to rebel and say this was a draconian law ಎಂದು ಹೇಲಿದವರು ಅವರೇ. ಅದು ಒಂದು ರೀತಿಯಾದಂತಹ ರಾಜಕಾರಣ, ಈಗ ನಾವು ಬಹಳ ನಿರ್ಮಲವಾದ ಮನಸ್ಸಿನಿಂದ ಎದ್ದು ಹೇಳಿದಿರಿ. ನಿಮ್ಮ ಮಡಿಲಿನಲ್ಲಿ ಭಾರವೇನೂ ಇಲ್ಲ. ಆದ್ದರಿಂದ ನೀವು ನೇರವಾಗಿ ಹೇಳಿದಿರಿ, ನಾವು ಎಲ್ಲಾ ಅಪರಾಧಿಗಳೇ ಕಲೆಕ್ಟೀವ್ ರೆಸ್ಪಾನಿಸಿಬಿಲಿಟಿ ಇದೆ ಎನ್ನುವಂತಹ ಮಾತನ್ನು ಹೇಳಿದಿರಿ. ನಾವು ರಾಜಕಾರಣದಲ್ಲಿ ಇಂತಹ ಅವಕಾಶಗಳು ಸಿಕ್ಕಿ ಮಾತನಾಡುವಾಗ ಕೆಸರು ಎರಚುವುದು ಬಹಳ

ಸುಲಭವೆಂದು ಹೇಳಿ, ಸಾರ್ವತ್ರಿಕವಾಗಿ ಎಲ್ಲರ ಮೇಲೆ ಎರಚುವಂತಹ ಸ್ವಭಾವ ನನ್ನದಲ್ಲ. ಯಾರೋ ಒಬ್ಬರೋ ಅಥವಾ ಇಬ್ಬರೋ ರಿಲೇಟಿವ್‌ಲಿ ಉತ್ತಮವಾಗಿರುವಂತಹ ಸೆನ್ಸಿಟೀವ್ ಆಗಿರುವಂತಹವರು ಸ್ವಲ್ಪ ಸೂಕ್ಷ್ಮವಾಗಿರುವಂಥವರನ್ನು ನಾವು ಇನ್ನೊಂದು ಸ್ವಲ್ಪ ಕಾಲವಾದರೂ ಉಳಿಸಿಕೊಂಡರೆ, ಏನಾದರೂ ಒಂದು ಸ್ವಲ್ಪ ಒಂದು ಸ್ಥಿತಿಯಲ್ಲಿರಬಹುದು. ಅವರನ್ನೂ ಕೂಡ ನಾವು ಅಸಹಾಯಕರನ್ನಾಗಿ ಮಾಡಿದರೆ ಮತ್ತೇ ಏನೂ ಇರುವುದಿಲ್ಲ. ಪೋಲಿ ಪುಂಡರುಗಳೇ ಜಾಸ್ತಿಯಾಗಿಬಿಡುತ್ತಾರೆ. I would not attempt to such a thing. ನಾವು ಅರ್ಬಿಟ್ರೇಷನ್‌ಗೆ ಎಲ್ಲಿಗೆ ಹೋಗಬೇಕು? ಒಂದು ವೇಳೆ ಅವನಿಗೂ ಮತ್ತು ನಮಗೂ ವ್ಯಾಜ್ಯ ಬಂದರೆ ನಾವು ವ್ಯಾಜ್ಯವನ್ನು ಪರಿಹಾರ ಮಾಡಿಕೊಳ್ಳಬೇಕಾದರೆ ನ್ಯೂಯಾರ್ಕ್ ರೂಲ್ಸ್ 1956 ಪ್ರಕಾರ ಇಬ್ಬರು ಪಾರ್ಟಿ ಸೇರಿ ಅಗ್ರಿ ಆಗಿರುತ್ತದೆ. ಅದು ಆಗಿರುವ ಪ್ರಕಾರ ಲಂಡನ್‌ಗೆ ಹೋಗಬೇಕು. ಮಾನ್ಯ ಕುಮಾರಸ್ವಾಮಿಯವರಿಗೆ ಒಂದು ಚಾನ್ಸ್ ಸಿಗುತ್ತದೆ. to represent the State. ಅವರು ಹೋಗುವಾಗ ಅಪೋಜಿಷನ್‌ನವರನ್ನು ಕರೆದುಕೊಂಡು ಹೋದರೆ ಇವರೆಲ್ಲರೂ ಹೋಗಿ ಬರುತ್ತಾರೆ. ನನ್ನನ್ನೂ ಸಹ ನೆನಪಿನಲ್ಲಿಟ್ಟುಕೊಂಡು ಕರೆದುಕೊಂಡು ಹೋಗಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಏನಾದರೂ ಹೋದರೆ ರಮೇಶ್‌ಕುಮಾರ್‌ರವರ ಅಧ್ಯಕ್ಷತೆಯಲ್ಲಿಯೇ ಹೋಗುವುದು ಹಾಗೂ ವಾಟಾಳ್ ನಾಗರಾಜ್‌ರವರನ್ನೂ ಸಹ ಕರೆದುಕೊಂಡೇ ಹೋಗುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಲಂಡನ್ನಿಗೆ ಕರೆದುಕೊಂಡು ಹೋಗುವುದಕ್ಕೋಸ್ಕರವಾಗಿಯಾದರೂ ಕೂಡ ಇಲ್ಲಿ ಭಾಷಣವನ್ನು ಮಾಡಿಬಿಡಲಿ. ಇದರಲ್ಲಿ ಎಲ್ಲರೂ ಸೇರಿ ಭಾಷಣವನ್ನು ಮಾಡಿದ್ದಾರೆಂದು ತಿಳಿದುಕೊಳ್ಳಲಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಇದಾದ ಮೇಲೆ ರಿಟ್ ಪಿಟಿಷನ್‌ನನ್ನು ಸೋಮಶೇಖರ್‌ರೆಡ್ಡಿಯವರು, 1977ರಲ್ಲಿ ಫೈಲ್ ಮಾಡುತ್ತಾರೆ. ನಾನು ಸುಮ್ಮನೆ ಅದರ ರೆಲೆವೆಂಟ್ ಪೋರ್ಷನ್ ಮಾತ್ರ ಓದುತ್ತೇನೆ. "The State has accepted this policy to pursuate the private agencies to participate in the developmental activities because of various reasons including that it is not possessed of sufficient finances of fast economic developments and for improvements in the State". ಎಂದು ಹೇಳುತ್ತಾರೆ. This is the stand the Government takes. Is there any change in that stand? The Government of that day has taken a stand before the HIgh Court of Karnataka while dealing with the writ petition filed by Mr. Somashekar Reddy. ಡೆವಲಪ್‌ಮೆಂಟ್ ಆಕ್ಟಿವಿಟೀಸ್‌ಗೆ ಪ್ರೈವೇಟ್ ಏಜೆನ್ಸೀಸ್‌ನ ಪ್ರಮೋಟ್ ಮಾಡತಕ್ಕಂಥದ್ದು ಎನಕರೇಜ್ ಮಾಡುವುದು ಸ್ಟೇಟ್ ಪಾಲಿಸಿ ಎನ್ನುವ ಮಾತನ್ನು ಹೇಳುತ್ತಾ ಇಂತಹ ಒಂದು ಪ್ರೋಗ್ರಾಮ್ ಎಕ್ಸಿಕ್ಯೂಟ್ ಮಾಡುವುದಕ್ಕೆ ಅಗತ್ಯವಿರುವಂತಹ

ಸಂಪನ್ಮೂಲಗಳು ನಮ್ಮಲ್ಲಿ ಇಲ್ಲವೆನ್ನುವಂತಹ ಮಾತನ್ನು ಹೇಳಿದ್ದಾರೆ. ಆ ವಿಷಯದಲ್ಲಿ ಏನಾದರೂ ಪರಿಸ್ಥಿತಿ ಸುಧಾರಿಸಿದ್ದರೆ, if there is a change in th attitude of the Government so far as that policy is concerned ಅದನ್ನು ತಿಳಿದುಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಅಥವಾ ರಾಜ್ಯದಲ್ಲಿ ಸಾಕಷ್ಟು ಸಂಪನ್ಮೂಲಗಳು ಇದ್ದಾವೆ ಇಂತಹ 10 ಪ್ರಾಜೆಕ್ಟ್ ಬೇಕಾದರೂ ನಾವು ಸ್ವಂತ ತೆಗೆದುಕೊಳ್ಳಬಲ್ಲೆವು ಎನ್ನುವುದು ಇದ್ದರೂ ಕೂಡ ಹೀಗೆ ನಾನು ಹೇಳಿದ ಮಾತ್ರಕ್ಕೆ ಅವರನ್ನು ಮುಂದುವರಿಸುತ್ತೀರಾ ಅಥವಾ ಮುಂದುವರಿಸಬೇಕೆಂದು ಪರೋಕ್ಷವಾಗಿ ನಾನು ಪ್ಲೀಡ್ ಮಾಡಿದೆ ಎಂದು ತಿಳಿದುಕೊಳ್ಳಬೇಡಿ. ನೀವು ಅಥಾರಿಟಿಯನ್ನು ನಿಮ್ಮ ಕೈಯಲ್ಲಿ ಇಟ್ಟುಕೊಂಡಿದ್ದೀರಿ. ಆಡಳಿತವನ್ನು ನಡೆಸುತ್ತಿದ್ದೀರಿ. ನಿಮಗೆ ಏನು ಸೂಕ್ತವೆನಿಸುತ್ತದೆ ಈ ಸನ್ನಿವೇಶದಲ್ಲಿ ಅದನ್ನು ಮಾಡಿ. ಎಚ್ಚರ ತಪ್ಪಿಯೂ ಕೂಡ ಅವರಿಗೆ ಮುಂದುವರಿಕೆಗೆ ನಾವು pray ಮಾಡುವುದಿಲ್ಲ. ಅದು ಅವನ ಕೆಲಸ ಅದನ್ನು ಅವನು ಮಾಡಿಕೊಳ್ಳುತ್ತಾನೆ. ಮಾನ್ಯ ಮಾಧುಸ್ವಾಮಿಯವರು ಶ್ರೀರಾಮರೆಡ್ಡಿಯವರು petitioners. ಆದರು. ಇದು ಬಹಳ ಇಂಟರೆಸ್ಟಿಂಗ್, ಮಾಧುಸ್ವಾಮಿಯವರು ಬಹಳ ನೋವಿನಿಂದ ಕೋರ್ಟ್ ಫೈಂಡಿಂಗ್ಸ್ ಬಗ್ಗೆ ಹೇಳಿದರು. ಸರ್, ನಾನು ತಮ್ಮ ಮುಖಾಂತರ ಅವರಿಗೆ ಹೇಳುತ್ತೇನೆ. You are one of our most respected colleague, you and Mr. Srirama Reddy. ಇದಕ್ಕೆ ಸಂಬಂಧಿಸಿ, ಒಂದು ವೇಳೆ ಈ ಪಿಟಿಷನ್‌ಗೆ ಸಂಬಂಧಿಸಿ ಕೋರ್ಟ್ ಅಬ್ಸರ್‌ವೇಷನ್ ಆ ರೀತಿಯಾಗಿ ಬಂದಿಯಾಗಿದ್ದರೂ ಕೂಡ ನಾವು ನಿಮ್ಮನ್ನು ಆ ರೀತಿಯಾಗಿ ಪರಿಗಣನೆ ಮಾಡುಂಥವರಲ್ಲ. ವ್ಯಾಜ್ಯ ವ್ಯವಹಾರಗಳು ಇದ್ದಾಗ ಕೆಲವು ಕಡೆಗೆ ಹೋದಾಗ ಇಂತಹವುಗಳೆಲ್ಲಾ ಸ್ವಾಭಾವಿಕವಾಗಿ ಆಗುತ್ತದೆ. ಸಾರ್ವಜನಿಕ ಹಿತದೃಷ್ಟಿಯನ್ನು ಮನಸ್ಸಿನಲ್ಲಿಟ್ಟುಕೊಂಡು ನೀವು ನಿಮ್ಮ ಕೆಲಸವನ್ನು ಮಾಡಬೇಕೆಂದು ಕೋರ್ಟು ಮೆಟ್ಟಿಲನ್ನು ಹತ್ತಿದ್ದೀರಿ. ಒಂದೇ ಒಂದು ಕೋರ್ಟು, ಎರಡು ಅಬ್ಸರ್‌ವೇಷನ್‌ನ್ನು ಪ್ರಮುಖವಾಗಿ ಮಾಡಿತು. res judicata ಎಂದು ಹೇಳಿ ಏನಪ್ಪ ಹಗಲೆಲ್ಲಾ ಹೇಳಿದ್ದೇ ಹೇಳಿಕೊಂಡು ಬರುತ್ತೀರಿ, ಕೋರ್ಟಿನ ಸಮಯವನ್ನು ನೀವು ವ್ಯರ್ಥ ಮಾಡಿದ್ದೀರಿ, ನಮಗೆ ನೀವು ತೊಂದರೆಯನ್ನು ಮಾಡಿದ್ದೀರಿ, ಆದ್ದರಿಂದ ನಿಮಗೆ ಇಷ್ಟು ಹಣವನ್ನು ಕಟ್ಟಬೇಕೆಂದು ಹೇಳಿದ್ದೇವೆಂದು ಹೇಳುತ್ತಾರೆ. ನಾವು ಫೈನ್ ಎನ್ನುವ ಪದವನ್ನು ಬಳಸುವುದಿಲ್ಲ. That is wrong. ಇನ್ನು ಎರಡನೆಯದು ಒಂದು ಕಡೆ ನೀವು ಓದಿದರೋ ಇಲ್ಲವೋ ಗೊತ್ತಿಲ್ಲ. Supreme Court goes to the extent of telling, while disposing of the allegation with regard to fraud, mis-representation and other things, is looks the boot is on the other foot ಎಂದು ಹೇಳುತ್ತಾರೆ. It is very painful. ನಮ್ಮ ಪರಿಸ್ಥಿತಿ ಏನಾಗುತ್ತದೆಂದರೆ, xxx Sir a Court interprets law. The cause espoused before the Court in particular issue when the law is interpreted by the Court, He come to a conclusion justice is given.Courts only interpret law; They have nothing to do with the deliverance of justice. Establishing law or truth as per

evidence and deliverance of justice are two different things. Justice V.R. Krishna I yer, a former retired Judge of the Supre Court of India, a proclaimed rationalist and a well knlown marxist says, it is a hallucination for the people of this country that we get justice in the courts. ಇದೊಂದು ಭ್ರಮೆ, ಕೋರ್ಟಿನಲ್ಲಿ ನ್ಯಾಯ ಸಿಗುತ್ತದೆ ಎಂದು ಒಂದು ಅಭಿಪ್ರಾಯವೇನಿದೆ, ಮಾನ್ಯ ಯಡಿಯೂರಪ್ಪನವರೇ, ಭ್ರಮೆ, There has always been a fight between the legal battle and the battle for the social jutice. Legal Justice and Social Justice... ಸಾಮಾಜಿಕ ನ್ಯಾಯ ಮತ್ತು ನ್ಯಾಯಾಂಗದಲ್ಲಿ ಸಿಗುವಂತಹ ನ್ಯಾಯ ಇವೆರಡೂ ಕೂಡ ಸಮಾನಾಂತರವಾಗಿ ಹೋಗುತ್ತಿದೆಯೇ ಹೊರತು ಒಂದನ್ನು ಒಂದು ಅವಲಂಬಿಸಿಕೊಂಡು ಅಥವಾ ಹೊಂದಿಕೊಂಡು ಹೋಗುತ್ತಿಲ್ಲ. Why a public interest litigation suffers? They simply go by the evidence. The prayer that is before them. ಸೋಮಶೇಖರ್‌ರೆಡ್ಡಿಯವರ ಕೇಸ್‌ನಲ್ಲಿ ಒಂದೇ ಪ್ರೇಯರ್ಸ್, ನಿಮ್ಮ ಕೇಸ್‌ನಲ್ಲಿಯೂ ಕೂಡ ಒಂದೇ ಪ್ರೇಯರ್, ಮತ್ತೊಂದನ್ನು ಹೇಳಿದರು. They closed it. But, ನನಗೆ ಒಂದು ಸರ್ಕಾರದ ಕಡೆಯಿಂದ ಮಾನ್ಯ ಮುಖ್ಯಮಂತ್ರಿಗಳು ಕುಳಿತಿದ್ದಾರೆ. ತಿಳಿದುಕೊಳ್ಳುವುದಕ್ಕೆ ಆಸಕ್ತಿ ಇದೆ. ನೀವು ಉತ್ತರ ಕೊಡುವಂತಹ ವೇಳೆಗೆ ಫ್ರೇಮ್‌ವರ್ಕ್ ಅಗ್ರಿಮೆಂಟ್ ಏನಾಗಿದೆ, ಅದರಲ್ಲಿ ನಮೂದು ಮಾಡಿರುವಂತಹ 20193 ಎಕರೆ ಜಮೀನು ನಿಜವಾಗಿಯೂ ಅಗತ್ಯ ಇದ್ದಂಥದ್ದೇ ಅಥವಾ ಇಲ್ಲವೇ? ಒಂದು ವೇಳೆ ಆ ಬೇಡಿಕೆಯನ್ನು ಮುಂದಿಟ್ಟಿದ್ದರೂ, ಆ ರಿಪೋರ್ಟ್‌ನಲ್ಲಿ ಏನು ಪ್ರೊಜೆಕ್ಟ್ ಮಾಡಿದ್ದರೂ ಅದೇ ಬೋಗಸ್ಸಾ, ಹಾಗಾದಲ್ಲಿ ಏನು ಕ್ರಮ ಜರುಗಿಸುತ್ತೀರಿ? ಯಾರ ಮೇಲೆ ಜರುಗಿಸುತ್ತೀರಿ? ಯಾವಾಗ ಜರುಗಿಸುತ್ತೀರಿ? ಒಂದು ವೇಳೆ ಆ ಡಿಮಾಂಡ್ ಆ ಪ್ರೊಜೆಕ್ಟ್ ನೋಟ್ ಪ್ರಕಾರ genuine ಆಗಿದೆಯೆಂದು ತಮ್ಮ ಮನಸ್ಸಿಗೆ ಅನ್ನಿಸಿದರೆ ಫ್ರೇಮ್ ವರ್ಕ್ ಅಗ್ರಿಮೆಂಟ್ ವ್ಯಾಪ್ತಿಯನ್ನು ಮೀರಿ ಜಮೀನನ್ನು ಅಕ್ವೈರ್ ಮಾಡಿಕೊಂಡಿದ್ದಾರೆಯೇ? ಸರ್, ಅಕ್ವಿಸಿಷನ್‌ನಲ್ಲಿ ನೋಟಿಫಿಕೇಷನ್ ಮಾಡತಕ್ಕಂಥದ್ದು ಬೇರೆ, ನೋಟಿಫಿಕೇಷನ್ ಅನ್ನು ಕಂಪ್ಲೀಟ್ ಮಾಡಿ, ಪ್ರೋಸೆಸ್ ಆಫ್ ಲ್ಯಾಂಡ್ ಅಕ್ವಿಸಿಷನ್ ಅನ್ನು, ಪೊಸೆಷನ್‌ಗೆ ತೆಗೆದುಕೊಂಡು ಹ್ಯಾಂಡ್ ಓವರ್ ಮಾಡತಕ್ಕಂಥದ್ದು ಬೇರೆ. ಈ ಕೇಸಿನಲ್ಲಿ ರೈತರ ರಿಕ್ವೆಸ್ಟ್ ಮೇಲೆ ನೋಟಿಫಿಕೇಷನ್ ಮಾಡಿರುವಂತಾದ್ದು ಡ್ರಾಪ್ಟ್ ಮಾಡಿರುವಂಥಾದ್ದು I think about 30 cases. 33 acres Out of 25,000 acres ನಲ್ಲಿ ಈ ಮಾಮೂಲಿ ದಂಧೆ ಇದೆಯೆಲ್ಲಾ, ನೋಟಿಫಿಕೇಷನ್‌ನಲ್ಲಿ ತರುವುದು, ಹೆದರಿಸುವುದು, ಪಾರ್ಟಿಗಳನ್ನು ಕಳುಹಿಸುವುದು, ಆಮೇಲೆ ಅಡ್ಜಸ್ಟ್‌ಮೆಂಟ್ ಮಾಡಿಕೊಳ್ಳುವುದು, ಆಮೇಲೆ ಡೀನೋಟಿಫೈ ಮಾಡುವುದು. ಈ ಇಂಡಸ್ಟ್ರಿ ಎಷ್ಟರ ಮಟ್ಟಿಗೆ ನಡೆದಿದೆ ಎಂದರೆ 33 ಎಕರೆಗೆ ಸೀಮಿತವಾಗಿದೆ, ಉಳಿದ ಬೇರೆ ವರ್ಗಕ್ಕೆ ಬರುತ್ತದೆ, ಆದರೆ 20,193 genuine, ಅಲ್ಲವಾ? ಅದರ ವ್ಯಾಪ್ತಿ ಮೀರಿ ಹೆಚ್ಚಿಗೆ ಅಕ್ವೈರ್ ಮಾಡಿದ್ದಾರೆಯೇ?

ಹಾಗಾಗಿದ್ದರೆ ಅದಕ್ಕೆ ಯಾರು ಕಾರಣ? ಆ ಜಮೀನು ಇವತ್ತು ಯಾವ ಸ್ಥಿತಿಯಲ್ಲಿದೆ? ಅದನ್ನು ದಯಮಾಡಿ ಅದಕ್ಕೆ ಯಾರು ಕಾರಣ? ಆ ಜಮೀನು ಇವತ್ತು ಯಾವ ಸ್ಥಿತಿಯಲ್ಲಿದೆ? ಅದನ್ನು ದಯಮಾಡಿ ತೆಗೆದುಕೊಳ್ಳಿ. ಅಗತ್ಯಕ್ಕಿಂತ ಹೆಚ್ಚು ಒಂದು ಗೋಪಾದದಷ್ಟು ಜಮೀನನ್ನು ಅವರು ತೆಗೆದುಕೊಂಡಿದ್ದರೂ ಕೂಡ, ನೀವು ಯಾವ ಕ್ರಮವನ್ನಾದರೂ ಅವರ ವಿರುದ್ಧ ಜರುಗಿಸಿ, we will all stand, ಇದರಲ್ಲಿ ಏನೂ ಮುಚ್ಚುಮರೆ ಇಲ್ಲ. ಒಂದು ಕಡೆ ಇವರು ರಿಯಲ್ ಎಸ್ಟೇಟ್ ಮಾಡಲಿಕ್ಕೆ ಹೋಗಬೇಡಿ ಎಂದು ಬರೆಯುತ್ತಾರೆ ಅಂತ ಸಾಮಾನ್ಯವಾಗಿ ಎಂಟು ಹತ್ತು ವರ್ಷ ಒಂದೇ ಇಲಾಖೆಯಲ್ಲಿದ್ದರು, ಇವರು ಆ ಪಾರ್ಟಿಯಲ್ಲಿದ್ದರು ಮಂತ್ರಿಯಾದರು, ಇಲ್ಲೂ ಬಂದರು, ಬಹಳ ಚಾಲಾಕು ಮನುಷ್ಯ, ಬಹಳ ಹುಷಾರು, ಬಹಳ ಕೇಪಬಲ್, ಆದ್ದರಿಂದ ಇವರದ್ದು ಬಹಳ ಏನೇನೋ ಕೈವಾಡವಿರಬೇಕು ಅಂತ. ಕೈವಾಡ ಇದ್ದಿದ್ದರೆ ರಿಯಲ್ ಎಸ್ಟೇಟ್ ಏಜೆನ್ಸಿ ನೀನು ಮಾಡುತ್ತಿದ್ದೀಯ, ಈಗ ಮಾಡುವುದಿಲ್ಲವೆಂದು ಹೇಳಿದರೆ ಇವರ ಹತ್ತಿರ ಬೈಸಿಕೊಂಡು ಅವನು ದುಡ್ಡು ಏತಕ್ಕೆ ಕೊಡಬೇಕು? ಅವನಿಗೇನು ಹುಚ್ಚು ಹಿಡಿದಿದೆಯೆ? ಅಥವಾ ಇವರು ನಾನು ಬರೆಯುವುದನ್ನು ಬರೆಯುತ್ತೇನೆ, ನೀನು ಕೊಡುವುದನ್ನು ಕೊಡು ಎಂದರೆ ಇದು ಒಂದು ಹೊಸ ಮೆಥಡ್ ಆಯಿತು. See, possible inferences, ಏಕೆಂದರೆ ನನಗೆ ಯಾವುದಕ್ಕೂ ಇಂಥದ್ದಕ್ಕೆ ಅವಕಾಶವೇ ಎಂದೂ ಸಿಕ್ಕಿರಲಿಲ್ಲ ಪ್ರಕಾಶ್‌ರವರೇ; ಈಗ I am groping at the dark ಯಾವಾಗ, ಹೇಗೆ, ಏನು ಅವಕಾಶ ಬಂದರೆ ಹಾಗೆ ಮಾಡಬೇಕುಎಂದು ತಿಳಿಯುತ್ತದೆ. ನನಗೆ ಸಿಕ್ಕಿರುವವರು ವಾಟಾಳ್ ನಾಗರಾಜ್ ಅವರು; ಅವರು ಹೇಳಿಕೊಡುವಂತಹದ್ದೆಲ್ಲಾ ಬೇರೆಯವು, ತಲೆನೋವು ಬರದಿದ್ದರೆ ಅಂತಹ ವಿಷಯಗಳನ್ನು ಹೇಳಿಕೊಡುತ್ತಾರೆ, ಇಂತಹ ವಿಷಯಗಳನ್ನು ಹೇಳಿಕೊಡುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲಿರುವವರಿಗೆಲ್ಲಾ ಪಾಠ ಹೇಳಿಕೊಡುವವರು ನೀವು, ಆದರೆ ವಾಟಾಳ್ ನಾಗರಾಜ್‌ರವರ ಮೇಲೆ ಹೇಳುತ್ತಿದ್ದೀರಿ.

Sri K.R. Ramesh Kumar : Sir, I have take it as a compliment.

ಶ್ರೀ ವಾಟಾಳ್ ನಾಗರಾಜ್ : ರಮೇಶ್‌ಕುಮಾರ್‌ರವರು ಮಹಾ ಕಿತಾಪತಿ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಸರ್, ಮಾಧುಸ್ವಾಮಿಯಂಥವರು ನನಗೆ ಪಾಠ ಹೇಳಿಕೊಡುವಂಥ ಚೈತನ್ಯ ಇದೆಯೆಂದರೆ ಅದಕ್ಕಿಂತ ದೊಡ್ಡ ಹೆಮ್ಮೆ ಗೌರವ ನನಗೆ ಬೇರೇನಿಲ್ಲ. ಅತ್ಯಂತ ನಮ್ರತೆಯಿಂದ ನಾನು ಸ್ವೀಕಾರ ಮಾಡುತ್ತೇನೆ. ಸರ್, ಒಂದೇ ಒಂದು ಮಾಧುಸ್ವಾಮಿಯವರು ಮಾಡಿದ್ದೇನೆಂದರೆ ಸೋಮಶೇಖರ್‌ರೆಡ್ಡಿಯವರ ಪಿಟಿಷನ್ ಆದಮೇಲೆ ಏಳು ವರ್ಷವಾದ ಮೇಲೆ ಇವರ ಪಿಟಿಷನ್ ಬರುತ್ತದೆ, ಅವರು ಸಿ.ಬಿ.ಐ ಎನ್‌ಕ್ವೈರಿ ಕೇಳುತ್ತಾರೆ, ಇವರು ಸಿ.ಬಿ.ಐ. ಎನ್‌ಕ್ವೈರಿ ಆಗಬೇಕೆಂದು ಕೇಳುತ್ತಾರೆ. ಆದರೆ ಸಿ.ಬಿ.ಐ. ನವರು ಒಂದು ಸಲ ಇಲ್ಲಿಗೆ ಬಂದಾಗ ಜಾಲಪ್ಪನವರನ್ನು ಸ್ವಲ್ಪ ಅಳಿಸಿಬಿಟ್ಟು ಪೊರಟುಹೋಗಿಬಿಟ್ಟು ಬಿಟ್ಟರೆ ನಮ್ಮ ರಾಜ್ಯದಲ್ಲಿ ಇವರ ಅನುಭವವೇ ಹೆಚ್ಚು ಯಾರಿಗೂ ಇಲ್ಲ ಅಧ್ಯಕ್ಷರೇ, ಅವರು ಆಗಾಗ ಬಂದು ಹೋಗುತ್ತಿದ್ದರೆ ನಾವು ಅವರನ್ನು ಪರಿಚಯ ಮಾಡಿಕೊಳ್ಳಬಹುದು. ಒಂದು ಸಲ ದೊಡ್ಡ ಮನಸ್ಸು ಮಾಡಿ ಅವರನ್ನು ಕರೆಸಿಬಿಡಿ, ಯಾರನ್ನಾದರೂ

ಹಿಡಿದುಕೊಂಡು ಹೋಗಲಿ ಬಿಡಿ, ನಮಗೆ ಯಾರಾದರೂ ತೀರಾ ಬೇಕೆಂದರೆ ಅವರ ಮನೆಗಳಿಗೆ ಹೋಗಿ ಸಿಂಪತಿ ಹೇಳಿ ಬರುವುದು ಅದನ್ನೆಲ್ಲಾ ಮಾಡೋಣ. ಒಂದು ಸಲ ಸಿ.ಬಿ.ಐ.ನವರು ಬರುವ ಹಾಗೆ ಮಾಡಿ, ಇಷ್ಟು ಅನುಮಾನ ಇಡೀ ನಮ್ಮ ರಾಜ್ಯದಲ್ಲಿ ಬಂದಿದೆ, ನಮ್ಮ ಸಾಹೇಬರು ನನ್ನ ಕಡೆ ನೋಡುತ್ತಿದ್ದಾರೆ, ಸರ್, ನಿಮ್ಮ ಪಕ್ಷಕ್ಕೆ ನಾನು ಇರುತ್ತೇನೆ, ನೀವು ಹೋದರೆ ನಾನು ನಿಮ್ಮ ಜೊತೆಗೆ ಬರುತ್ತೇನೆ. ಹಾಗಲ್ಲ, ನನ್ನನ್ನು ನೋಡಿದರು, ಹಾಗಾಗಿ, ನೀವ್ಯಾಕೆ ಯೋಚಿಸುತ್ತೀರಿ. ಹೋಗುವಂತಹ ಸಂದರ್ಭ ಬಂದಾಗ ನಾನು ಆಗಲೂ ಅವರ ಜೊತೆಯಲ್ಲಿ ಇರುತ್ತೇನೆ, ಅವರನ್ನು ಬಿಟ್ಟು ಹೋಗುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು): ಅವರ ಅಧಿಕಾರವನ್ನೇ ಕಸಿದುಕೊಂಡು ಬಿಟ್ಟಿರಿ, ಲೋಕೋಪಯೋಗಿ ಇಲಾಖೆಯಿಂದ ತೆಗೆದು ಸಂಪೂರ್ಣವಾಗಿ ಅವರನ್ನು ಹೊರಗೇ ಇಟ್ಟುಬಿಟ್ಟಿರಿ. ಆದ್ದರಿಂದ ಅವರು ಹೋಗುವ ಪ್ರಶ್ನೆಯೇ ಬರುವುದಿಲ್ಲ, ಅವರು ಹೆದರಬೇಕಾದ ಪ್ರಶ್ನೆಯೇ ಬರುವುದಿಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಸರ್, ಸಿ.ಬಿ.ಐ. ಎನ್‌ಕ್ವೈರಿಗೆ ಸ್ವಲ್ಪ ದೊಡ್ಡ ಮನಸ್ಸು ಮಾಡಿ ಸಿ.ಬಿ.ಐ. ಎನ್‌ಕ್ವೈರಿ ಮಾಡಿದರೆ ಸುಮ್ಮನೆ ಹೋಗಬಹುದು, ತಮಾಷೆಗೆ ಕೇಳುವುದಿಲ್ಲ. ನಮ್ಮ ಮನಸ್ಸುಗಳಲ್ಲಿ ಭ್ರಮೆ ಇದೆ, ಹಿತ್ತಲ ಗಿಡ ಮದ್ದಲ್ಲ, ನಮ್ಮ ಸಿ.ಓ.ಡಿ., ನಮ್ಮ ಜ್ಯುಡಿಷಿಯಲ್ ಎನ್‌ಕ್ವೈರಿ ಇವೆಲ್ಲಾ ಕೆಲಸಕ್ಕೆ ಬರುವುದಿಲ್ಲ, ಅವರಾದರೆ ಏನಾದರೂ ಮಾಡುತ್ತಾರೆ ಎಂದು; ಒಂದು ಚಾನ್ಸ್ ಒಂದು ಸಾರಿ ಅದನ್ನೂ ಟ್ರೈ ಮಾಡಿ ನೋಡಿಬಿಡೋಣ. ಆಮೇಲೆ ಮುಂದಕ್ಕೆ ಯಾರೂ ಅದನ್ನು ಏಳದಿರುವಂಥದ್ದಾದರೂ ಆಗಲಿ. ಚೀಫ್ ಸೆಕ್ರೆಟರಿಯವರು ಬದಲಾದ ಸರ್ಕಾರ ಬಂದ ಮೇಲೆ, ಮಾಧುಸ್ವಾಮಿಯವರು ಅದರ ಬಗ್ಗೆ ಸ್ವಲ್ಪ ಪ್ರಸ್ತಾಪ ಮಾಡಿದರು, ನಮ್ಮ ಲೀಡರ್‌ಗೆ ಮುಜುಗರವಾದರೂ ಪರವಾಗಿಲ್ಲ, ಸರ್, ಹೇಳಿಕೇಳಿ ನಮ್ಮ ಧರಂಸಿಂಗ್‌ರವರು ರಜಪೂತರು, ಇಡೀ ಕರ್ನಾಟಕದಲ್ಲಿ ದುರ್ಬೀನು ಹಾಕಿಕೊಂಡು ನೋಡಿದರೂ 200 ಜನ ಸಿಗುವುದಿಲ್ಲ, ಏನೋ ಯಾವ ಕಾರಣವೋ, ಸೈಂಟಿಫಿಕ್ ಎಕ್ಸ್‌ಪ್ಲನೇಷನ್ ಕೊಡಲಿಕ್ಕಾಗುವುದಿಲ್ಲ. ಅವರು ಮುಖ್ಯಮಂತ್ರಿಯಾದುದು ಅದ್ಭುತಗಳಲ್ಲಿ ಒಂದು ಆಶ್ಚರ್ಯ, ಅದು ಎಂತಹ ಮುಖ್ಯಮಂತ್ರಿ; ತಮ್ಮ ಕಾಲ ಮೇಲೆ ನಿಲ್ಲುವಂಥ ಮುಖ್ಯಮಂತ್ರಿಯೇ? ಅಲ್ಲ, coalition ಸರ್ಕಾರ; ಯಾವ್ಯಾವ ರೀತಿ ಒತ್ತಡಗಳು, ನಿಬಂಧಗಳು, ಏನೇನು ಪರಿಸ್ಥಿತಿಯೋ, ಇಲ್ಲದೇಹೋದರೆ ಯಾರಾದರೂ ನಮ್ಮದೇ ಚೀಫ್ ಸೆಕ್ರೆಟರಿಯವರ ಕೈಯಲ್ಲಿ ಆ ರೀತಿ ಅಫಿಡವಿಟ್ ಮಾಡಿ ಎಂದು ಹೇಳುತ್ತಾರೆಯೇ? ಅಂಥ ಪರಿಸ್ಥಿತಿ ಅವರಲ್ಲದೇ ಬೇರೆಯವರಾಗಿದ್ದರೆ ಬರುತ್ತಿರಲಿಲ್ಲ, ಇಂಥದ್ದೆಲ್ಲಾ ಇಂಥವರಿಗೇ ಬರಲಿಕ್ಕೆ ಸಾಧ್ಯ. ಒಬ್ಬ ಧರಂಸಿಂಗ್, ಒಬ್ಬ ಖರ್ಗೆ, ಒಬ್ಬ ದೇವರಾಜ್ ಅರಸ್‌ರವರಿಗೆ ಮಾತ್ ಬರಲಿಕ್ಕೆ ಸಾಧ್ಯ. ಬೇರೆಯವರಿಗೆ ಬರುವುದಿಲ್ಲ, ಈ ಪ್ರಕೃತಿ ಅಂಥದ್ದು, ಹೌದು, ಖಂಡಿತ, ಅವರ ಪಕ್ಕದಲ್ಲಿದ್ದುಕೊಂಡೇ ಧೈರ್ಯವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಅವರು ಅಸಹಾಯಕರಾಗುತ್ತಾರೆ, ಜೀರ್ಣಿಸಿಕೊಳ್ಳುವ ಶಕ್ತಿಯಿರುವುದಿಲ್ಲ. ಏನು ಮಾಡುತ್ತೀರಿ ಹೇಳಿ? ನನ್ನವರು ಎನ್ನುವವರು ಯಾರು ಇರುತ್ತಾರೆ ಹೇಳಿ?

ನಮ್ಮದು ಎನ್ನುವುದಕ್ಕೆ ಏನಿರುತ್ತೆ ಆಧಾರ? ಏನೂ ಇರುವುದಿಲ್ಲ. ಚೀಫ್ ಸೆಕ್ರೆಟರಿ ಒಂದು ಇದಕ್ಕಿಂತ ಹಾಸ್ಯಾಸ್ಪದವಾದಂಥ ಸಂಗತಿ ಮತ್ತೊಂದು ಇರುವುದಿಲ್ಲ. ಕೆಲವೊಂದು ಅಂಶಗಳು ನಮ್ಮ ಗಮನಕ್ಕೆ ಬಾರದೆ ಇವೆಲ್ಲಾ ಆಗಿಹೋಗಿವೆ ಎಂಬ ವಿಚಾರವನ್ನು ಪ್ರಸ್ತಾಪ ಮಾಡಿ ಅಫಿಡವಿಟ್ ಅನ್ನು ಫೈಲ್ ಮಾಡಿ, ಹೈಕೋರ್ಟ್ ಕ್ವ್ಯಾಸ್ಟಿಗೇಟ್ ಮಾಡಿದರೆ, ರಿಟೈರ್ಡ್ ಆಗುವುದಕ್ಕೆ ಕೆಲವು ದಿವಸಗಳ ಮೊದಲು ತಮ್ಮ ತಲೆ ಮರೆಸಿಕೊಳ್ಳಲಿಕ್ಕೆ ಆತ ಸುಪ್ರೀಂಕೋರ್ಟ್‌ಗೆ ಹೋಗಿ ಒಂದು ಇಂಟರೀಮ್ ಆರ್ಡರ್ ಅನ್ನು ತೆಗೆದುಕೊಂಡಿದ್ದಾರೆ. ಅದು ಮತ್ತೆ ಆ ಹ್ಯಾಂಗಿಂಗ್ ಸ್ವೋರ್ಡ್ ಯಾವಾಗ ಬಂದು ತಲೆ ತೆಗೆಯುತ್ತದೋ ಗೊತ್ತಿಲ್ಲ. ಇಂಥ ಅನಿವಾರ್ಯಗಳೇನಿರುತ್ತವೆ; ನಮ್ಮ ರೇವಣ್ಣನವರು ತಕ್ಷಣ ಕೆ.ಸಿ. ರೆಡ್ಡಿಯವರ ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡಿದರು. ಕೆ.ಸಿ. ರೆಡ್ಡಿಯವರು ಕಮಿಟಿಯವರು ಒಂದು ರಿಪೋರ್ಟ್ ಕೊಟ್ಟರು, ಸರ್, ಎರಡೂ ಕೈಜೋಡಿಸಿ ಹೇಳುತ್ತೇನೆ, ನಮಸ್ಕಾರ ಮಾಡಿ, ಕೆ.ಸಿ. ರೆಡ್ಡಿಯವರಂಥ ಒಬ್ಬ ಪ್ರಾಮಾಣಿಕ ಅಧಿಕಾರಿಯನ್ನು ನಾನು ನೋಡಿಯೇ ಇಲ್ಲ. ರಾಜ್ಯದ ಅಭಿವೃದ್ಧಿಯ ಬಗ್ಗೆ ಅವರಿಗಿರುವ ಬದ್ಧತೆಯ ಬಗ್ಗೆ ನಾವು ಪ್ರಶ್ನಿಸುವ ಹಾಗಿಲ್ಲ. ನಾವೆಲ್ಲಾ ಅವರಿಗೆ ಬಹಳ ಹತ್ತಿರದಲ್ಲಿದ್ದು ಅನೇಕ ಕೆಲಸಗಳನ್ನು ಮಾಡಿದ್ದೇವೆ, ಅನೇಕ ವಿಚಾರಗಳನ್ನು ಅವರ ಹತ್ತಿರ ತಿಳಿದುಕೊಂಡಿದ್ದೇವೆ. ಇವರದಾಯಿತು, ನೆಕ್ಸ್ಟ್ ಕೆ.ಸಿ. ರೆಡ್ಡಿಯವರ ವರದಿ, ಅವರ ಕೈಯಲ್ಲಿ ಎಷ್ಟೆಷ್ಟು ಲ್ಯಾಂಡ್ ಇದೆ ಎಂದು ಹೇಳಿಬಿಡಿ., ಎಷ್ಟು ಗುಂಟೆ, ಎಷ್ಟು ಎಕರೆ, ಎಲ್ಲಿ, ಏನು? ಏನೂ ಇಲ್ಲ. ಅದರ ಜವಾಬ್ದಾರಿ ತೆಗೆದು ಇಂಡಸ್ಟ್ರಿಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಮೇಲೆ ಹಾಕಿದರು, ಪಾಪ ಆ ಕೆ.ಸಿ. ರೆಡ್ಡಿಯವರಿಗೆ, ನಮ್ಮ ಖರ್ಗೆ ಸಾಹೇಬರು ಹೇಳಿದಂತೆ ನಾ ಖಾಯಾ, ನಾ ಪೀಯಾ, ಗ್ಲಾಸ್ ತೋಡಾ ಬಾರ್ ಆಣಾ, ಗುಲ್ಬರ್ಗಾದಲ್ಲಿ ಹೋಟೆಲ್ ಬಿಜಿ ಇರುತ್ತದೆ. ಯಡಿಯೂರಪ್ಪನವರೇ ಬಿಸಿಲು ತಾಪ ಜಾಸ್ತಿ ಯಾವನೊಬ್ಬ ದುಡ್ಡು ಹೆಚ್ಚಿರುವುದಿಲ್ಲಾ ಹೋಟೆಲ್‌ನೊಳಗೆ ಹೋಗುತ್ತಾನೆ, ಎಲ್ಲಾ ಬೋರ್ಡ್ ಓದುತ್ತಾನೆ, ಅವ್ಯಾವುದು ಇವನಿಗೆ ಎಟುಕುವುದಲ್ಲ, ಟೇಬಲ್ ಮೇಲಿನ ಗ್ಲಾಸಿನಲ್ಲಿದ್ದ ನೀರು ಕುಡಿಯುತ್ತಾನೆ.

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) : ಒಂದು ನಿಮಿಷ ಈಲ್ಡ್ ಆಗಿ, ಹೇಳುತ್ತೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ರೇವಣ್ಣನವರೇ, ಒಂದು ನಿಮಿಷ ನಾನು ಮುಗಿಸಿಬಿಡುತ್ತೇನೆ, ನಿಮಗೆ ಈಲ್ಡ್ ಆಗುವುದಿಲ್ಲವೇ? ಆತ ನೀರು ಕುಡಿಯುವಾಗ ಕೈಜಾರುತ್ತೆ. ಆ ಗ್ಲಾಸ್ ಕೆಳಗೆ ಬಿದ್ದುಬಿಡುತ್ತದೆ, ಇವರದು ಯಾರ್‍ಯಾರದೂ ಎಷ್ಟೆಷ್ಟು ಬಿಲ್ಲು ಎಂದು ಹೇಳುವ ಸಪ್ಲೈಯರ್ ಇರುತ್ತಾನಲ್ಲಾ, ಇವನು ಕೌಂಟರ್ ಹತ್ತಿರಕ್ಕೆ ಬಂದಾಗ ಈತ ಪಾಪ ಏನೂ ತಿಂದಿಲ್ಲ, ಕುಡಿದಿಲ್ಲ, ಆ ಗ್ಲಾಸ್ ಕೆಳಗೆ ಬಿದ್ದು ಪೀಸ್ ಆಗಿತ್ತಲ್ಲಾ, ನಾ ಖಾಯಾ, ನಾ ಪೀಯಾ ಗ್ಲಾಸ್ ತೋಡಾ ಬಾರ ಆಣಾ ಎನ್ನುವಂತೆ ಆ ಗ್ಲಾಸ್ ಒಡೆದದ್ದಕ್ಕೆ ಹನ್ನೆರಡಾಣೆ ಎಂದು ಹೇಳುತ್ತಾರೆ, ಆ ಹನ್ನೆರಡಾಣೆ ಕೊಟ್ಟು ಹೊರಗೆ ಬರುತ್ತಾನೆ. ಕೆ.ಸಿ. ರೆಡ್ಡಿಯವರಿಗೆ ಆ ಸ್ಥಿತಿ ಬಂತು. For such a respectable man, with impeccable record of honesty and public service. Why all these

things happened. Some invisible force, ಕಣ್ಣಿಗೆ ಕಾಣದಿರುವಂತಹ, ಕಣ್ಣಿಗೆ ಗೋಚರವಾಗದಂಥ some extra constitutinal authority, which is hell bent on taking revenge on somebody tries to traverse in directions like this and results in a situation like this. What else is this otherwise? ಅಷ್ಟೊಂದು ಪ್ರಾಮಾಣಿಕವಾಗಿ ಜೀವನವನ್ನು ಕಳೆದಂಥವರು ಕೋರ್ಟಿನಲ್ಲಿ ಕಡೆಯಲ್ಲಿ ಆ blemish ಅನ್ನು carry ಮಾಡಿಕೊಂಡು he has to close his eyes ಅಂಥ ಒಬ್ಬ ಮನುಷ್ಯನಿಗೆ do you think it is a small insult? Why all these things happened? ನಮ್ಮಲ್ಲಿ ದೇಶಭಕ್ತಿಗೇನೂ ಕೊರತೆಯಿಲ್ಲ ಅಧ್ಯಕ್ಷರೇ, ಧೀರೂ ಭಾಯಿ ಅಂಬಾನಿ ಸತ್ತು ಹೋದರೆ ಸತ್ತುಹೋದರೆ ನಾವು ಕ್ಯೂನಲ್ಲಿ ನಿಂತು ಅಳುತ್ತೇವೆ.

ನಮ್ಮಪ್ಪನೋ ಸೋದರ ಮಾವನೋ ಸತ್ತುಹೋದ ಹಾಗೆ. He is an accused. It is this Ambani who crippled the economy of this Country. He played fraud on the economy of this Country. Jamshetji Nasarwalji Tata was also a business man. He was the President of the Congress Party during the freedom movement. He was a business man. But he was a nationalist. ಆತ ಒಬ್ಬ ರಾಷ್ಟ್ರಪ್ರೇಮಿಯಾಗಿದ್ದ. ನಂಜುಂಡಸ್ವಾಮಿಯವರಿಗೆ ಇನ್ನೂ ದುಡ್ಡು ಕೊಟ್ಟಿಲ್ಲವೆಂದು ನೀವು ಹೇಳುತ್ತಾ ಇದ್ದಿರಿ. ನಂಜುಂಡಸ್ವಾಮಿ ಯಾವ ರೈತನಾಗಿ ಕೆಲಸ ಮಾಡಿದ್ದರು, ದುಡ್ಡು ಏಕೆ ಕೊಡಬೇಕು? ಅಂಬಾನಿಯವರಿಗೆ ಏನಾದರೂ ಮಾಡುವುದಿದ್ದರೆ ಮಾಡೋಣ. ಅವರಿಗೆ ಏನಾದರೂ ಸಹಾಯ ಮಾಡುವುದಿದ್ದರೆ ಇನ್ನೊಂದು FWA ಮಾಡೋಣ. ಎಷ್ಟು ದಿವಸ, ಎಷ್ಟು ಕಾಲ ಸತ್ಯ ಮರೆಮಾಚಿ ನಾವು ನಮ್ಮದೇ ಆದಂಥ ಅವತಾರಗಳನ್ನು ಧರಿಸಿ ಜನರನ್ನು ತಪ್ಪು ದಾರಿಗೆ ಎಳೆಯುವುದಕ್ಕೆ ಸಾಧ್ಯ ಅಧ್ಯಕ್ಷರೇ? ನಾವು ಎಲ್ಲೋ ಒಂದುಕಡೆ ಸಿಕ್ಕಿಬೀಳುತ್ತೇವೆ. ಬಹಳ ಹರ್ಟ್ ಆಗುತ್ತೆ. ಪಂಗಳಿ ವೆಂಕಯ್ಯನವರು ಫ್ರೀಡಂ ಮೂವ್‌ಮೆಂಟ್ ಆಗುವಾಗ ರಾಷ್ಟ್ರಧ್ವಜವನ್ನು ರೂಪಿಸಿದಂಥವರು. ಕಾಂಗ್ರೆಸ್ ಧ್ವಜ ಹೋಗಿರಬೇಕು ಎಂದು ಹೇಳಿ. He was landlord. - - ಸ್ವಾತಂತ್ರ್ಯ ಬಂದನಂತರ ಅವರು ಬದುಕಿದ್ದರು. ಯಾವ ಸ್ಥಿತಿಗೆ ಬಂದಿದ್ದರು ಎಂದರೆ, ದರಿದ್ರಾವಸ್ಥೆಗೆ ಬಂದು ಜೀವನ ನಡೆಯಲಾರದ ಸ್ಥಿತಿಗೆ ಬಂದಿದ್ದರು. ಅವರಿಗೆ ಪೆನ್‌ಷನ್ ಕೊಡಬೇಕೆಂದು ಹೇಳಿ ಹೋಗುತ್ತಾರೆ. ನಿಮಗೆ ನಮಸ್ಕಾರನಪ್ಪ, ನಾನು ಭಾರತ ಮಾತೆಗೆ ಸೇವೆ ಮಾಡಿದವನು, ಪೆನ್‌ಷನ್‌ಗೋಸ್ಕರ ಮಾಡಲಿಲ್ಲ, ಹೀಗೆಯೇ ಉಪವಾಸ ಇದ್ದು ಸತ್ತು ಹೋಗುತ್ತೇನೆಂದು ಹೇಳಿ ಕಳುಹಿಸುತ್ತಾರೆ. ನಿಮಗೆ ನಮಸ್ಕಾರನಪ್ಪ, ನಾನು ಭಾರತ ಮಾತೆಗೆ ಸೇವೆ ಮಾಡಿದವನು, ಪೆನ್‌ಷನ್‌ಗೋಸ್ಕರ ಮಾಡಲಿಲ್ಲ, ಹೀಗೆಯೇ ಉಪವಾಸ ಇದ್ದು ಸತ್ತು ಹೋಗುತ್ತೇನೆಂದು ಹೇಳಿ ಕಳುಹಿಸುತ್ತಾರೆ. ಅಂಥವರೆಲ್ಲಾ ಹುಟ್ಟಿ, ಓಡಾಡಿದ ಭೂಮಿಯಲ್ಲಿ ನಾವಿದ್ದೇವೆ. ಮಾನ್ಯ ಮಾಧುಸ್ವಾಮಿಯವರು ಕಡೆಗೆ ಭಾವುಕರಾದರು. ಹೆತ್ತತಾಯಿ, ಹೆತ್ತ ತಾಯಿಯನ್ನು ಹೊತ್ತಂಥ ತಾಯಿ,

ಆ ಭೂಮಿ ವಿಚಾರಕ್ಕೆ ಸಂಬಂಧಿಸಿದಂತೆ ನಾವು ಇವತ್ತು ಮಾತನಾಡುತ್ತಿದ್ದೇವೆ ಅಂತ ನಮಗೆ ಅಗತ್ಯವಿಲ್ಲದ ಭೂಮಿಯನ್ನು, ಸಂಬಂಧವಿಲ್ಲದ ಭೂಮಿಯನ್ನು, ಆಕರ್ಷಿತ ಭೂಮಿಯನ್ನು ನಾನಾ ರೂಪಗಳಲ್ಲಿ ತಮ್ಮ ವರ್ಚಸ್ಸು, ಶಕ್ತಿ ಅಧಿಕಾರವನ್ನು, ತೋಳ್ಬಲವನ್ನು ಪ್ರಯೋಗ ಮಾಡಿ ಎಲ್ಲೆಲ್ಲಿ ಅನುಕೂಲತೆಗಳು ಸಿಗುತ್ತದೋ ಅಲ್ಲೆಲ್ಲಾ ಕಬಳಿಸತಕ್ಕವರೆಲ್ಲಾ ಭೂಮಿ ಮೇಲೆ ಪ್ರೀತಿ ಇರತಕ್ಕಂಥವರೇ; ಮನುಷ್ಯರ ಮೇಲೆ ಪ್ರೀತಿ ಇರತಕ್ಕಂಥವರೇ. ಅಸಹಾಯಕರಾಗಿರತಕ್ಕಂಥವರು. ಆದರೆ, ಯಾರು ಯಾರಿಗೆ ಉಪನ್ಯಾಸ ಹೇಳಬೇಕು? ಕಳ್ಳನನ್ನು ನೋಡಿ, ಪೋಲೀಸಿನವರು ಓಡಿಹೋಗುವ ಕಾಲ ಇದು. ಪೋಲೀಸಿನವರನ್ನು ನೋಡಿ ಕಳ್ಳ ಬಚ್ಚಿಟ್ಟುಕೊಳ್ಳುವ ಕಾಲ ಅಲ್ಲ ಅಧ್ಯಕ್ಷರೇ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಸಭಾಧ್ಯಕ್ಷರೇ, ಏಕೆಂದರೆ ನಮ್ಮ ಹಿರಿಯ ನಾಯಕರಾದಂಥ ರಮೇಶ್ ಕುಮಾರ್ ಸಾಹೇಬರಷ್ಟು ಅನುಭವ ನಮಗಿಲ್ಲ. ಕೆ.ಸಿ. ರೆಡ್ಡಿಯವರ ಅಧ್ಯಕ್ಷತೆ ರೇವಣ್ಣನವರು ಮಾಡಿದರು ಎಂದರು. ಕೆ.ಸಿ. ರೆಡ್ಡಿಯವರು ಒಬ್ಬರೇ ಇರಲಿಲ್ಲ. ಈ ರಿಪೋರ್ಟ್ ಕೊಡುವಂಥ ಸಂದರ್ಭದಲ್ಲಿ ವಿವಿಧ ಹನ್ನೆರಡು ಇಲಾಖೆಯ ಮುಖ್ಯಸ್ಥರುಗಳು ಇದ್ದರು. ಅವರ ಅಭಿಪ್ರಾಯದ ಮೇಲೆ ಎಲ್ಲಾ ಒಟ್ಟು ಕ್ರೋಢೀಕರಣ ಮಾಡಿ, ರಿಪೋರ್ಟ್ ಕೊಟ್ಟಿದ್ದಾರೆ. ಏಕೆಂದರೆ, ಅದರಲ್ಲಿ ಕಾಣದ ಕೈ ಇದೆ ಎಂದರು. ಯಾವುದು ಕಾಣದ ಕೈ ಇದೆಯೆಂದು ಬೇಕಾದರೆ ಬಹಿರಂಗವಾಗಿ ಹೇಳಲಿ, ನನ್ನದೇನೂ ತಕರಾರು ಇಲ್ಲ. ಹನ್ನೆರಡು ಜನ ಇಲಾಖೆಯ ಮುಖ್ಯಸ್ಥರು ಇದ್ದರು. ಏನಾದರೂ ಕೆ.ಸಿ. ರೆಡ್ಡಿ ಒಬ್ಬರೇ ಇದ್ದರೇ? ಕೆ.ಸಿ. ರೆಡ್ಡಿ ಒಬ್ಬರೇ ಇದ್ದು, ರೇವಣ್ಣನವರೇನಾದರೂ ಹಿಂದುಗಡೆ ಏನಾದರೂ ಬರೆಸಿದ್ದಾರೆಯೇ ಎಂಬ ಅಭಿಪ್ರಾಯ ರಾಜ್ಯದ ಜನತೆಗೆ ಹೋಗಬಾರದು. ಹನ್ನೆರಡು ಇಲಾಖೆಯ ಮುಖ್ಯಸ್ಥರೆಲ್ಲಾ ಸೇರಿ ಕೊಟ್ಟಿರತಕ್ಕ ವರದಿಯಲ್ಲಿ ಏನಾದರೂ ತಪ್ಪಿದ್ದರೆ, ಅದನ್ನು ಸದನದಲ್ಲಿ ಬೇಕಾದರೆ ಚರ್ಚೆ ಮಾಡಲಿ. ನಾನು ಹೇಳುವುದು, ಕಾಣದ ಕೈ ಎಂದರೆ ಏನೋ ನಾನು ಮಂತ್ರಿ ಇದ್ದೇನೆ ನನ್ನ ಹತ್ತಿರ ಅವರು, ಅಡ್ವೈಸರ್ ಆಗಿ ಇದ್ದರು. ಒಬ್ಬ ಅಡ್ವೈಸರ್ ಆಗಿರುವ ಅಧಿಕಾರಿ ಇಟ್ಟುಕೊಂಡು ಏನೋ, ಮಂತ್ರಿ ಹಿಂದುಗಡೆಯಿಂದ ಕಾಣದ ಕೈಯಿಂದ ಬರೆಸಿದ್ದಾನೆ ಎಂಬ ಅಭಿಪ್ರಾಯ ರಾಜ್ಯದ ಜನತೆಗೆ ಹೋಗಬಾರದು. ಮಾನ್ಯ ರಮೇಶ್‌ಕುಮಾರ್‌ರವರಷ್ಟು ನಾನು ನುರಿತಿಲ್ಲ. ಏಕೆಂದರೆ, ಅಷ್ಟು ಅನುಭವ ನನಗಿಲ್ಲ. ಅವರು ವಿಧಾನ ಸಭಾ ಅಧ್ಯಕ್ಷರಾಗಿದ್ದಂಥವರು, ಹಿರಿಯ ರಾಜಕಾರಣಿಗಳು. ಏಕೆಂದರೆ, ಈ ವಿಚಾರದಲ್ಲಿ ರಾಜ್ಯದ ಜನತೆಗೆ ತಪ್ಪು ಅಭಿಪ್ರಾಯ ಹೋಗಬಾರದು. ಕಾಣದ ಕೈ ಎಂದರೆ, ನಾನು ಮಂತ್ರಿ ಆಗಿದ್ದೆ, ಅವರು ನನಗೆ ಅಡ್ವೈಸರ್ ಆಗಿದ್ದರು. ಆದರೆ, ಹನ್ನೆರಡು ಇಲಾಖೆಯ ಮುಖ್ಯಸ್ಥರ ಅಧ್ಯಕ್ಷತೆಯಲ್ಲಿ ಅವರನ್ನು ಮಾಡಿದ್ದು. ಏಕೆಂದರೆ, ಕೆ.ಸಿ. ರೆಡ್ಡಿಯವರೊಬ್ಬರೇ ತೀರ್ಮಾನ ತೆಗೆದುಕೊಳ್ಳುವಂಥ ಅಧಿಕಾರವನ್ನು ಅವರಿಗೆ ನಾನು ಕೊಟ್ಟಿರಲಿಲ್ಲ. ಹನ್ನೆರಡು ವಿವಿಧ ಇಲಾಖೆಯ ಮುಖ್ಯಸ್ಥರುಗಳ ಅಧ್ಯಕ್ಷತೆಯಲ್ಲಿ ಸಮಿತಿ ಮಾಡಿ, ಅವರೆಲ್ಲರೂ ಸೇರಿ ಸರ್ವಾನುಮತದಿಂದ ಕೊಟ್ಟಿರುವ ನಿರ್ಣಯವನ್ನು ಹೇಳಿದ್ದೇನೆ. ಬೇಕಾದರೆ, ಅದನ್ನೂ ಸಭೆಯ ಮುಂದೆ ಚರ್ಚೆ ಮಾಡಿ, ನನ್ನದೇನೂ ಅಭ್ಯಂತರ ಇಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಸಾರ್, ರೇವಣ್ಣನವರ ಪರಿಚಯ ನನಗೆ ಬಹಳ ಚೆನ್ನಾಗಿದೆ. ನಾನು ಹೇಳಿದ ಮಾತುಗಳನ್ನು ಅವರೂ ತರಿಸಿಕೊಂಡು ನೋಡಲಿ. ನಾನು ಕಮಿಟಿ

ರಚನೆಯಾಯಿತು ಎಂದು ಅಷ್ಟೇ ನಾನು ಹೇಳಿದೆ. ಕಮಿಟಿ ರಚನೆಯಾದ ಮೇಲೆ, ಆ ಫೈಂಡಿಂಗ್ಸ್ ಬಗ್ಗೆ ಹೈಕೋರ್ಟ್‌ನಲ್ಲಿ ಈ ರೀತಿ ಹೇಳಿದ್ದಾರೆ, ದುರಾದೃಷ್ಟವಶಾತ್ ಅಂತಹ ಒಬ್ಬ ಗೌರವಸ್ಥರಿಗೆ ಇಂಥಾದ್ದು ಆಯಿತು ಎಂಬ ನೋವಿನಿಂದ ಹೇಳಿದ್ದೇನೆಯೇ ಹೊರತು, ನೀವು ಅವರನ್ನು ಉಪಯೋಗಿಸಿಕೊಂಡು ಈ ರೀತಿ ಮಾಡಿದಿರಿ ಎಂಬ ಮಾತನ್ನು ನಾನು ಹೇಳಲಿಲ್ಲ. ಮಾನ್ಯ ರೇವಣ್ಣನವರೇ, ನಾನು ಎಚ್ಚರ ತಪ್ಪಿ ಕೂಡ ಹೇಳಲಿಲ್ಲ. ನೀವು ಅಂಥವರಲ್ಲ, ಆ ರೀತಿ ಉಪಯೋಗ ಮಾಡಿಕೊಳ್ಳುವುದಿಲ್ಲವೆಂಬುದು ನನಗೆ ಗೊತ್ತು. ನಿಮಗೆ, ಅವರ ಬಗ್ಗೆ ಎಷ್ಟು ಗೌರವ ಇದೆಯೆಂಬುದೂ ಗೊತ್ತು. ಸಂದರ್ಭ ಹೀಗಾಯಿತು ಎಂದು ಅಷ್ಟು ಹೇಳಿದೆ ನಾನು. ಸಾರ್, ಗವರ್ನಮೆಂಟ್ ಪಾಲಿಸೀಸ್. ಕೇಂದ್ರ ಸರ್ಕಾರಗಳು, ರಾಜ್ಯಸರ್ಕಾರಗಳು ಇವೆಲ್ಲಾ ರಷ್ಯಾದಲ್ಲಿ ಪೆರಿಸ್ಟ್ರೋಕ್ ಆಗಿ ಗೋರ್ಬಚೇವ್ ಏನೋ ಪ್ರಯೋಗ ಮಾಡುವುದಕ್ಕೆ ಹೋಗಿ ನಂತರ ಲಿಬರ್‌ಲಯಸೇಷನ್ ಅಲೆ ಪ್ರಾರಂಭವಾಗಿ, ನಾವು ವರ್ಲ್ಡ್ ಟ್ರೇಡ್ ಆರ್ಗನೈಸೇಷನ್ಸ್‌ಗೆ ಹೋಗಿಬಂದಮೇಲೆ, ಸಿಗ್ನೇಚರ್ ಹಾಕಿ ಡಂಕಲ್ ಪ್ರಪೋಸಲ್ ಎಲ್ಲಾ ಇಲ್ಲಿ ಬರಬಹುದು ಎಂದು ಆಹ್ವಾನ ಮಾಡಿದ್ದಾದ ಮೇಲೆ ಒಂದು ಕಡೆಗೆ ನಷ್ಟಕ್ಕೆ ಒಳಗಾಗಿರತಕ್ಕಂಥ ನಮ್ಮ ಎಲ್ಲಾ ಪಿಎಸ್‌ಯುಎಸ್ ಗಳನ್ನೆಲ್ಲಾ ಎಲ್ಲಾ ಸೇಲ್ ಮಾಡಬೇಕೆಂದು ತೀರ್ಮಾನ ಮಾಡಿದೆವು. Disinvestment ಕಡೆಗೆ, ಇವತ್ತು ತಾನೇ ಸಿಂಗಪುರದಿಂದ ಬಂದಿದ್ದಾರೆ ಮುಖ್ಯಮಂತ್ರಿಗಳು. ಕಳೆದ ವಾರ ದುಬೈಗೆ ಹೋಗಿದ್ದರು, ಬನ್ನಿ ಬಂಡವಾಳ ಹೂಡಿ ಎಂದು ಹೇಳುತ್ತಾರೆ. ಯಾವುದು, What is your Policy? Disinvestment - ಮಾಡಿ, ಸಿಕ್ ಯೂನಿಟ್ಸ್‌ನ್ನು ಸೇಲ್ ಮಾಡಿ, ಇನ್‌ವೆಸ್ಟರ್ಸ್‌ನ್ನು ಕರೆದು ಇನ್‌ಫ್ರಾಸ್ಟ್ರಕ್ಚರ್ ಇತ್ಯಾದಿ ಡೆವಲಪ್‌ಮೆಂಟ್ ಮಾಡತಕ್ಕಂಥಾದ್ದೇ ಅಥವಾ ಅದನ್ನು ಸೆಲೆಕ್ಟೆಡ್ ಆಗಿಟ್ಟುಕೊಂಡು ಇದನ್ನು ಸೆಲೆಕ್ಟೆಟ್ ಆಗಿಟ್ಟುಕೊಳ್ಳುತ್ತೇವೆ ಎನ್ನುವುದೇ? ವ್ಯಾಜ್ಯ, ವ್ಯಾಜ್ಯಕ್ಕೆ ಲಂಡನ್, ಪಾಲಿಸಿಯ ಡಿಸ್ಟಾರ್ಷನ್ ಎಲ್ಲಾ ಒಂದಕ್ಕೊಂದು, ಒಂದಕ್ಕೊಂದು ಲಿಂಕ್ ಆಗಿದ್ದಾವೆ. ಈಗ ಬೆಂಗಳೂರು ಅಶೋಕ ಹೋಟೆಲ್. ಮೊನ್ನೆ ಹೋದೆ, ಬಹಳ ಚೆನ್ನಾಗಿ ಮಾಡಿದ್ದಾರೆ. 20 ಕೋಟಿ ರೂ.ಗೆ ಮಾರಿಬಿಟ್ಟರಂತೆ. ನನಗನ್ನಿಸುತ್ತೆ, ಯಾರಾದರೂ ಪಾಪದವರು, ನಾವು ಒಂದಷ್ಟು ದುಡ್ಡು ಹೊಂದಿಸಿದ್ದರೆ ನಾವು ತೆಗೆದುಕೊಳ್ಳಬಹುದಿತ್ತು ಅನ್ನಿಸುತ್ತೆ. ಈಗೇನು 20 ಕೋಟಿ ರೂ. ದೊಡ್ಡ ದುಡ್ಡಲ್ಲ. ಮೊದಲು ಕೋಟಿ ರೂ. ಎಂದರೆ ಬಹಳ ದೊಡ್ಡ ದುಡ್ಡಾಗಿತ್ತು. ನೂರು ಕೋಟಿ ರೂ. ಗೆ ಅಂತಹ ಆಸ್ತಿ ಸಿಗುತ್ತೆ. ಅವರು ಏಕೋ ಮಾರಿಬಿಟ್ಟರು, ಅವತ್ತು ಬೇರೆ ಯಾರೂ ಬರಲಿಲ್ಲವೋ ಏನೋ. ಏನು ಕಾರಣವೋ, ರೂಪಾಯಿಗೆ ಅಷ್ಟು ಬೆಲೆ ಇರಲಿಲ್ಲವೋ, ಅಂತು ಅದು ಆಗಿಹೋಯಿತು.

ಶ್ರೀ ಆಲಂಗೂರು ಶ್ರೀನಿವಾಸ್ : ಎನ್.ಜಿ.ಇ.ಎಫ್. ಆಸ್ತಿಯನ್ನು ಕೇವಲ 200 ರೂಪಾಯಿಗೆ ಒಂದು ಚದರಡಿಗೆ ಮಾರಿದ್ದಾರೆ. ಬಹುಶಃ ನಮಗೆ ಗೊತ್ತಿದ್ದಹಾಗೆ, ಮುಳಬಾಗಿಲಿನಲ್ಲೂ ಆ ರೇಟಿಗೆ ಸಿಕ್ಕುವುದಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಯಾವುದು ಮಾಡಿದರೂ ಕೂಡ ಅಪರಾಧ. ಮಾನ್ಯ ಈಶ್ವರಪ್ಪನವರು ಒಂದು ದಿವಸ ಟಿ.ವಿ. ಸಂದರ್ಶನ ಮಾಡಿದಾಗ ಒಂದು ಮಾತು ಹೇಳಿದರು.

ನಮ್ಮದೊಂದು ರಾಷ್ಟ್ರೀಯ ಪಕ್ಷ. ಈ ಪ್ರಾಜೆಕ್ಟ್ ಬಗ್ಗೆ ಅವರು ಕೇಳಿದರು. ಪ್ರಾಜೆಕ್ಟ್ ನಿಲ್ಲಿಸಿ ಎಂದು ನಾವು ಹೇಳುವುದಿಲ್ಲ. ಅವರೇನಾದರೂ ತಪ್ಪು ಮಾಡಿದರೆ, ಹೆಚ್ಚುವರಿ ಜಮೀನು ಇದ್ದರೆ, ಅದನ್ನೆಲ್ಲಾ ಸರ್ಕಾರಕ್ಕೆ ತೆಗೆದುಕೊಳ್ಳಲಿ ಎಂದು. ಒಂದು ರಾಷ್ಟ್ರೀಯ ಪಕ್ಷವಾಗಿ, ಬೇರೆ ಬೇರೆ ರಾಜ್ಯಗಳಲ್ಲಿ ಸರ್ಕಾರ ನಡೆಸುವವರಾಗಿ, ಕೇಂದ್ರದಲ್ಲಿ ಸರ್ಕಾರ ನಡೆಸಿದವರಾಗಿ, ನಾವು ಇನ್‌ವೆಸ್ಟ್ ಮಾಡತಕ್ಕಂಥವನ್ನು ಕಳುಹಿಸಿಬಿಟ್ಟರೆ, ಅದು ರಾಂಗ್ ಮೆಸೇಜ್ ಆಗುತ್ತೆ ಎಂಬ ಮಾತನ್ನು ಹೇಳಿದರು. ಇವರ ಕಡೆಯಿಂದ ಹೊಸ ಲೆಜಿಸ್ಲೆಷನ್, ಬಿಲ್ ಇಂಟ್ರಡ್ಯೂಸ್ ಮಾಡುತ್ತೇವೆ, ಆತ ಬಹಳ ದೊಡ್ಡ nuisance ಆಗಿದ್ದಾನೆ. ಇದು ಹಗಲು ದರೋಡೆ ಎಂಬ ಮಾತನ್ನು ಹೇಳಿದರು. ಲೆಜಿಸ್ಲೇಷನ್‌ಗೆ ಸೀಮಿತವಾಗಿ ಮಾತನಾಡುವುದಾದರೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಮ್ಮ ಅಧ್ಯಕ್ಷರ ಮತ್ತು ನಾಯಕರ ಅನುಮತಿಯನ್ನು ಪಡೆದು ಅವರಿಗೆ ಆಹ್ವಾನವನ್ನು ಕೊಡುತ್ತೇನೆ. ದಯಮಾಡಿ, ಲೆಜಿಸ್ಲೇಷನ್‌ನನ್ನು ಇಂಟ್ರಡ್ಯೂಸ್ ಮಾಡಿ. ಅದರ ಮೆರಿಟ್ಸ್ ಡಿ–ಮೆರಿಟ್ಸ್ ನೋಡಿಕೊಂಡು ನಾವು ಆ ಸಂದರ್ಭಕ್ಕೆ ಏನು ನಿಲುವು ತೆಗೆದುಕೊಳ್ಳಬೇಕೋ, ಅದನ್ನು ತೆಗೆದುಕೊಳ್ಳುತ್ತೇವೆ. ಮಾನ್ಯ ಮಾಜಿ ಪ್ರಧಾನ ಮಂತ್ರಿಗಳು ಇತ್ತೀಚೆಗೆ ಈ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರಿಗೆ ಒಂದು ಪತ್ರ ಬರೆದಿದ್ದಾರೆಂದು ನೋಡಿದೆ. ರಾಜ್ಯಪಾಲರು ಅದನ್ನು ಅನುಸರಿಸಿ ರಾಜ್ಯಸರ್ಕಾರಕ್ಕೆ ಒಂದು ಪತ್ರ ಬರೆದಿದ್ದಾರೆ ಎಂದು ತಿಳಿಯಿತು. ಇದನ್ನು ಇದನ್ನು ಮುಖ್ಯಮಂತ್ರಿಗಳು ಹೇಳಬೇಕು. ರಾಜ್ಯಪಾಲರಿಗೆ ಪತ್ರ ಬರೆಯುವ ಅಗತ್ಯ ಏನು? ನೇರವಾಗಿ ಮುಖ್ಯಮಂತ್ರಿಗಳಿಗೆ ಬರೆಯಬಹುದಿತ್ತಲ್ಲಾ. ರಾಜ್ಯಪಾಲರೇನು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದಾರೆ, ಅದರ ಬಗ್ಗೆ ಈ ಸಭೆಗೆ ತಿಳುವಳಿಕೆ ಕೊಟ್ಟರೆ ನಾವು ಅವರಿಗೆ ರುಣಿಗಳಾಗಿರುತ್ತೇವೆ. ಮಸೂದೆ ಬಗ್ಗೆ ಅವರ ಮನಸ್ಸಿನಲ್ಲಿ ಏನು ಆಲೋಚನೆ ಇದೆ, ಏನು ಕಲ್ಪನೆ ಇದೆ, ಆ ಮಸೂದೆಯನ್ನು ಮಂಡನೆ ಮಾಡಲಿ. ಆ ಖೇಣಿ, ಅಧ್ಯಕ್ಷರೇ, ನಾನಂತೂ ಒಬ್ಬ ನಾಗರೀಕನಾಗಿ ಸಾರ್ವಜನಿಕ ಜೀವನದಲ್ಲಿ ಇರತಕ್ಕಂಥವನಾಗಿ ಆತನ ಕೆಲವು ಹೇಳಿಕೆಗಳು, ಹಾವಭಾವಗಳು ಟಿ.ವಿ. ಸಂದರ್ಶನದಲ್ಲಿ, I would never approve. ಇವೆಲಾ ತಮಾಷೆ ವಿಷಯಗಳಲ್ಲ. ಆದರೆ, ಅತ್ಯಂತ ನೋವಿನ ಸಂಗತಿ ಏನು? ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ ಉತ್ತರ ಕನ್ನಡ ಜಿಲ್ಲೆಯಿಂದ ಆರ್.ಎಸ್. ನಾಯಕರು ಎಂದು ರಾಜ್ಯಸಭೆಗೆ ಆಯ್ಕೆ ಮಾಡಿದ್ದೆವು. ಕಾರವಾರದಿಂದ ಬೆಂಗಳೂರಿಗೆ ಬರಲು ಅವರಿಗೆ ಬಸ್ ಚಾರ್ಜ್‌ಗೂ ಕೂಡ ಅನುಕೂಲ ಇತ್ತೋ ಇಲ್ಲವೋ ಗೊತ್ತಿಲ್ಲ. ಅಲ್ಲಿಂದ ರಾಜ್ಯಸಭೆಗೆ ಎಲ್ಲಿಗೆ ಬಂದು ನಿಂತಿದೆ ಈಗ? ಮಲ್ಯ, ಮಲ್ಯ ಕುದುರೆಗಿಂತ ರಾಮಸ್ವಾಮಿ ಕುದುರೆ; ಅವರು ಕುದುರೆಗಳ ಮೇಲೆ ನಮ್ಮ ಅಸೆಂಬ್ಲಿಗೆ ಬರುವುದೊಂದೇ ಬಾಕಿ. ಲಾಂಜ್‌ಗೆ, ನಮಗೆಲ್ಲಾ ಹುರುಳಿ ಇಡುವುದು ಒಂದೇ ಬಾಕಿ; ಅನು ಏನು ಮಾಡುತ್ತಾನೆ ಅಂದರೆ ನಾನು ಕಂಪ್ಯೂಟರ್‌ನಲ್ಲಿಯೇ ಕುದುರೆಯನ್ನು ಬಿಡುತ್ತೇನೆಂದು ಹೇಳುತ್ತಾನೆ, With due respects to him, he is a Member of the Rajya Sabha. I am not supposed to talk about him, because he cannot defend himself here. ಆದರೆ ಶ್ರೀಮಂತಿಕೆ ಅಪಾರವಾದ ಹಣ ಇದೆ ಇವರ ಹತ್ತಿರ ಅಂತ ಎನ್ನತಕ್ಕಂಥ ಒಂದೇ ಒಂದು ಕಾರಣಕ್ಕಾಗಿ ಹತ್ತಾರು ವರ್ಷಗಳ ಕಾಲ

ರಾಜಕೀಯ ಜೀವನದಲ್ಲಿ, ಸಾರ್ವಜನಿಕ ಜೀವನದಲ್ಲಿ, ಎಲ್ಲಾ ನೋವು ಅಪಮಾನಗಳನ್ನು ಉಂಡವರು, ಅನುಭವಿಸಿದವರು ನಾವು. ನಮ್ಮಲ್ಲಿಯೇ ಇದ್ದಂತಹ ಒಬ್ಬ ಸಹ ಕಾರ್ಯಕರ್ತನನ್ನು, ಸಹಪಾಠಿಯನ್ನು ಅರ್ಹನಾದಂತಹವನನ್ನು, ಯೋಗ್ಯನಾದಂತಹವನ್ನು ಅಲ್ಲಿ ಹೋಗಿ ಪ್ರತಿನಿಧಿಸುವುದಕ್ಕೆ ಎಲ್ಲಾ ಗುಣಗಳು ಇರತಕ್ಕಂಥವನನ್ನು ದುಡ್ಡಿಲ್ಲ ಎನ್ನುವ ಕಾರಣಕ್ಕೆ ಪಕ್ಕಕ್ಕೆ ತಳ್ಳದೇ ಆ ಸಂಪ್ರದಾಯವನ್ನು ನಾವು ಮುಂದುವರೆಸಿಕೊಂಡು ಬಂದಿದ್ದರೆ, ಇವತ್ತು ಖೇಣಿಯಂತಹವನು ಇಷ್ಟು ಉದ್ದ ನಾಲಿಗೆ ಮಾಡುವುದಕ್ಕೆ ಅವಕಾಶ ಇರುತ್ತಿರಲಿಲ್ಲ. ಎಲ್ಲೋ ಒಂದು ಕಡೆಗೆ ನಾವು ಕಮ್ಯಾಂಡಿಟೀಸ್ ಅಂತ ರುಜುವಾತು ಮಾಡಿಕೊಂಡಿದ್ದೇವೆ. ಹಿರಿಯಕ್ಕನ ಚಾಳಿ ಮನೆ ಮಕ್ಕಳಿಗೆಲ್ಲಾ ಬರುತ್ತೆ. ಈ ಪಾರ್ಟಿ ಆ ಪಾರ್ಟಿ ಎನ್ನುವ ಪ್ರಶ್ನೆ ಇಲ್ಲ. No party is an exception to this. ಕೋರ್ಟ್ ಒಂದು ಕಡೆ ಏನು ಅಬ್‌ಜರ್‌ವೇಷನ್ ಮಾಡುತ್ತೆ. ಒಂದು ಅನ್ ಗೋಯಿಂಗ್ ಪ್ರಾಜೆಕ್ಟ್‌ನ್ನು ಸಕ್ಸೀಡಿಂಗ್ ಗೌರ್ನಮೆಂಟ್‌ಗೆ ಬರತಕ್ಕಂಥವರು, becaus there is a change in governance, they cannot dispense with that project. It has to go on if it is in the interest of the Centre or the State. ಅಂತ ಹೇಳುತ್ತಾರೆ. You have to bear that in mind. ಕೃಷ್ಣರವರು ಏನು ಮಾಡಿದರು? As Finance Minister and Chief Minister ಎಷ್ಟು ಸಾಧ್ಯವಾದರೆ ಅಷ್ಟು ಹಣವನ್ನು ಪಂಪ್ ಮಾಡಿ ರಸ್ತೆಯನ್ನು ಅರ್ಜೆಂಟ್ ಆಗಿ ಮಾಡುವುದಕ್ಕೆ ಬೆಂಗಳೂರಿಗೆ ಮೈಸೂರಿಗೆ ಅನುಕೂಲ ಮಾಡಿಕೊಡುವುದಕ್ಕೆ ಎಷ್ಟು ಬೇಕೋ ಅಷ್ಟು ಸುಧಾರಣೆ ಮಾಡುವುದಕ್ಕೆ ಅವರ ಕೆಲಸವನ್ನು ಅವರು ನಿರ್ವಹಿಸಿದ್ದಾರೆ. ಈಗ ಅದರ ಅಗತ್ಯ ಇದೆಯೇ ಇಲ್ಲವೇ ವಜಾ ಮಾಡಿದರೆ ಏನಾಗುತ್ತದೆ, ಮುಂದುವರೆಸಿದರೆ ಏನಾಗುತ್ತದೆ ಹೆಚ್ಚುವರಿ ಜಮೀನು ತೆಗೆದುಕೊಳ್ಳಬೇಕೇ, ತೆಗೆದುಕೊಳ್ಳದಿದ್ದರೆ ಏನಾಗುತ್ತದೆ, ಮಸೂದೆ ಏನು ಬರಬೇಕು ಎಲ್ಲಾ ನೀವು ಯೋಚನೆ ಮಾಡಿ; including the Court observation. This is very important. ನಾನು ಮರೆಯುವಂತಿಲ್ಲ. ಬೋಫೋರ್ಸ್ ವಿಚಾರ ಬಂತು. ಇಡೀ ದೇಶದಲ್ಲಿ ನಾವು ಅವತ್ತು ಜನತಾದಳದಲ್ಲಿದ್ದೆವು. ವಿರೋಧಪಕ್ಷದವರೆಲ್ಲಾ ಸೇರಿ ಪಾರ್ಲಿಮೆಂಟ್‌ನ್ನು ಇದರಲ್ಲಿ ಭ್ರಷ್ಟಾಚಾರ ನಡೆದಿದಿ ಅಂತ ಬೈಕಾಟ್ ಮಾಡಿದೆವು. ವಿಪರ್ಯಾಸ–ಕಾರ್ಗಿಲ್ ಯುದ್ಧವಾದಾಗ ಜಾರ್ಜ್‌ಫರ್ನಾಂಡೀಸ್‌ರವರು ಡಿಫೆನ್ಸ್ ಮಿನಿಸ್ಟರ್ ಆಗಿದ್ದುಕೊಂಡು ಅದೇ ಬೋಫೋರ್ಸ್‌ನ್ನು ಬಳಸಿ, "It has proved to be one of the best weapons". ಅಂತ ಹೇಳಬೇಕಾಗಿ ಬಂತು. What I say is, that it was not against the Bofors Company. it was not against the usage of Bofors. ಅವತ್ತಿಗೆ ಸೀಮಿತ ಇಶ್ಯೂ ಏನೆಂದರೆ ಈ ವ್ಯವಹಾರದಲ್ಲಿ ಏನೋ ಒಂದು ರೀತಿಯ ಅಕ್ರಮಗಳು ನಡೆದಿದೆ ಅಂತ ಹೇಳಿ ಇದ್ದ ನಿಲುವು. ಮೂಲಭೂತವಾಗಿ ಈ ಪ್ರಾಜೆಕ್ಟ್‌ನ ವಿಚಾರದಲ್ಲಿ ನಾವು ನಡೆದುಕೊಳ್ಳತಕ್ಕಂಥ ದೃಷ್ಟಿ, ಅದರ ಅಗತ್ಯತೆ ಇರುವಿಕೆ, ಬೇಡದೇ ಇರತಕ್ಕಂಥ ವಿಚಾರ. ಅದರಲ್ಲಿರತಕ್ಕಂಥ ಜನ ಯಾರಿದ್ದಾರೆ, ಅವರ ನಡವಳಿಕೆ ಅವರು ಇರತಕ್ಕಂಥ ವಿಚಾರ ಅವರ ಬಗ್ಗೆ, ಇರತಕ್ಕಂಥ ಅಭಿಪ್ರಾಯ, ಮತ್ತು ಅದು ಎಲ್ಲಿಯವರೆಗೆ ಹೋಗಬೇಕು ಎಲ್ಲಿ ನಿಲ್ಲಬೇಕು, ಈ ವಿಚಾರಗಳಲ್ಲಿ

ನಮಗೆ ಸ್ಪಷ್ಟತೆ ಇರಬೇಕಾಗುತ್ತದೆ. ಡಿನ್ನರ್ ಅಂತ! ಡಿನ್ನರ್ ಅವರು ಕೊಟ್ಟಿದ್ದಾರೆ. ನಾವು ಕೊಡಲಿಲ್ಲ, ಎಂದು ಹೇಳುತ್ತೇವೆ. ಸಾರ್ ಇವೆಲ್ಲಾ ಸರ್ವೇಸಾಮಾನ್ಯವಾಗಿಬಿಟ್ಟಿದೆ. ಆದರೆ ನಾವು ಊಟ ಮಾಡುವುದು ಸಾರ್ವಜನಿಕ ಇಶ್ಯೂ ಆಗುತ್ತದೆ. ನಮ್ಮ ಮಕ್ಕಳು ಎಲ್ಲಿಯಾದರೂ ಸಣ್ಣಪುಟ್ಟ ತಪ್ಪು ಅಪರಾಧ ಮಾಡಿದರೆ ಒಂದು ಕಾರೋ ಗೀರೋ ತೆಗೆದುಕೊಂಡು ಹೋಗಿ ಬಂದರೆ ಅದೇ ದೊಡ್ಡ ವಿಷಯವಾಗುತ್ತದೆ. ನಮ್ಮ ಪ್ರೈವೇಟ್ ಲೈಫ್‌ನಲ್ಲಿ ನಾವು ಎಲ್ಲಿಯವರೆಗೂ ಒಂದು ಚೂರು ಎಡವಿದರೆ ಅದು ಒಂದು ಡಿಬೇಟರ್ ಇಶ್ಯೂ, ಟಿ.ವಿ, ಇನ್ನೊಂದು ಮತ್ತೊಂದು ಎಲ್ಲಾ ಕಾರ್ಯಕ್ರಮಗಳು, ನ್ಯೂಸ್ ಪೇಪರ್‌ಗಳು ಎಲೆಕ್ಟ್ರಾನಿಕ್ ಮೀಡಿಯಾ ಪ್ರಿಂಟ್ ಮೀಡಿಯಾ ಎಲ್ಲಾ ನಮ್ಮ ಕಡೆಗೆ ಬೀಳುತ್ತವೆ. ಇಂತಹ ದೊಡ್ಡ ಅಪರಾಧಗಳಲ್ಲಿ ಇಡೀ ದೇಶವನ್ನು ನುಂಗಿದ ದೊಡ್ಡ ಮನುಷ್ಯರು ಟೈ ಕಟ್ಟಿಕೊಂಡು ತ್ರೀಪೀಸ್ ಸೂಟ್ ಹಾಕಿಕೊಂಡು ಎಷ್ಟು ಮರ್ಯಾದೆಯಿಂದ ಕುಳಿತಿರುತ್ತಾರೆ ನೋಡಿ. ಅವರು ಯಾರ ಲೆಕ್ಕಕ್ಕೂ ಸಿಗುವುದಿಲ್ಲ. ಯಾವ ಆಡಿಟರ್ ಸಿಗುವುದಿಲ್ಲ, ಯಾವ ದೇವರ ಕೈಗೂ ಸಿಗುವುದಿಲ್ಲ, ಯಾವ ಪೊಲೀಸರ ಕೈಗೂ ಸಿಗುವುದಿಲ್ಲ, ಯಾರ ಅಸೆಂಬ್ಲಿಗೂ ಸಿಗುವುದಿಲ್ಲ, ಯಾವ ಮೀಡಿಯಾಗೂ ಸಿಗುವುದಿಲ್ಲ. ಯಾವ adverse ಪಬ್ಲಿಸಿಟಿಯೂ ಇಲ್ಲ ಮತ್ತೆ ನಾವು ಜನರ ಹತ್ತಿರ ಹೋದಾಗ ರಸ್ತೆ ಗುಂಡಿ ಬಿದ್ದಿದ್ದರೆ ಅಥವಾ ಯಾವುದೋ ತಪ್ಪು ಆಗಿದ್ದರೆ ನಿಮ್ಮನ್ನು ಬಾಯಿಗೆ ಬಂದಂತೆ ಎಲ್ಲವನ್ನೂ ಮಾತನಾಡುತ್ತಾನೆ. ಏನು ಮಾತನಾಡುತ್ತಾನೆ. ಏನು ಮಾಡುತ್ತಾನೆ ನೀವು ಹೋದಾಗ ಅದೇ ಕೆಲಸವಾಗಿ ಬೀಡಿ ಸೇದಿಕೊಂಡು ಹೊಗೆಯನ್ನು ನಿಮ್ಮ ಮುಖಕ್ಕೆ ಬಿಡುತ್ತಾನೆ. ನಿಮಗೆ ಗತಿ ಇಲ್ಲ ನೀವು ಅವನ ಓಟು ಕೇಳಲೇಬೇಕು, ಏನಪ್ಪ ಅಣ್ಣ ಚೆನ್ನಾಗಿದ್ದೀಯಾ ಅಂದರೆ ಆ.... ಇವತ್ತು ಬಂದಿಯಾ ಅಂತಾನೆ, ಇಲ್ಲಪ್ಪ 10 ಸಲ ಬಂದಿದ್ದೆ ಅಂದರೆ ಯಾವಾಗಲೋ ನಾನು ಇಲ್ಲದೇ ಇದ್ದಾಗ ಏನೋ ಅಂತಾನೆ, ಆದರೆ ಅವನ ಓಟು ನಿಮಗೆ ಬೇಕೇ ಬೇಕಲ್ಲಾ ಅವನು ಅಷ್ಟು ಅಂದರೂ ಕೂಡ ಏನಣ್ಣ ಬಹಳ ಸಿಟ್ಟಿನಲ್ಲಿದ್ದೀಯಾ, ಹಾಗೆ ಹೀಗೆ ಅಂತ ಹೇಳಿ ಅವನ ಭುಜದ ಮೇಲಿಟ್ಟರೆ ನಮ್ಮ ಕೈ ತೆಗೆದು ಬಿಸಾಕುತ್ತಾನೆ. ಏಕೆಂದರೆ ಅವನ ಓಟು ನಿಮಗೆ ಬೇಕಲ್ಲ ನಮಗೆ 5 ವರ್ಷಕ್ಕೆ ಒಂದು ಸಲ ಈ ಹಂಗಿಗೋಸ್ಕರ ಮಾನ ಬಿಟ್ಟು ಮರ್ಯಾದೆ ಬಿಟ್ಟು ಲಜ್ಜೆ ಬಿಟ್ಟು, ಮಾಡಬಾರದ್ದೆಲ್ಲಾ ಮಾಡಿ ಹೊರಲಾರದ ಹೊರೆಯಲ್ಲ ತಲೆಮೇಲೆ ಹೊತ್ತುಕೊಳ್ಳಬೇಕಾಗಿದೆ. ಹೆಂಡರು ಮಕ್ಕಳ ಹತ್ತಿರವಾದರೂ ಗೌರವ ಇರುತ್ತಾ ಅಂದರೆ ಅದೂ ಇರುವುದಿಲ್ಲ, ಏನು ಬಾಳು ರೀ, ರಾತ್ರಿ ಹೋದರೆ ಬೆಳಿಗ್ಗೆ ಬರುತ್ತೀರಿ ಬೆಳಗ್ಗೆ ಹೋದರೆ ರಾತ್ರಿ ಬರುತ್ತೀರಿ, ಎಲ್ಲೆಲ್ಲಿ ಹೋಗಿ ಏನೇನು ಮಾಡಿಕೊಂಡು ಬರುತ್ತೀರೋ ಅಂತಾರೆ. ಈ ವಾಟಾಳರ ಮನೆಯಲ್ಲಿ ನಾನು ನ್ಯಾಯ ಮಾಡುವುದೇ ಒಂದು ದೊಡ್ಡ ಕೆಲಸವಾಗಿದೆ. ಬಹಳ ಕಷ್ಟ.

ಶ್ರೀ ವಾಟಾಳ್ ನಾಗರಾಜ್ : ಇದಕ್ಕೆ ಮನೆ ಮುರುಕು ಕೆಲಸ ಅಂತ ಹೆಸರು. ಅವರು ನಮ್ಮ ಸ್ನೇಹಿತರೇ, ಅದರೂ, ಮನೆ ಮುರುಕು ಕೆಲಸ ಮಾಡುತ್ತಿರುತ್ತಾರೆ ಯಾವಾಗಲಾದರೂ ಇದು ನೋಡಿ, ನಮ್ಮ ಮನೆಯವರ ಗತಿ ಏನಾಗಬೇಕು ಈ ರೀತಿ ಹೇಳಿದರೆ,

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಈ ಬಗ್ಗೆ ಮಾತನಾಡಿದಾಗ ಹಿಂದೆ ಮಾನ್ಯ ಜೆ.ಎಚ್. ಪಟೇಲರು ಹೇಳಿದರು, ಅದು ವಾಟಾಳ್ ನಾಗರಾಜ್‌ರವರಿಗೆ ಬೇಡ, ನನಗೆ ಮತ್ತು ನಂಜೇಗೌಡರಿಗೆ ಇರಲಿ ಅಂತ ಹೇಳಿದ್ದರು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ರಮೇಶ್ ಕುಮಾರ್‌ರವರೇ, ನಾನು ಹೇಳುತ್ತೇನೆ. ಈ ಸದನದಲ್ಲಿಯೇ ಹೇಳಿದ್ದಾರೆ. ಅವರೇ ಅಧ್ಯಕ್ಷರಾಗಿದ್ದರು. ಮತ್ತೊಮ್ಮೆ ನಾನು ತಮಗೆ ಜ್ಞಾಪಿಸುತ್ತಿದ್ದೇನೆ. ಅವರು ಅಧ್ಯಕ್ಷ ಪೀಠದಲ್ಲಿ ಕುಳಿತಿದ್ದರು. ಇವರು ಏನು ಹೇಳಿದರು ವಾಟಾಳ್ ನಾಗರಾಜ್‌ರವರು ಮಹಿಳಾ ಆಯೋಗದ ಅಧ್ಯಕ್ಷರಾಗಬೇಕು ಅಂತ ಹೇಳಿದರು. ಮಾನ್ಯ ರಮೇಶ್ ಕುಮಾರ್‌ರವರು, ಮಾನ್ಯ ಅಧ್ಯಕ್ಷರೇ, ನಾನು ನನಗೆ ಬೇಡಿ, ನಾನು ಒಬ್ಬೊಂಟಿಗ 29 ಜನ ಮಹಿಳೆಯರು ಇದ್ದಾರೆ ನೀವು ಹಾಕಬಾರದು ಇದು ಸರಿ ಇಲ್ಲ ಅಂತ ಹೇಳಿದೆ. ಇದನ್ನು ನಾನು ಬಹಳ ಗಂಭೀರವಾಗಿ ಹೇಳಿದೆ, ಅದಕ್ಕೆ ಅವರು ಇಲ್ಲಾ ಇಲ್ಲಾ ಆಗುವುದಿಲ್ಲ ನೀವು ಇರಲೇಬೇಕು ಅಂತ ಹಠ ಮಾಡಿದರು. ಇಲ್ಲಾ ಖಂಡಿತಾ ಆಗುವುದಿಲ್ಲ ಸ್ವಾಮಿ ಅಂತ ನಾನು ಹೇಳಿದೆ. ಆಯಿತು ಇವತ್ತು ಒಂದು ದಿವಸ ನನ್ನ ಮಾತು ಕೇಳಿ. ನಾಳೆ ಸಭಾನಾಯಕರು ಬರುತ್ತಾರೆ, ಆಗ ಸಭಾನಾಯಕರು ಮಾನ್ಯ ಜೆ.ಎಚ್. ಪಟೇಲರ. ಅವರು ಇರಲಿಲ್ಲ. ಸಭಾನಾಯಕರು ಬರಲಿ ಅವರು ಬಂದ ನಂತರ ಅವರು ಏನು ತೀರ್ಮಾನ ತೆಗೆದುಕೊಳ್ಳುತ್ತಾರೋ ತೆಗೆದುಕೊಳ್ಳಲಿ ಅಂತ ಹೇಳಿದರು. ಪುನಃ ನಾಳೆ ಬೆಳಿಗ್ಗೆ ಸದನ ಆರಂಭವಾಯಿತು, ಪ್ರಶ್ನೋತ್ತರ ಕಾಲ ಮುಗಿಯಿತು, ಶೂನ್ಯ ವೇಳೆಯಲ್ಲಿ ಅವರು ಸುಮ್ಮನೆ ಕುಳಿತುಕೊಳ್ಳಲಿಲ್ಲ. ತೀಟೆ, ಅವರು ಸುಮ್ಮನೇ ಕುಳಿತುಕೊಳ್ಳುವ ಮಹಾಪುರುಷರು ಅಲ್ಲ. ತಿರುಗಿ ಎದ್ದರು. ಮಾನ್ಯ ಸಭಾನಾಯಕರಲ್ಲಿ ಅತ್ಯಂತ ಕಳಕಳಿಯ ಮನವಿ, ನಿನ್ನೆ ಒಂದು ಮಹಿಳಾ ಆಯೋಗವನ್ನು ರಚನೆ ಮಾಡುತ್ತಿದ್ದೇವೆ ಅದರ ಅಧ್ಯಕ್ಷರಾಗಿ ನೀವು ಇರಲೇಬೇಕು ಅಂತ ಹೇಳಿ ವಾಟಾಳ್ ನಾಗರಾಜ್‌ರವರನ್ನು ಕೇಳಿದ್ದೇನೆ. ಇದರ ಬಗ್ಗೆ ನೀವು ಏನು ಹೇಳುತ್ತೀರಿ ಅಂತ ಹೇಳಿ ಅವರನ್ನು ಪ್ರಶ್ನೆ ಮಾಡಿದರು. ಪಾಪ, ಅವರು ಬಹಳ ದೊಡ್ಡ ವ್ಯಕ್ತಿ ಬಿಡಿ. ಬಹಳ ದೊಡ್ಡ ವ್ಯಕ್ತಿ. ಮಾನ್ಯ ಅಧ್ಯಕ್ಷರು ಅವರನ್ನು ಕೇಳಿದರು. ಮಾನ್ಯ ಜೆ.ಎಚ್. ಪಟೇಲರನ್ನು ಕೇಳಿದರು. ಅವರು ಗಂಭೀರವಾಗಿ ಎದ್ದರು. ಮೇಲೆ. ಅವರಿಗೊಬ್ಬರಿಗೆ ಆ ತರಹ ವ್ಯಕ್ತಿತ್ವ ಇತ್ತು ಅಂತ ನನಗನ್ನಿಸುತ್ತದೆ. ಎದ್ದರು. ಎದ್ದ ತಕ್ಷಣ ಮಾನ್ಯ ಅಧ್ಯಕ್ಷರೇ, ವಾಟಾಳ್ ನಾಗರಾಜ್‌ರವರು ಶ್ರೀರಾಮನ ಕುಲಕ್ಕೆ ಸೇರಿದವರು, ನಾನು ಮತ್ತು ನಂಜೇಗೌಡರು ಕೃಷ್ಣನ ಕುಲಕ್ಕೆ ಸೇರಿದವರು, ಯಾರು ಅಧ್ಯಕ್ಷರಾಗಬೇಕು ಎನ್ನುವುದನ್ನು ನಾಳೆ ಮಾನ್ಯ ರಾಮಕೃಷ್ಣ ಹೆಗಡೆಯವರನ್ನು ಕೇಳಿ ಹೇಳುತ್ತೇನೆಂದು ಹೇಳಿಬಿಡುವುದೇ. ನನಗನ್ನಿಸುತ್ತದೆ ಮಾನ್ಯ ಜೆ.ಎಚ್. ಪಟೇಲ್ ಈ ರಾಜ್ಯದ, ಈ ದೇಶದ ದೊಡ್ಡ ಆಸ್ತಿ, ಏನು ಇಂಥಾದ್ದು ನೂರಾರು ಅವರು ದೊಡ್ಡ ಆಸ್ತಿ, ಇದರ ಬಗ್ಗೆ ಎರಡು ಅಭಿಪ್ರಾಯ ಇಲ್ಲ. ಅದು ಈ ರಾಜ್ಯದ ಒಂದು ದುರ್ದೈವ. ಅವರನ್ನು ಕಳೆದುಕೊಂಡಿದ್ದು. ಅವರ ವ್ಯಕ್ತಿತ್ವ ಒಂದೊಂದು ಅಲ್ಲ. ಇಂತಹವು ನೂರಾರು ಇವೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ವಾಟಾಳ್ ನಾಗರಾಜ್‌ರವರು ಅವರ ಮನೆಗೆ ನಾನು ಶ್ರೀರಾಮನ ಕುಲಕ್ಕೆ ಸೇರಿದವನು ಎನ್ನುವ ಸಂದೇಶವನ್ನು ಎಷ್ಟು ಸುಲಭವಾಗಿ ಕಳುಹಿಸಿದರು ನೋಡಿ. ಶ್ರೀ ರಾಮಚಂದ್ರನ ವಂಶಸ್ಥ ನಾನು ಅಂತ ಹೇಳಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಸಾರ್ ಸತ್ಯ ನಮಗೆ ಗೊತ್ತಿದೆ. ಉಳಿದ ವಿಚಾರಗಳನ್ನು ನಾವು ಚರ್ಚೆ ಏಕೆ ಮಾಡೋಣ ಬಿಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇದನ್ನು ನಾನು ಸಹಿಸಿಕೊಂಡು ಇರಲು ಸಾಧ್ಯವಿಲ್ಲ. ಇವರ ವಿಚಾರದ ಬಗ್ಗೆ ತಾವು ನನಗೆ ಅನುಮತಿ ಕೊಟ್ಟರೆ ಒಂದೊಂದಾಗಿ ಎಳೆಎಳೆಯಾಗಿ ಬಿಡಿಸಿ ಹೇಳುತ್ತೇನೆ. ಇವರು ಏನು? ಇವರ ವಿಚಾರ ಏನು? ಬೆಳಿಗ್ಗೆ ಏನು? ಮಧ್ಯಾಹ್ನ ಏನು? ರಾತ್ರಿ ಏನು ಅಂತ ಸಮಗ್ರವಾಗಿ ಹೇಳುತ್ತೇನೆ. ದಯವಿಟ್ಟು ನೀವು ಅವಕಾಶ ಕೊಡುವುದಾದರೆ ದಯಮಾಡಿ. ಈಗ ಮಾನ್ಯ ಪ್ರಕಾಶ್‌ರವರೇ, ನೀವೂ ಸ್ವಲ್ಪ ಹೇಳಿ ಅಧ್ಯಕ್ಷರಿಗೆ, ಮಾನ್ಯ ಯಡಿಯೂರಪ್ಪನವರಿಗೆ ಹೇಳುತ್ತೇನೆ ಸಹಕಾರ ಮಾಡಿ; ಮಾನ್ಯ ಮುಖ್ಯಮಂತ್ರಿಗಳು ಸಹಕಾರ ಮಾಡಿ, ಇವರ ವಿಚಾರ ಬಿಚ್ಚುತ್ತೇನೆ ಇಲ್ಲಿ. ಒಂದೊಂದಾಗಿ ಎಳೆಎಳೆಯಾಗಿ. ಏಕೆಂದರೆ ನಾವೇನಾದರೂ ಈಗ ಹೇಳಿದರೆ ಇವರು ಮನೆಗೆ ಹೋಗುವಂತೆ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ನೀವು ಒಪ್ಪಿಕೊಳ್ಳುವುದಕ್ಕೆ ಹೋಗಬೇಡಿ ಯಾಕೆಂದರೆ ನಿಮ್ಮ ಹೆಸರೂ ಕೃಷ್ಣನೇ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಕೆಲವೊಮ್ಮೆ ಇವೆಲ್ಲಾ ಬೇಕಾಗುತ್ತದೆ. ಪಾಪ, ಮುಖ್ಯಮಂತ್ರಿಗಳದ್ದು ಇನ್ನೂ ಚಿಕ್ಕ ವಯಸ್ಸು. ಈ ಪೇಪರ್ ಕಟಿಂಗ್ಸ್, ಇಂಟೆಲಿಜೆನ್ಸ್‌ನವರು ಕೊಡುವ ಮಾಹಿತಿ, ಈ ಗಲಾಟೆಗಳು, ಭಿನ್ನಮತದ ಚಟುವಟಿಕೆ, ಬೋರ್ಡ್‌ಕಾರ್ಪೊರೇಶನ್ಸ್ ಚೇರ್ಮನ್, ಅಧಿಕಾರಿಗಳ ಪೋಸ್ಟಿಂಗ್ಸ್ ಕೋರ್ಟ್ ಹಗರಣಗಳು, ಅವರ ಪ್ರಾಯವೆಲ್ಲಾ ಹೋಗಿಬಿಡುತ್ತದೆ ಈಗ. ಅದಕ್ಕೇ ಇವೆಲ್ಲಾ ಸಾವಿರ ಇದ್ದುಕೊಳ್ಳಲಿ. ಒಂದೂವರೆ ಎರಡು ಗಂಟೆ ನಿಮಗಾಗಿ ಅಂತ ಇಟ್ಟುಕೊಳ್ಳಿ. ಚಿಕ್ಕವಯಸ್ಸು, ಏನು ಬೇಕಾಗಿದ್ದರೂ ನೀವು ಸಂಪಾದನೆ ಮಾಡಬಹುದು, ವಯಸ್ಸು ವಾಪಸ್ ಬಾ ಅಂದರೆ ಬರುವುದಿಲ್ಲ. ನಾವು ಬುದ್ಧಿವಂತರಾಗದೆ ನಮ್ಮ ಅನುಭವದಿಂದ ಹೇಳುತ್ತಿದ್ದೇವೆ ಅದೆಲ್ಲಾ ಇದ್ದಾಗ ಸೀರಿಯಸ್ ಅಗಿಬಿಟ್ಟಿದ್ದೆವಲ್ಲಪ್ಪ ಅಂತ, ಹೆಚ್ಚು ಸೀರಿಯಸ್ಸಾಗಿ ಇರೋಕೆ ಹೋಗಬೇಡಿ. ಏನೂ ಆಗುವುದಿಲ್ಲ. ಹಡಗೇನೂ ಮುಳುಗಿಹೋಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನಿಮಗೆ ಹೇಗೆ ಗೊತ್ತು? ಅವರು ಮೌನವಾಗಿ ಕೂತಿದ್ದಾರೆ, ಗಂಭೀರವಾಗಿ ದೇವರು ಕೂತಂತೆ ಕೂತಿದ್ದಾರೆ.

ಶ್ರೀ ಕೆ. ಆರ್. ರಮೇಶ್ ಕುಮಾರ್ : ನಮಗೆ ಒಂದು ಅಂದಾಜು ಗೊತ್ತಿರುತ್ತೆ, ರೇವಣ್ಣನವರಿಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅವರು ಯಥಾವತ್ತಾಗಿ ದೇವೇಗೌಡರು. ಅವರಿಗೆ ಏನೂ ಬೇಕಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನೋಡಿ ರೇವಣ್ಣನವರಿಗೂ ನಿಮಗೂ ತಂದಿಟ್ಟುಬಿಟ್ಟರು.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ರೇವಣ್ಣನವರು ಏನೂ ತಲೆಕೆಡಿಸಿಕೊಳ್ಳುವ ಪೈಕಿಯಲ್ಲ. ಕುಮಾರಸ್ವಾಮಿಯವರು ಚೂರು ನಮ್ಮ ಹತ್ತಿರ ಬರುತ್ತಾರೆ. ಆದ್ದರಿಂದ ನಾನು ಲಘುವಾಗಿ ಹೇಳಿದೆ ಅಷ್ಟೇ. ಎಲ್ಲಾ ಇದ್ದೇ ಇರುತ್ತೆ, lighter veon ನಲ್ಲಿ ಹೇಳಿದೆ. ಆರೋಗ್ಯ ಮುಖ್ಯ, ಇದೆಲ್ಲಾ ಏನೂ ಶಾಶ್ವತವಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ದಯವಿಟ್ಟು ಪ್ರಕಾಶ್‌ರವರಲ್ಲಿ ನಾನು ಕೇಳಿಕೊಳ್ಳುತ್ತೇನೆ, ಇವರು ಹಿಂದೆ ಅಲ್ಲಿಂದ ಎದ್ದುಹೋಗಿದ್ದಾರಲ್ಲಾ, ಅದಕ್ಕೆ ಜೆ.ಎಚ್. ಪಟೇಲರು ಉತ್ತರ ಹೇಳಿದ್ದರಲ್ಲಾ ಅದನ್ನು ದಯವಿಟ್ಟು ಹೇಳಬೇಕು.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಅದು ಇನ್ನೊಂದು ದಿವಸಕ್ಕೆ; ಇರೋದೆಲ್ಲಾ ಇವತ್ತಿಗೇ ಹೇಳಿಬಿಟ್ಟರೆ ಮುಂದಕ್ಕೇನೂ ಸೆಶನ್ ಇರುವುದಿಲ್ಲವಾ? ಸದನ ಡಿಸಾಲ್ವ್ ಆಗುತ್ತಾ? ಅಧ್ಯಕ್ಷರೇ, ಯಡಿಯೂರಪ್ಪನವರನ್ನು ನಾನು ಬಹಳ ದಿವಸದಿಂದ ನೋಡುತ್ತಿದ್ದೇನೆ: ಅವರಿಗೆ ಕರ್ತವ್ಯ ನಿರ್ವಹಣೆ ವಿಚಾರಣೆಯಲ್ಲಿ ಮಹಾಛಲ, ಅಪೋಜಿಶನ್ ನಾಯಕರಾಗಿ ಇಲ್ಲಿ ಕೂತಾಗ ಅಷ್ಟು ಆವೇಶ ಸಿಟ್ಟು; ದೇವೇಗೌಡರು ಒಂದು ಇಂಟರ್‌ವ್ಯೂ ಕೊಟ್ಟು ಒಂದು ಮಾತು ಹೇಳಿದ್ದಾರೆ, ಬಿಜೆಪಿಯವರು ಕೆಲವು ಅಬ್‌ವಿಯಸ್ ರೀಸನ್ಸ್ ಅಥವಾ ಕನ್‌ಸಿಡರೇಶನ್ಸ್‌ಗೆ ಈ ವಿಚಾರದಲ್ಲಿ ನಮ್ಮ ಜತೆ ಸಹಮತ ತೋರಿಸುತ್ತಾ ಇಲ್ಲ ಅಂತ. ಏನವು ಅಬ್‌ವಿಯಸ್ ಕನ್‌ಸಿಡರೇನ್ಸ್? ನಮಗೂ ಆಸಕ್ತಿ, ರಾಜ್ಯದ ಜನತೆಯ ಶಾಸಕರಾಗಿದ್ದೇವೆ, ಅಂತಹ ನಿರ್ಬಂಧ ಏನಾದರೂ ಆ ಕಂಪನೀದು ನಿಮಗೆ ಇದೆಯಾ? ಇಲ್ಲಾಂದ್ರೆ ಯಾಕೆ ದೇವೇಗೌಡರೇ, ನಾವು ಕೋಯಲಿಶನ್ ಪಾರ್ಟ್‌ನರ್ಸ್; ನೀವು ನಿಮ್ಮ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು. ನಿಮ್ಮ ಚಿರಂಜೀವಿ ಜತೆ ನಾವು ಕೆಲಸ ಮಾಡುತ್ತಿದ್ದೇನೆ, ನಮ್ಮ ಬಗ್ಗೆ 123 ಹೀಗೆ ಮಾತನಾಡಬಹುದಾ? ಮಾತನಾಡಬಾರದು, ಅದು ಸತ್ಯವಲ್ಲ ಅಂತ ಆದರೂ ಹೇಳಬಹುದು. ಆದರೆ ನೀವು ಏನೂ ಹೇಳಿಲ್ಲ ಹಾಗಾಗಿ ನಾನು ಪ್ರಸ್ತಾಪ ಮಾಡಬೇಕಾಗಿದೆ. ಅಷ್ಟು ಸಿಟ್ಟು ಆವೇಶಕ್ಕೆ ಬರೋರು ಅಷ್ಟು ಗುರುತರವಾದ ಆಪಾದನೆ ನಿಮ್ಮ ಮೇಲೆ ಬಂದರೂ ಕೂಡ ಸುಮ್ಮನೆ ಇದ್ದುಬಿಟ್ಟರಲ್ಲಾ, ಈ ಅಧಿಕಾರ ಅನ್ನುವುದು ಐದಾರು ತಿಂಗಳಲ್ಲೇ ಒಬ್ಬ ಮನುಷ್ಯನನ್ನು ಇಷ್ಟು ಬದಲಾಯಿಸಿಬಿಡುತ್ತಾ ಎಂಬುದು ನನಗೆ ಆಶ್ಚರ್ಯ. ನಾನು ಎತ್ತಿ ಕಟ್ಟುತ್ತಾ ಇಲ್ಲ ಇರುವ ವಿಷಯ ಹೇಳುತ್ತಿದ್ದೇನೆ. ಅಧ್ಯಕ್ಷರೇ, ನಾನು ಮುಗಿಸುವ ಮೊದಲು ಮೂರೇ ನಿಮಿಷ. ನೈಸ್ ಕಂಪನಿಗೆ ವಕಾಲತ್ ಹಾಕುವ ಉದ್ದೇಶ ಪ್ರತ್ಯಕ್ಷವಾಗಿ ಆಗಲಿ ಪರೋಕ್ಷವಾಗಿ ಆಗಲಿ ನಮಗೆ ಇಲ್ಲ. ರಾಜ್ಯಕ್ಕೆ ಸಂಬಂಧಿಸಿದ, ಅದು ಖಾಸಗಿ ಕ್ಷೇತ್ರದ್ದಾಗಲಿ, ಸರ್ಕಾರಿ ಭೂಮಿಯಾಗಲಿ, ಒಂದು ಗುಂಟೆ ಜಮೀನು ಅವರ ಹತ್ತಿರ ಎಕ್ಸಸ್ ಇದ್ದರೂ ನಿರ್ದಾಕ್ಷಣ್ಯವಾಗಿ ಕ್ರಮ ತೆಗೆದುಕೊಳ್ಳಬಹುದು. ಯಾವ್ಯಾವ ಕಾಲಕ್ಕೆ ಯಾವ್ಯಾವ ಸನ್ನಿವೇಶದಲ್ಲಿ ಘೋಷಣೆಗಳನ್ನು ಮಾಡುವಾಗ ರಿಯಾಯ್ತಿಗಳನ್ನು ಕೊಡುವಾಗ ಅಧಿಕಾರವನ್ನು ಚಲಾಯಿಸುವಾಗ ಅವರು ಅಧಿಕಾರಿಗಳಾಗಿರಲಿ ಅಥವಾ ರಾಜಕಾರಣಿಗಳಾಗಿರಲಿ ತಪ್ಪು ಮಾಡಿರುವವರಿಗೆ ರಾಜ್ಯಕ್ಕೆ ದ್ರೋಹ ಮಾಡಿರುವಂಥವರಿಗೆ ನಿರ್ದಾಕ್ಷಿಣ್ಯವಾಗಿ ಶಿಕ್ಷೆ ಆಗುವುದಕ್ಕೆ ನೀವು ಸಿಬಿಐ ತನಿಖೆಗೆ ಮುಂದಾಗಬೇಕು. ಹಾಗೇನೇ ದಯಮಾಡಿ ನೀವು ಬಿಲ್ಲನ್ನು ಮಂಡಿಸಬೇಕು. ನಿಮ್ಮ ರಾಷ್ಟ್ರೀಯ ಅಧ್ಯಕ್ಷರಾದ ದೇವೇಗೌಡರೇ ಉದಯ ಟಿವಿಯಲ್ಲಿ ಸುಮಾರು ಒಂದೂವರೆ ಗಂಟೆ ಕಾಲ, ಮಾತನಾಡಿದ್ದಾರೆ. ಇಡೀ ರಾಜ್ಯದ ಜನ ನೋಡಿದ್ದಾರೆ. ಆ ಬಿಲ್ ಬಗ್ಗೆ ಪ್ರಸ್ತಾಪಮಾಡಿದ್ದಾರೆ. ದಯಮಾಡಿ ಬಿಲ್ಲನ್ನು ತನ್ನಿ. ಇಷ್ಟು ಹೇಳಿ ನನಗೆ ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಅಧ್ಯಕ್ಷರು : ನಾಳೆ ಇದನ್ನು ತೆಗೆದುಕೊಳ್ಳೋಣ. ಈಗ ಶಾಸನ ರಚನೆ.